24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 72 | ನವದೆಹಲಿ | ಬೆಲೆ ₹10 | ಸೆಪ್ಟಂಬರ್ 7 2026 ಸೋಮವಾರ

## ಒಳಪುಟಗಳಲ್ಲಿ

2029ರ ಲೋಕಸಭಾ ಚುನಾವಣೆಯಲ್ಲಿ ಇಂಡಿಯಾ ಕೂಟದ ನೇತೃತ್ವ ರಾಹುಲ್ ಗಾಂಧಿ ಹೆಗಲಿಗೆ: ಕೆ.ಸಿ.ವೇಣುಗೋಪಾಲ್ - ಪು.4

ಕೆಪಿಎಸ್‌ಸಿ ಪಶು ವೈದ್ಯಕೀಯ ಹುದ್ದೆ ನೇಮಕಾತಿ ಹಗರಣ ತನಿಖೆ: ಬೆಚ್ಚಿ ಬೀಳಿಸುವ ಮಾಹಿತಿ ಬಹಿರಂಗ - ಪು.5

ಹನಿ ನೀರಿಗೂ ಪರದಾಡಿದ ಕೌತಾ ಗ್ರಾಮಸ್ಥರಿಂದ ಪಂಚಾಯಿತ್ ಕಚೇರಿ ಮುತ್ತಿಗೆ - ಪು.6

ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಭಾಗಿಯಾದ, ಶಿಕ್ಷಕರಿಗೆ ಬಿಗ್ ರಿಲೀಫ್: ಅಮಾನತು ಆದೇಶಕ್ಕೆ ಕೆಎಟಿ ತಡೆ - ಪು.7

# ಉದ್ಯೋಗಿಗಳಾಗಬೇಡಿ, ಉದ್ಯೋಗದಾತರಾಗಿ: ಸಿಎಂ ಡಿಕೆಶಿ ಸಲಹೆ

### ಕೌಶಲ್ಯಾಭಿವೃದ್ಧಿ ಇಲಾಖೆಯ ವಿದೇಶ ಅಧ್ಯಯನ 2026ಕ್ಕೆ ಚಾಲನೆ

### 80ಕ್ಕೂ ಹೆಚ್ಚು ವಿವಿಗಳ 3,145 ವಿದ್ಯಾರ್ಥಿಗಳಿಗೆ ಅವಕಾಶ



**ಬೆಂಗಳೂರು, ಸೆ.6:** ನಮ್ಮಲ್ಲಿರುವ ಪ್ರತಿಭಾವಂತ ಮಾನವ ಸಂಪನ್ಮೂಲ, ದೇಶದ ಬೇರೆ ಯಾವುದೇ ರಾಜ್ಯಗಳಲ್ಲಿ ಇಲ್ಲ. ನಮ್ಮ ಮಕ್ಕಳು ಜಾಗತಿಕ ಮಟ್ಟದಲ್ಲಿ ಕಲಿಯಬೇಕು. ಅವರು ಕೇವಲ ಉದ್ಯೋಗಿಗಳಾಗುವುದಲ್ಲ, ಉದ್ಯೋಗದಾತರಾಗಬೇಕು ಎಂಬುದು ನಮ್ಮ ಬಯಕೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕೌಶಲ್ಯಾಭಿವೃದ್ಧಿ ಇಲಾಖೆ ವತಿಯಿಂದ ಬೆಂಗಳೂರಿನ ಅರಮನೆ ಮೈದಾನದಲ್ಲಿ ಭಾನುವಾರ ನಡೆದ "ವಿದೇಶದಲ್ಲಿ ಅಧ್ಯಯನ 2026" ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ದೇಶದ ಅಧ್ಯಯನಕ್ಕೆ ನಮ್ಮ ಸರ್ಕಾರ ಹೊಸ ಬಾಗಿಲು ತೆರೆದಿದೆ. ಶರಣ ಪ್ರಕಾಶ್ ಪಾಟೀಲ್ ನೇತೃತ್ವದಲ್ಲಿ ಸಾಗರತ್ತರ ಜ್ಞಾನ ಬೆಸೆಯುವಲ್ಲಿ ಅತ್ಯುತ್ತಮ ಕಾರ್ಯನಿರ್ವಹಿಸುತ್ತಿದ್ದಾರೆ. ಜ್ಞಾನದ ಮೇಲಿನ ಹೂಡಿಕೆ ಪ್ರತಿಯೊಬ್ಬರಿಗೂ ಅತ್ಯುತ್ತಮ ಆಸ್ತಿಯಾಗುತ್ತದೆ. ಮಾನವನಿಗೆ ಎಲ್ಲೆಗಳಿವೆ, ಆದರೆ ಜ್ಞಾನಕ್ಕೆ ಎಲ್ಲೆಗಲಿಲ್ಲ. ಜಾಗತಿಕ ಮಟ್ಟದ ಶಿಕ್ಷಣದ ಅವಕಾಶ ಪಡೆಯುವುದರಿಂದ ಮಾನಸಿಕವಾಗಿ ಬಲಿಷ್ಠರನ್ನಾಗಿಸುತ್ತದೆ" ಎಂದು ತಿಳಿಸಿದರು.

ರುಪರಪ ಹರಿಸದ, ದಾಯಾದಿ ದಕ್ಕಿಸದ, ಬೆಂಕಿಯಲ್ಲಿ ಸುಡದ, ನೀರಿನಲ್ಲಿ ನೆನೆಯದ, ಗುಪ್ತನಿಧಿ ವಿದ್ಯೆ ಎಂದು ನಮ್ಮ ಗುರುಗಳು ನಮಗೆ ಕಲಿಸಿದ್ದರು. ನಾವು ಕಲಿತ ವಿದ್ಯೆಯನ್ನು ಯಾರೂ ಕಸಿಯಲು ಸಾಧ್ಯವಿಲ್ಲ. ಸಚಿವರು ಹಾಗೂ ಸರ್ಕಾರ ನಿಮಗೆ ಜಾಗತಿಕ ಮಟ್ಟದಲ್ಲಿ ಅಧ್ಯಯನಕ್ಕೆ ಅವಕಾಶ ಕಲ್ಪಿಸಿ ನಿಮ್ಮ ಭವಿಷ್ಯವನ್ನು ಉಜ್ವಲಿಸುವಂತೆ ಮಾಡುತ್ತಿದೆ" ಎಂದರು.

ಬೆಂಗಳೂರು ಜಾಗತಿಕ ನಗರ. ಇಲ್ಲಿ 2 ಲಕ್ಷ ವಿದೇಶಿ ಪಾಸ್‌ಪೋರ್ಟ್‌ದಾರರು ಕೆಲಸ ಮಾಡುತ್ತಿದ್ದು, ಸಿಲಿಕಾನ್ ವ್ಯಾಲಿ ಕ್ಯಾಲಿಫೋರ್ನಿಯದಲ್ಲಿ 16 ಲಕ್ಷ ಐಟಿ ವೃತ್ತಿಪರರು ಇದ್ದರೆ, ಬೆಂಗಳೂರಿನಲ್ಲಿ 26 ಲಕ್ಷ ಐಟಿ ವೃತ್ತಿಪರರು ಇದ್ದಾರೆ. ಪ್ರತಿವರ್ಷ 1 ಲಕ್ಷಕ್ಕೂ ಹೆಚ್ಚು ಇಂಜಿನಿಯರ್‌ಗಳನ್ನು, 13,940 ವೈದ್ಯರನ್ನು ಉತ್ಪಾದನೆ ಮಾಡುತ್ತಿದ್ದು, ಇಷ್ಟು ದೊಡ್ಡ ಪ್ರಮಾಣದಲ್ಲಿ ಈ ಮಾನವ ಸಂಪನ್ಮೂಲವನ್ನು ಬೇರೆ ಎಲ್ಲೂ ತಯಾರಿಸುತ್ತಿಲ್ಲ" ಎಂದು ವಿವರಿಸಿದರು.

ಮಹಾತ್ಮಗಾಂಧಿ, ಅಂಬೇಡ್ಕರ್, ರಾಜಾರಾಮ್ ಮೋಹನ್ ರಾಯ್ ರಂತಹ ನಾಯಕರು ವಿದೇಶದಲ್ಲಿ ಓದಿ, ನಮ್ಮ ದೇಶವನ್ನು ಮುನ್ನಡೆಸಿದ್ದಾರೆ. ವಿದೇಶದ ವಿವಿಗಳಲ್ಲಿ ನಮ್ಮ ಮಕ್ಕಳಿಗೆ ಅಧ್ಯಯನಕ್ಕೆ ಅವಕಾಶ ಕಲ್ಪಿಸಲು ಕರ್ನಾಟಕ ಸರ್ಕಾರ ಈ ಅವಕಾಶ ಕಲ್ಪಿಸಿದೆ. ಈ ಕಾರ್ಯಕ್ರಮದಲ್ಲಿ 80ಕ್ಕೂ ಹೆಚ್ಚು ವಿವಿಗಳು ಭಾಗವಹಿಸಿದ್ದು, 300ಕ್ಕೂ ಹೆಚ್ಚು ವಿಷಯಗಳಲ್ಲಿ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ. ಜೊತೆಗೆ ಸರ್ಕಾರದ ವಿವಿಧ ಇಲಾಖೆಗಳಿಂದ ವಿಶೇಷ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ವಿವಿಧ ಬ್ಯಾಂಕ್‌ಗಳು ನೆರವು ನೀಡುತ್ತಿದ್ದು, 2 ಕೋಟಿ ರೂ. ವರೆಗೂ ಸಾಲ ಸೌಲಭ್ಯ ನೀಡುತ್ತಿವೆ. ರಾಜ್ಯದ ವಿದ್ಯಾರ್ಥಿಗಳು ಈ ಅವಕಾಶ ಸದುಪಯೋಗಪಡಿಸಿಕೊಂಡು ಬಲಿಷ್ಠವಾಗಬೇಕು. ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು" ಎಂದು ಕಿವಿಮಾತು ಹೇಳಿದರು.

ನಾವು ಕ್ವೀನ್ಸ್‌ಲ್ಯಾಂಡ್ ವಿ.ವಿ. ಜೊತೆಗೆ ಒಡಂಬಡಿಕೆ ಮಾಡಿಕೊಂಡಿದ್ದು, ವಿದೇಶದ ವಿವಿಗಳಲ್ಲಿ ವ್ಯಾಸಂಗ ಮಾಡಲು 3,145 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ನಮ್ಮ ಮಕ್ಕಳು ವಿದ್ಯಾಭ್ಯಾಸ ಮುಗಿಸಿದ್ದರೂ ಅವರು ಹೆಚ್ಚಿನ ಮಾಹಿತಿ ಪಡೆಯಲು ಇಲ್ಲಿಗೆ ಬನ್ನಿ ಎಂದು ಕರೆದಿರುವೆ" ಎಂದರು.

ನಿಮ್ಮ ಭವಿಷ್ಯ ರಾಜ್ಯದ ಭವಿಷ್ಯ, ನಿಮ್ಮ ಶಕ್ತಿ ದೇಶದ ಶಕ್ತಿ. ವಿದ್ಯಾರ್ಥಿಗಳು ನಮ್ಮ ಆಸ್ತಿಗಳು. ಇಡೀ ವಿಶ್ವ ನಮ್ಮನ್ನು ಗಮನಿಸುತ್ತಿದೆ. ಭಾರತವನ್ನು ಬೆಂಗಳೂರು, ಕರ್ನಾಟಕದ ಮೂಲಕ ನೋಡಲಾಗುತ್ತಿದೆ. ನಮ್ಮ ವಿದ್ಯಾರ್ಥಿಗಳ ಚುರುಕುತನವನ್ನು ವಿಶ್ವದ ಉದ್ಯಮಗಳ ನಾಯಕರು ಗಮನಿಸುತ್ತಿದ್ದಾರೆ. ನಮ್ಮಲ್ಲಿನ ಸಂಸ್ಕೃತಿ, ಇತಿಹಾಸ, ಬಾಂಧವ್ಯದ ಮೂಲಕ ನಮ್ಮ ಮಕ್ಕಳು ಉತ್ತಮ ಪ್ರಜೆಗಳಾಗುತ್ತಿದ್ದಾರೆ. ನೀವು ನಿಮ್ಮ ಮೂಲ ಮರೆಯಬಾರದು, ಮರೆತರೆ ಯಶಸ್ಸು ಸಿಗುವುದಿಲ್ಲ. ಹೀಗಾಗಿ ನೀವು ನಿಮ್ಮ ಪೋಷಕರು, ಶಿಕ್ಷಕರನ್ನು ಮರೆಯಬಾರದು" ಎಂದು ಹೇಳಿದರು.

ಬೆಂಗಳೂರಿನಲ್ಲಿ 1.40 ಕೋಟಿ ಜನಸಂಖ್ಯೆ ಇದ್ದು, ಭಾರದಲ್ಲಿ 140 ಅಂತಾರಾಷ್ಟ್ರೀಯ ಶಾಲೆಗಳಿದ್ದು, ಬೆಂಗಳೂರಿನಲ್ಲಿ 38 ಅಂತಾರಾಷ್ಟ್ರೀಯ ಶಾಲೆಗಳಿವೆ. ಇದು ಕರ್ನಾಟಕದ ಶಕ್ತಿ. ಕರ್ನಾಟಕ ದೇಶದ ಜ್ಞಾನದ ಕೇಂದ್ರವಾಗಿದೆ. ನಿಮ್ಮೆಲ್ಲರಿಗೂ ಯಶಸ್ಸು ಸಿಗಲಿ" ಎಂದು ಶುಭ ಕೋರಿದರು.

## ಕೇಂದ್ರಕ್ಕೆ ಬರಪರಿಹಾರ ಪ್ರಸ್ತಾವನೆ ಸಲ್ಲಿಸಲು ರಾಜ್ಯ ಸರ್ಕಾರ ಸಿದ್ಧತೆ: ಸಚಿವ ಈಶ್ವರ ಖಂಡ್ರೆ



**ಬೆಂಗಳೂರು, ಸೆ.6:** ಎಲ್‌ನಿನೋ ಹಿನ್ನೆಲೆಯಲ್ಲಿ ರಾಜ್ಯ ತೀವ್ರ ಮಳೆ ಕೊರತೆ ಎದುರಿಸಿದ್ದು, ಬರಗಾಲ ಆವರಿಸಿದೆ. ಈಗಾಗಲೇ 101 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ತಿಂಗಳಾಂತ್ಯಕ್ಕೆ ಇನ್ನೂ 100 ತಾಲೂಕುಗಳು ಬರ ಪಟ್ಟಿಗೆ ಸೇರ್ಪಡೆ ಯಾಗುವ ಸಾಧ್ಯತೆ ಇದೆ. ಕೇಂದ್ರಕ್ಕೆ ಬರ ಪರಿಹಾರದ ಪ್ರಸ್ತಾವನೆ ಸಲ್ಲಿಸಲು ರಾಜ್ಯ ಸರ್ಕಾರ ತಯಾರಿ ನಡೆಸುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ.

ಅದಕ್ಕೂ ಮುನ್ನ ಕೇಂದ್ರಕ್ಕೆ ಪತ್ರ ಬರೆದು ಹೆಚ್ಚಿನ ನೆರವು ನೀಡುವಂತೆ ಕೋರಿದೆ. ಆದರೆ, ಬರವಾಗಲಿ, ನೆರೆಯಾಗಲಿ ನಷ್ಟ ಪರಿಹಾರವಾಗಿ ರಾಜ್ಯಕ್ಕೆ ಕೇಂದ್ರದಿಂದ ಬಿಡುಗಡೆಯಾಗಿರುವುದು ಎಳ್ಳಷ್ಟು ಮಾತ್ರ. ಸದ್ಯ ಬರ ಮಾರ್ಗಸೂಚಿಯನ್ವಯ ಸತತ ಮೂರು ವಾರಗಳ ಕಾಲ ಮಳೆಯಾಗದ ಸುಮಾರು 100 ತಾಲೂಕುಗಳಲ್ಲಿ ವಾಸ್ತವಾಂಶ ವರದಿ ಮಾಡಲಾಗುತ್ತಿದೆ. ಸೆಪ್ಟೆಂಬರ್ ಅಂತ್ಯಕ್ಕೆ ಈ ಹೊಸ ತಾಲೂಕುಗಳು ಬರದ ಪಟ್ಟಿಗೆ ಸೇರ್ಪಡೆಯಾಗುವ ಸಾಧ್ಯತೆ ಹೆಚ್ಚಿದೆ. ಆ ಮೂಲಕ ಈ ಬಾರಿ 200 ತಾಲೂಕುಗಳನ್ನು ಬರ ತಾಲೂಕುಗಳೆಂದು ಘೋಷಿಸುವ ಸಾಧ್ಯತೆ ಹೆಚ್ಚಿದೆ ಎಂದು ತಿಳಿಸಿದ್ದಾರೆ.

### ಬರ ತಾಲೂಕುಗಳ ಅಂತಿಮ ಪಟ್ಟಿ ಸೆಪ್ಟೆಂಬರ್ ಅಂತ್ಯಕ್ಕೆ ಘೋಷಣೆ



ರಾಜ್ಯ ಸರ್ಕಾರ ಸೆಪ್ಟೆಂಬರ್ ಅಂತ್ಯಕ್ಕೆ ಬರ ತಾಲೂಕುಗಳ ಅಂತಿಮ ಪಟ್ಟಿ ಘೋಷಿಸಲಿದ್ದು, ಬಳಿಕ ಕೇಂದ್ರ ಸರ್ಕಾರದ ಮುಂದೆ ಎನ್‌ಡಿಆರ್‌ಎಫ್ ಮಾನದಂಡದ ಪ್ರಕಾರ ಪರಿಹಾರದ ಮನವಿ ಪತ್ರ ಸಲ್ಲಿಸಲಿದೆ ಎಂದು ಕಂದಾಯ ಸಚಿವ ಡಾ.ಜಿ. ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ. ಬರದ ಹಿನ್ನೆಲೆ ರಾಜ್ಯಕ್ಕೆ ಹೆಚ್ಚಿನ ಆರ್ಥಿಕ ನೆರವು ನೀಡುವಂತೆ ಕೋರಿ ಸಿಎಂ ಅವರು ಪ್ರಧಾನಿ ಮೋದಿಗೆ ಪತ್ರದ ಮೂಲಕ ಮನವಿ ಮಾಡಿದ್ದಾರೆ. ಈ ಬಾರಿ ರಾಜ್ಯದಲ್ಲಿ ಭೀಕರ ಬರಗಾಲ ಇರುವುದರಿಂದ ಹೆಚ್ಚಿನ ಅನುದಾನ ನೀಡುವಂತೆ ಕೇಂದ್ರವನ್ನು ಆಗ್ರಹಿಸಿದ್ದಾರೆ. ಕೇಂದ್ರದಿಂದ ಹೆಚ್ಚಿನ ನೆರವು ಕೋರಿ ಸರ್ವಪಕ್ಷ ನಿಯೋಗವನ್ನೂ ಪ್ರಧಾನಿ ಮುಂದೆ ಕೊಂಡೊಯ್ಯುವ ಇರಾದೆ ಮುಖ್ಯಮಂತ್ರಿಗಳದ್ದಾಗಿದೆ. ಈ ಹಿಂದಿನ ಅಂಕಿ-ಅಂಶ ನೋಡಿದರೆ ರಾಜ್ಯ ಬರ ಹಾಗೂ ನೆರೆಯಿಂದ ಅನುಭವಿಸಿದ ನಷ್ಟ ಬೆಟ್ಟದಷ್ಟಿದ್ದರೂ ಕೇಂದ್ರ ಎನ್‌ಡಿಆರ್‌ಎಫ್‌ನಡಿ ಬಿಡುಗಡೆ ಮಾಡಿರುವ ವಿಪತ್ತು ಪರಿಹಾರ ಮಾತ್ರ ಅತ್ಯಲ್ಪವಾಗಿದೆ ಎಂದಿದ್ದಾರೆ.

## ಸೆ.18ಕ್ಕೆ ಮಂಗಳೂರಿನಲ್ಲಿ ಮೊದಲ ಬಾರಿಗೆ ರಾಜ್ಯ ಸಚಿವ ಸಂಪುಟ ಸಭೆ



**ಮಂಗಳೂರು, ಸೆ.6:** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಇದೇ ಮೊದಲ ಬಾರಿಗೆ ರಾಜಧಾನಿ ಬೆಂಗಳೂರಿನಿಂದ ಹೊರಗೆ ಕರಾವಳಿ ನಗರಿ ಮಂಗಳೂರಿನಲ್ಲಿ ಸೆಪ್ಟಂಬರ್ 18ರಂದು ಮಹತ್ವದ ರಾಜ್ಯ ಸಚಿವ ಸಂಪುಟ ಸಭೆ ನಡೆಯಲಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಹಾಗೂ ಆರೋಗ್ಯ ಸಚಿವ ಯು.ಟಿ. ಖಾದರ್ ತಿಳಿಸಿದರು.

ಮಾಧ್ಯಮಗಳೊಂದಿಗೆ ಮಾತನಾಡಿದ ಯು.ಟಿ. ಖಾದರ್ ಅವರು, ಸಚಿವ ಸಂಪುಟ ಸಭೆಗೆ ಮಂಗಳೂರನ್ನು ಆಯ್ಕೆ ಮಾಡಿದ್ದಕ್ಕಾಗಿ ಸಿಎಂ, ಡಿಸಿಎಂ ಹಾಗೂ ಇಡೀ ಸಂಪುಟಕ್ಕೆ ಧನ್ಯವಾದಗಳು ಎಂದು ತಿಳಿಸಿದರು.

ಮಂಗಳೂರಿನಲ್ಲಿ ಸಭೆ ನಡೆಯುತ್ತಿರುವುದರಿಂದ ಕರಾವಳಿ ಭಾಗದ ಅಭಿವೃದ್ಧಿ ಮತ್ತು ಈ ಭಾಗದ ಪ್ರಮುಖ ಯೋಜನೆಗಳಿಗೆ ವಿಶೇಷ ಆದ್ಯತೆ ಹಾಗೂ ಒತ್ತು ಸಿಗಲಿದೆ ಎಂದು ಆಶಯ ವ್ಯಕ್ತಪಡಿಸಿದರು.

## ವಿದ್ಯಾರ್ಥಿಗಳ ಮುರಿದುಬಿದ್ದ ಕನಸುಗಳನ್ನು ಮರಳಿ ತರಲು ಸಾಧ್ಯವೇ?



ಪ್ರಧಾನಿ, ಬಿಹಾರ ಮುಖ್ಯಮಂತ್ರಿಗೆ ರಾಹುಲ್ ಗಾಂಧಿ ಪ್ರಶ್ನೆ

**ನವದೆಹಲಿ, ಸೆ.6:** ಬಿಹಾರದಲ್ಲಿ ಇತ್ತೀಚೆಗೆ ನಡೆದ ನೀಟ್ ಪ್ರತಿಭಟನೆಯ ವೇಳೆ ಗಾಯಗೊಂಡ ವಿದ್ಯಾರ್ಥಿಗಳ ಜತೆ ನಡೆಸಿದ ಮಾತುಕತೆಯ ವಿವರಗಳನ್ನು ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ವಿದ್ಯಾರ್ಥಿಗಳು ಸರ್ಕಾರದಿಂದ ಕೇವಲ ಶಿಕ್ಷಣ, ಉದ್ಯೋಗ ಮತ್ತು ಜವಾಬ್ದಾರಿಯನ್ನು ಮಾತ್ರ ಕೇಳಿದ್ದರು ಹಾಗೂ ಅವರಲ್ಲಿ ಕೆಲವರ ಮೇಲೆ ಎಕೆ-47 ಗನ್‌ನಿಂದ ಗುಂಡು ಹಾರಿಸಲಾಗಿದೆ ಎಂದು ಆರೋಪಿಸಿರುವ ಅವರು, ಗುಂಡೇಟಿನಿಂದ ಕಾಲಿಗೆ ಗಾಯಗೊಂಡ ವಿದ್ಯಾರ್ಥಿಯೊಬ್ಬನ ಸ್ಥಿತಿಯನ್ನು ಉಲ್ಲೇಖಿಸಿ, ಸೇನೆಗೆ ಸೇರಬೇಕೆಂಬ ಆತನ ಕನಸು ನಾಶವಾಗಿದೆ ಎಂದಿದ್ದಾರೆ.

ಒಬ್ಬ ವಿದ್ಯಾರ್ಥಿಯ ಕಾಲಿನ ಮೂಳೆ ಗುಂಡಿನೇಟಿನಿಂದ ಮುರಿದುಹೋಗಿದೆ. ಸೇನೆಗೆ ಸೇರಿ ದೇಶಸೇವೆ ಮಾಡಬೇಕೆಂಬ ಅವನ ಕನಸು ಕೂಡ ಮುಳುಗಿಹೋಗಿದೆ. ಇಬ್ಬರು ಇತರ ವಿದ್ಯಾರ್ಥಿಗಳ ಹೆಗಲಿಗೆ ಗುಂಡುಗಳು ತೂರಿಕೊಂಡು ಹೋಗಿವೆ ಎಂದು ಸಂದೇಶದಲ್ಲಿ ವಿವರಿಸಿದ್ದಾರೆ. ಇಷ್ಟೇ ಅಲ್ಲ ಮತ್ತಿಬ್ಬರು ವಿದ್ಯಾರ್ಥಿಗಳ ಹೆಗಲಿಗೂ ಗುಂಡು ತಗುಲಿದೆ ಎಂದು ಮಾಹಿತಿ ಹಂಚಿಕೊಂಡಿದ್ದಾರೆ.

ಈ ವಿದ್ಯಾರ್ಥಿಗಳು ಏನು ಅಪರಾಧ ಮಾಡಿದ್ದಾರೆಂದು ಅವರ ಮೇಲೆ ಗುಂಡು ಹಾರಿಸಲಾಯಿತು, ಅವರು ಸರ್ಕಾರದಿಂದ ಬಯಸಿದ್ದು ಕೇವಲ ಮೂರು ವಿಷಯ. ಅವು ಶಿಕ್ಷಣ, ಉದ್ಯೋಗ ಮತ್ತು ಹೊಣೆಗಾರಿಕೆ ಮಾತ್ರ. ವಿದ್ಯಾರ್ಥಿಗಳ ದೈಹಿಕ ಗಾಯಗಳು ಗುಣವಾದರೂ, ಅವರ ಮುರಿದುಬಿದ್ದ ಕನಸುಗಳನ್ನು ಮರಳಿ ತರಲು ಸಾಧ್ಯವೇ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಬಿಹಾರದ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿಯನ್ನು ರಾಹುಲ್‌ಗಾಂಧಿ ಪ್ರಶ್ನಿಸಿದ್ದಾರೆ.

ಅವರು ಅಪರಾಧಿಗಳಾಗಿರಲಿಲ್ಲ. ಅವರು ಬಡ ಕುಟುಂಬಗಳ ಮಕ್ಕಳಾಗಿದ್ದು, ತಮ್ಮ ಕುಟುಂಬದ ಕನಸುಗಳನ್ನು ಹೊತ್ತು ಓದಲು ಹೊರಬಂದಿದ್ದರು. ಕೆಲವರಿಗೆ ಉತ್ತಮ ಕೆಲಸ ಬೇಕಿತ್ತು, ಇನ್ನು ಕೆಲವರಿಗೆ ತಮ್ಮ ಕುಟುಂಬ ನಿರ್ವಹಣೆಯ ಜವಾಬ್ದಾರಿಯಿತ್ತು. ಗುಂಡೇಟಿನ ಗಾಯಗಳು ಮಾಯಬಹುದು. ಆದರೆ ಇವರ ಮನಸ್ಸಿನ ಆಳದಲ್ಲಿ ಮನೆ ಮಾಡಿರುವ ಭಯವನ್ನು ಗುಣಪಡಿಸುವ ಆಸ್ಪತ್ರೆ ಎಲ್ಲಿದೆ ಎಂದು ಪ್ರಶ್ನಿಸಿದ್ದಾರೆ.

## ಹೂಡಿಕೆ ಸೆಳೆಯಲು ಯೂರೋಪ್‌ಗೆ ತೆರಳಿದ ಸಚಿವ ಎಂ.ಬಿ. ಪಾಟೀಲ್

### ಇಂದಿನಿಂದ ಸೆ.12ರವರೆಗೆ ಫ್ರಾನ್ಸ್, ನೆದರ್‌ಲೆಂಡ್‌ನಲ್ಲಿ ರೋಡ್‌ಶೋ, ಮಾತುಕತೆ



**ಬೆಂಗಳೂರು, ಸೆ.6:** ರಾಜ್ಯಕ್ಕೆ ಹೆಚ್ಚಿನ ಬಂಡವಾಳ ಆಕರ್ಷಿಸುವ ಗುರಿಯೊಂದಿಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ನೇತೃತ್ವದ ಉನ್ನತ ಮಟ್ಟದ ನಿಯೋಗವು ಸೋಮವಾರದಿಂದ (ಸೆ.7) ಶುಕ್ರವಾರದವರೆಗೆ (ಸೆ.12) ಐದು ದಿನಗಳ ಕಾಲ ಫ್ರಾನ್ಸ್ ಮತ್ತು ನೆದರ್ಲೆಂಡ್ಸ್ ನಲ್ಲಿ ರೋಡ್-ಶೋ ಮತ್ತು ಮಾತುಕತೆ ನಡೆಸಲಿದೆ.

ಸಚಿವರ ನಿಯೋಗ ಭಾನುವಾರ ಬೆಳಗಿನ ಜಾವ ಫ್ರಾನ್ಸ್‌ಗೆ ಪ್ರಯಾಣ ಬೆಳೆಸಿತು. ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್.ಸೆಲ್ವಕುಮಾರ್, ಆಯುಕ್ತೆ ಖುಷ್ಬೂ ಗೋಯಲ್, ಕೆಐಎಡಿಬಿ ಸಿಇಒ ಗೋವಿಂದ ರೆಡ್ಡಿ, ಮುಖ್ಯಮಂತ್ರಿಗಳ ಉಪ ಕಾರ್ಯದರ್ಶಿ ಆರ್.ಯತೀಶ್ ಸೇರಿದಂತೆ ಇತರ ಅಧಿಕಾರಿಗಳು ನಿಯೋಗದಲ್ಲಿ ಇದ್ದಾರೆ.

ಫ್ರಾನ್ಸ್ ನಲ್ಲಿ ತಾವು ಸೋಮವಾರದಿಂದ ಬುಧವಾರದವರೆಗೆ ಇರಲಿದ್ದೇವೆ. ಈ ಅವಧಿಯಲ್ಲಿ ಫಾರ್ಮಸುಟಿಕಲ್ಸ್ ಕಂಪನಿಗಳಾದ ರಾಕೆಟ್ ಮತ್ತು ಎಲ್‌ಎಫ್ ಬಿ ಗ್ರೂಪ್, ಇನ್-ವಿಟ್ರೋ, ರೋಗ ನಿಧಾನ ಕ್ಷೇತ್ರದಲ್ಲಿ ಹೆಸರು ಮಾಡಿರುವ ಬಯೋಮೆರಿಕ್ಸ್, ಏರೋಸ್ಪೇಸ್ ಮತ್ತು ರಕ್ಷಣಾ ವಲಯದ ಅಗ್ರಗಣ್ಯ ಕಂಪನಿಗಳಾದ ಹಚಿನ್ಸನ್, ಸಾಫ್ರಾನ್, ಥೇಲ್ಸ್, ಲೀಸಿ, ಮತ್ತು ಜಿಕ್ಯಾಟ್, ಆಟೋಮೋಟಿವ್ ಕ್ಷೇತ್ರದ ಸೋಮ್ಫೀ, ಪ್ರಿಸಿಷನ್ ಎಂಜಿನಿಯರಿಂಗ್ ವಲಯದ ಮೆಕಾಕ್ರೋಮ್, ಹೈನುಗಾರಿಕೆ ವಲಯದ ಸೆವೆನ್ಸಿಯಾ, ಮೆಟೀರಿಯಲ್ಸ್ ಕ್ಷೇತ್ರದ ಆರ್ಕೆಮಾ ಮುಂತಾದ ಕಂಪನಿಗಳೊಂದಿಗೆ ಬಂಡವಾಳ ಹೂಡಿಕೆ ಕುರಿತು ಮಾತುಕತೆ ನಡೆಸಲಾಗುವುದು ಎಂದು ಅವರು ಮಾಹಿತಿ ನೀಡಿದ್ದಾರೆ.

ಸೆ.10 ಮತ್ತು 11ರಂದು ತಾವು ನೆದರ್ಲೆಂಡ್ಸ್‌ನಲ್ಲಿ ಸೆಮಿಕಂಡಕ್ಟರ್ ಕ್ಷೇತ್ರದ ನೆಕ್ಸ್ಪೀರಿಯಾ, ಅನಿಮಲ್ ನ್ಯೂಟ್ರಿಷನ್ ಕ್ಷೇತ್ರದ ರಾಯಲ್ ಡಿ ಹ್ಯೂಸ್, ರಾಯಲ್ ಬೋಸ್ಕಾಲಿಸ್, ಬ್ರೂವರೀಸ್ ಕ್ಷೇತ್ರದ ರಾಯಲ್ ಸ್ವಿಂಕೆಲ್ಸ್, ಚಾಕಲೇಟ್ ಕ್ಷೇತ್ರದ ಪರ್ಫೆಟ್ಟಿ ವ್ಯಾನ್ ಮೆಲ್ ಕಂಪನಿಗಳೊಂದಿಗೆ ರಾಜ್ಯದಲ್ಲಿ ಬಂಡವಾಳ ಹೂಡುವ ಬಗ್ಗೆ ವಿಚಾರ ವಿನಿಮಯ ನಡೆಸಲಾಗುವುದು ಎಂದು ಸಚಿವ ಪಾಟೀಲ ವಿವರಿಸಿದ್ದಾರೆ.

ರಾಜ್ಯಕ್ಕೆ ಹೆಚ್ಚು ಬಂಡವಾಳ ಬಂದು, ಉದ್ಯೋಗ ಸೃಷ್ಟಿ ಆಗಬೇಕೆಂದರೆ ನಾವೇ ಹೂಡಿಕೆದಾರರು ಇರುವಲ್ಲಿಗೆ ಹೋಗಬೇಕು. ಇಲ್ಲದೆ ಹೋದರೆ ಉದ್ಯಮಿಗಳು ಬೇರೆಬೇರೆ ರಾಜ್ಯಗಳಿಗೆ ಹೋಗಿಬಿಡುತ್ತಾರೆ. ನೆರೆಹೊರೆಯ ರಾಜ್ಯಗಳಿಂದ ತೀವ್ರ ಸ್ಪರ್ಧೆ ಇರುವುದರಿಂದ ಕಳೆದ ಮೂರು ವರ್ಷಗಳಿಂದ ನಾನಾ ದೇಶಗಳು ಮತ್ತು ರಾಜ್ಯಗಳಲ್ಲಿ ರೋಡ್-ಶೋ ಮತ್ತು ಮಾತುಕತೆ ನಡೆಸಲಾಗುತ್ತಿದೆ. ಫ್ರಾನ್ಸ್ ಮತ್ತು ನೆದರ್ಲೆಂಡ್ಸ್ ಪ್ರವಾಸ ಇದರ ಮುಂದುವರಿದ ಭಾಗವಾಗಿದೆ. ಇದೊಂದು ನಿರಂತರ ಉಪಕ್ರಮವಾಗಿದೆ ಎಂದು ಅವರು ನುಡಿದಿದ್ದಾರೆ.

ಹೂಡಿಕೆದಾರರಿಗೆ ರಾಜ್ಯದ ತಯಾರಿಕಾ ಮತ್ತು ರಫ್ತು ಕೇಂದ್ರಿತ ಹೊಸ ಕೈಗಾರಿಕಾ ನೀತಿ, ಏಕಗವಾಕ್ಷಿ ಪದ್ಧತಿಯಡಿ ಒದಗಿಸುವ ತ್ವರಿತ ಸೇವೆಗಳು, ನಾವು ಕೊಡುತ್ತಿರುವ ಪ್ರೋತ್ಸಾಹನಾ ರಿಯಾಯಿತಿಗಳು, ಭೂಮಿ, ನೀರು, ವಿದ್ಯುತ್, ವಿಮಾನ ನಿಲ್ದಾಣ ಮುಂತಾದ ಸೌಲಭ್ಯಗಳು, ಕೈಗಾರಿಕಾ ಸೌಲಭ್ಯ ತಿದ್ದುಪಡಿ ಕಾಯ್ದೆ, ಇಂಧನ ಮತ್ತು ಇ.ವಿ. ನೀತಿ ಮುಂತಾದವುಗಳನ್ನು ಮನದಟ್ಟು ಮಾಡಿಕೊಡಲಾಗುವುದು ಎಂದು ಪಾಟೀಲ ಹೇಳಿದ್ದಾರೆ.

# ದೆಹಲಿಯಲ್ಲಿ ಆರು ಮಹಡಿಗಳ ಪಿ.ಜಿ. ಕಟ್ಟಡ ಕುಸಿದು ಮೂವರ ದುರ್ಮರಣ, 11 ಮಂದಿ ರಕ್ಷಣೆ

**ನವದೆಹಲಿ, ಸೆ.6:** ನೈಋತ್ಯ ದೆಹಲಿಯ ಸತ್ಯ ನಿಕೇತನ ಬಳಿ ಭಾನುವಾರ ಪಿಜಿ ಕಟ್ಟಡ ಕುಸಿದು 3 ಜನರು ಸಾವನ್ನಪ್ಪಿದ್ದು, ಹಲವಾರು ಜನರು ಗಾಯಗೊಂಡಿದ್ದಾರೆ, ಇದುವರೆಗೆ 11 ಜನರನ್ನು ರಕ್ಷಿಸಲಾಗಿದೆ, ಇದು ಸ್ಥಳದಲ್ಲಿ ಪ್ರಮುಖ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ. ಸಿಕ್ಕಿಬಿದ್ದವರ ನಿಜವಾದ ಸಂಖ್ಯೆ ತಿಳಿದಿಲ್ಲ. ದೆಹಲಿ ಪೊಲೀಸರು ತನಿಖೆಯನ್ನು ಪ್ರಾರಂಭಿಸಿದ್ದಾರೆ ಮತ್ತು ಘಟನೆಗೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸುವ ಪ್ರಕ್ರಿಯೆಯಲ್ಲಿದ್ದಾರೆ. ಸತ್ಯ ನಿಕೇತನ ಪ್ರದೇಶದ ಶಿವ ಮಂದಿರ ಬಳಿ ಮಧ್ಯಾಹ್ನ 1:30 ರ ಸುಮಾರಿಗೆ ಕಟ್ಟಡ ಕುಸಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸ್ಥಳವು ಹೆಚ್ಚಿನ ವಿದ್ಯಾರ್ಥಿಗಳ ವಾಸಸ್ಥಳವಾಗಿದ್ದು, ದೆಹಲಿ ವಿಶ್ವವಿದ್ಯಾಲಯದ ದಕ್ಷಿಣ ಕ್ಯಾಂಪಸ್‌ಗೆ ಸಮೀಪದಲ್ಲಿರುವ ಕಾರಣ ಅನೇಕ ವಿದ್ಯಾರ್ಥಿಗಳು ಪಿಜಿ ವಸತಿಗಳಲ್ಲಿ ವಾಸಿಸುತ್ತಿದ್ದಾರೆ. ದೆಹಲಿ ಪೊಲೀಸರ ಪ್ರಕಾರ, ದುರಸ್ತಿ ಕಾರ್ಯ ನಡೆಯುತ್ತಿತ್ತು ಮತ್ತು ಉತ್ಖನನದ ನಂತರ ಕಂಬವನ್ನು ಸ್ಥಳಾಂತರಿಸಲಾಗಿದೆ ಎಂದು ವರದಿಯಾಗಿದೆ, ಇದು ಅಂತಿಮವಾಗಿ ರಚನೆ ಕುಸಿಯಲು ಕಾರಣವಾಯಿತು. ಐದು ದಶಕಗಳಿಗಿಂತಲೂ ಹಳೆಯದು ಎಂದು ನಂಬಲಾದ ಹಳೆಯ ಕಟ್ಟಡವು ವಿದ್ಯಾರ್ಥಿಗಳಿಗೆ ಪಿ.ಜಿ.ಯಾಗಿ ಕಾರ್ಯನಿರ್ವಹಿಸುತ್ತಿತ್ತು. ಸತ್ಯ ನಿಕೇತನ ಜನನಿಬಿಡ ಪ್ರದೇಶದಲ್ಲಿ ವಿದ್ಯಾರ್ಥಿಗಳ ವಸತಿಗಾಗಿ ಬಳಸಲಾಗುವ ಹಳೆಯ ಕಟ್ಟಡಗಳ ಸುರಕ್ಷತೆ ಮತ್ತು ನಿರ್ವಹಣೆಯ ಬಗ್ಗೆಯೂ ಈ ಪ್ರಕರಣವು ಕೆಲವು ಸಮಸ್ಯೆಗಳನ್ನು ಹುಟ್ಟುಹಾಕುತ್ತದೆ. ಅವಶೇಷಗಳ ಅಡಿಯಲ್ಲಿ ಇನ್ನೂ ಸಿಲುಕಿರುವ ಯಾರನ್ನಾದರೂ ತಂಡಗಳು ಹುಡುಕುತ್ತಲೇ ಇರುವುದರಿಂದ ರಕ್ಷಣಾ ಕಾರ್ಯಾಚರಣೆ ಪ್ರಮುಖ ಆದ್ಯತೆಯಾಗಿದೆ.

### ರಾಜಧಾನಿಯ ಸತ್ಯನಿಕೇತನ್ ಪ್ರದೇಶದಲ್ಲಿ ಅವಘಡ

### 75 ಹಾಸಿಗೆಗಳ ಪೇಯಿಂಗ್ ಗೆಸ್ಟ್ ನಡೆಯುತ್ತಿದ್ದ ಕಟ್ಟಡ



### ಯಾರನ್ನೂ ಬಿಡುವುದಿಲ್ಲ: ಸಿಎಂ ರೇಖಾ ಗುಪ್ತಾ ಪ್ರತಿಜ್ಞೆ

ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಭಾನುವಾರ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ನಿರ್ಣಯಿಸಲು ಮತ್ತು ನಡೆಯುತ್ತಿರುವ ಶೋಧ ಮತ್ತು ರಕ್ಷಣಾ ಪ್ರಯತ್ನಗಳನ್ನು ಮೇಲ್ವಿಚಾರಣೆ ಮಾಡಿದರು. ಕುಸಿತಕ್ಕೆ ಕಾರಣರಾದವರು ಕ್ರಮ ಎದುರಿಸಬೇಕಾಗುತ್ತದೆ ಎಂದು ಗುಪ್ತಾ ಸ್ಪಷ್ಟಪಡಿಸಿದರು. ಕಟ್ಟಡದ ಮಾಲೀಕರಿಗೆ ಮತ್ತು ತಮ್ಮ ಕರ್ತವ್ಯಗಳನ್ನು ನಿರ್ಲಕ್ಷಿಸಿರುವ ಯಾವುದೇ ಅಧಿಕಾರಿಗೆ ಜವಾಬ್ದಾರಿ ವಿಸ್ತರಿಸಬಹುದು ಎಂದು ಹೇಳಿದರು. "ಇದಕ್ಕೆ ಕಾರಣರಾದವರು, ಅದು ಕಟ್ಟಡದ ಮಾಲೀಕರಾಗಿರಲಿ ಅಥವಾ ಅಧಿಕಾರಿಯಾಗಿರಲಿ, ಅವರನ್ನು ಬಿಡಲಾಗುವುದಿಲ್ಲ" ಎಂದು ಅವರು ಹೇಳಿದರು. ಆಡಳಿತವು ಮೊದಲು ರಕ್ಷಿಸಲ್ಪಟ್ಟವರ ಸ್ಥಿತಿಯನ್ನು ನಿರ್ಣಯಿಸುತ್ತದೆ ಮತ್ತು ಮುಂದಿನ ಕ್ರಮಕ್ಕೆ ಮುಂದುವರಿಯುವ ಮೊದಲು ಇನ್ನೂ ಸಿಲುಕಿರುವವರನ್ನು ಉಳಿಸುವತ್ತ ಗಮನಹರಿಸುತ್ತದೆ ಎಂದು ಮುಖ್ಯಮಂತ್ರಿ ಹೇಳಿದರು.

### ಪ್ರಧಾನಿ ಮೋದಿ ಸಂತಾಪ



ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಈ ಘಟನೆಗೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. "ದೆಹಲಿಯ ಸತ್ಯ ನಿಕೇತನದಲ್ಲಿ ಕಟ್ಟಡ ಕುಸಿತದ ಘಟನೆ ತೀವ್ರ ದುಃಖಕರವಾಗಿದೆ. ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ನನ್ನ ಸಂತಾಪಗಳು. ಗಾಯಗೊಂಡವರು ಶೀಘ್ರ ಗುಣಮುಖರಾಗಲೆಂದು ಪ್ರಾರ್ಥಿಸುತ್ತೇನೆ. ಅಧಿಕಾರಿಗಳು ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದುರಂತದಲ್ಲಿ ಸಂತ್ರಸ್ತರಾದವರಿಗೆ ಸಹಾಯ ಮಾಡುತ್ತಿದ್ದಾರೆ" ಎಂದು ಪ್ರಧಾನಮಂತ್ರಿಗಳ ಕಾರ್ಯಾಲಯ ಹೇಳಿಕೆ ಹಂಚಿಕೊಂಡಿದೆ.

### ದೆಹಲಿ ಸಿಎಂ ಕಳವಳ



ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ಕಟ್ಟಡ ಕುಸಿತಕ್ಕೆ ತೀವ್ರ ಕಳವಳ ವ್ಯಕ್ತಪಡಿಸಿದ್ದು, ರಕ್ಷಣಾ ಕಾರ್ಯವನ್ನು ಯುದ್ಧೋಪಾದಿಯಲ್ಲಿ ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಮುನ್ನೆಚ್ಚರಿಕಾ ಕ್ರಮವಾಗಿ ಪಕ್ಕದ ಕಟ್ಟಡವನ್ನು ಖಾಲಿ ಮಾಡಿಸಲಾಗಿದೆ. ಸಿಲುಕಿಕೊಂಡಿರುವವರನ್ನು ಸುರಕ್ಷಿತವಾಗಿ ರಕ್ಷಿಸಲು ಮತ್ತು ಸಂತ್ರಸ್ತ ಕುಟುಂಬಗಳಿಗೆ ತಕ್ಷಣದ ನೆರವು ನೀಡಲು ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಪರಿಸ್ಥಿತಿಯನ್ನು ಹತ್ತಿರದಿಂದ ಮೇಲ್ವಿಚಾರಣೆ ಮಾಡಲಾಗುತ್ತಿದ್ದು, ಎಲ್ಲಾ ಸಂಬಂಧಿತ ಸಂಸ್ಥೆಗಳು ಸಮನ್ವಯದಿಂದ ಕೆಲಸ ಮಾಡುತ್ತಿವೆ. ಪ್ರತಿಯೊಬ್ಬ ನಾಗರಿಕನ ಸುರಕ್ಷತೆ ಮತ್ತು ಕ್ಷೇಮ ನಮ್ಮ ಮೊದಲ ಆದ್ಯತೆಯಾಗಿದೆ ಎಂದಿದ್ದಾರೆ.

## ನಿತ್ಯ ಪಂಚಾಂಗ 7.09.2026 ಸೋಮವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಗ್ರೀಷ್ಮ ಋತು, ಚಾಂದ್ರಮಾನ ಶ್ರಾವಣ–ಬಾದ್ರಪದ ಮಾಸ

ಶ್ರಾವಣ ಬಹುಳ, ಏಕಾದಶಿ, ಪುನರ್ವಸು ನಕ್ಷತ್ರ, ಸರ್ವತ್ರ/ಅಜಾ ಏಕಾದಶಿ, ಮುದ್ದಾಪುರ ರಥ, ಆಗಸ್ತ್ಯ ಉದಯ, ಬಿಸಿಲಹಳ್ಳಿ ರಥ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

## ನನ್ನನ್ನು, ಮುಖ್ಯಮಂತ್ರಿಯನ್ನು ನಿಂದಿಸುವುದೇ ಕೆಲವರ ಕೆಲಸ ಸಚಿವ ಚಲುವರಾಯಸ್ವಾಮಿ ಕಿಡಿ



ಮಂಡ್ಯ, ಸೆ.6: ನನ್ನನ್ನು ಹಾಗೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಗುರಿಯಾಗಿಸಿಕೊಂಡು ನಿಂದಿಸುವುದಕ್ಕಾಗಿಯೇ ಒಂದು ರಾಜಕೀಯ ಪಕ್ಷ, ಮಾಜಿ ಮುಖ್ಯಮಂತ್ರಿ ಮತ್ತು ಹಿರಿಯ ನಾಯಕತ್ವ ನಿರಂತರವಾಗಿ ಕೆಲಸ ಮಾಡುತ್ತಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಂಡ್ಯ ತಾಲೂಕಿನ ಕೊಪ್ಪದಲ್ಲಿ ಆಯೋಜಿಸಲಾಗಿದ್ದ ಸಾರ್ವಜನಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿಪಕ್ಷಗಳ ರಾಜಕೀಯ ನಡವಳಿಕೆ ಹಾಗೂ ಕ್ಷೇತ್ರದ ಪ್ರಸ್ತುತ ಸ್ಥಿತಿಗತಿಗಳ ಬಗ್ಗೆ ತಮ್ಮ ಅಸಮಾಧಾನವನ್ನು ಹೊರಹಾಕಿದರು. ರಾಜ್ಯದಲ್ಲಿ ಮುಂಬರುವ ದಿನಗಳಲ್ಲೂ ಕಾಂಗ್ರೆಸ್ ಸರ್ಕಾರವೇ ಮತ್ತೆ ಅಧಿಕಾರಕ್ಕೆ ಬರಲಿದ್ದು, ಡಿ.ಕೆ. ಶಿವಕುಮಾರ್ ಅವರು ಸಿಎಂ ಆಗಲಿದ್ದಾರೆ ಎಂದು ಸಚಿವರು ವಿಶ್ವಾಸ ವ್ಯಕ್ತಪಡಿಸಿದರು.

ತಮ್ಮ ಸರ್ಕಾರ ನೀಡಿದ ಐದು ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೆ ತರಲಾಗಿದೆ. ಬಿಜೆಪಿ–ಜೆಡಿಎಸ್ ಆಡಳಿತ ಅವಧಿಯಲ್ಲಿ ಆರಂಭವಾಗಿದ್ದ ಯಾವುದೇ ಜನಪರ ಯೋಜನೆಗಳನ್ನು ನಿಲ್ಲಿಸಿಲ್ಲ. ತಾವು ಮಾಡಿದ ಕೆಲಸಗಳನ್ನಷ್ಟೇ ಹೇಳಿಕೊಳ್ಳುವುದಾಗಿ ತಿಳಿಸಿದರು.

**ಎಚ್‌ಡಿಕೆ ಹೇಳಿಕೆಗೆ ಕಿಡಿ**

ಜೆಡಿಎಸ್ ನಾಯಕರ ನಡೆಯನ್ನು ಖಂಡಿಸಿದ ಸಚಿವರು, ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಅವರು ಜಿಲ್ಲೆಗೆ ಆಗಮಿಸಿ ಯಾವುದೋ ಒಂದು ಹೇಳಿಕೆ ನೀಡಿ ತೆರಳುತ್ತಾರೆ. ಅವರ ಕಾರ್ಯಕರ್ತರು ಅದನ್ನೇ ಹಿಡಿದುಕೊಂಡು ದಿನವಿಡೀ ರಾಜಕೀಯ ಮಾಡುತ್ತಾ ಕಾಲ ಕಳೆಯುತ್ತಾರೆ ಎಂದು ಲೇವಡಿ ಮಾಡಿದರು.ಕ್ಷೇತ್ರದ ಜನರ ಮುಂದೆ ಭಾವುಕ ಮನವಿ– ಹತ್ತು ವರ್ಷಗಳ ಕಾಲ ಶಾಸಕನಾಗಿ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದರೂ, ಚುನಾವಣೆಯಲ್ಲಿ ಗೆಲ್ಲಲು ಹೆಣಗಾಡ ಬೇಕಾದ ಪರಿಸ್ಥಿತಿ ಬಂದಿರುವುದು ದುರಂತ. ಬೆಳಿಗ್ಗೆಯಿಂದ ಸತತವಾಗಿ ಕೆಲಸ ಮಾಡಿ ಬಂದಿರುವ ತಮ್ಮ ನೋವನ್ನು ಪಕ್ಷದ ವರಿಷ್ಠರ ಬಳಿ ಹೇಳಿಕೊಳ್ಳಲು ಸಾಧ್ಯವಿಲ್ಲ. ಮಂತ್ರಿ ಸ್ಥಾನ ನೀಡಿರುವ ವರಿಷ್ಠರು ತಮಗೆ ಗೌರವ ಕೊಟ್ಟಿದ್ದಾರೆ. ಹೀಗಾಗಿ ತಮ್ಮ ಕಷ್ಟಗಳನ್ನು ಆಲಿಸಿ ಬೆಂಬಲಕ್ಕೆ ನಿಲ್ಲಬೇಕಾದವರು ಕ್ಷೇತ್ರದ ಜನರೇ ಎಂದು ಭಾವುಕರಾಗಿ ಮನವಿ ಮಾಡಿದರು.

## ಇಂದಿರಾ ಕಿಟ್ ಯೋಜನೆ ಸ್ಥಗಿತಗೊಳಿಸಿದರೆ ಉಗ್ರ ಹೋರಾಟ: ಅಶೋಕ್ ಎಚ್ಚರಿಕೆ

ಬೆಂಗಳೂರು, ಸೆ.6: ಬೆಲೆ ಏರಿಕೆ ನೆಪವೊಡ್ಡಿ ಬಡವರಿಗೆ ನೀಡುವ ಇಂದಿರಾ ಕಿಟ್ ಯೋಜನೆಯನ್ನು ನಿಲ್ಲಿಸಲು ಮುಂದಾಗಿರುವ ರಾಜ್ಯ ಸರ್ಕಾರದ ಕ್ರಮ ಸರಿಯಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಇಂದಿರಾ ಕಿಟ್ ಯೋಜನೆಯ ಟೆಂಡರ್ ಪ್ರಕ್ರಿಯೆಯನ್ನು ಉದ್ದೇಶ ಪೂರ್ವಕವಾಗಿಯೇ ವಿಳಂಬಗೊಳಿಸಿ, ತಮಗೆ ಇಷ್ಟಬಂದವರಿಗೆ ಗುತ್ತಿಗೆ ನೀಡುವ ಸಂಚನ್ನು ಸರ್ಕಾರ ರೂಪಿಸುತ್ತಿದೆ ಎಂದು ತಿಳಿಸಿದ್ದಾರೆ.

ಬಡವರ ಹೆಸರಿನಲ್ಲಿ ರಾಜಕೀಯ ಲಾಭ ಪಡೆದುಕೊಳ್ಳಲು ಮುಂದಾಗಿರುವ ಕಾಂಗ್ರೆಸ್ ಸರ್ಕಾರ ಈ ಯೋಜನೆಯನ್ನು ನಿಲ್ಲಿಸಲು ಮುಂದಾಗಿರುವ ನಡೆ, ಒಳ್ಳೆಯ ಬೆಳವಣಿಗೆಯಲ್ಲ. ಕೊಟ್ಟ ಮಾತಿನಂತೆ ಪಾರದರ್ಶಕವಾಗಿ ಇಂದಿರಾ ಕಿಟ್ ಯೋಜನೆಯನ್ನು ಆರಂಭಿಸಿ, ಇಲ್ಲದಿದ್ದರೇ ರಾಜ್ಯಾದ್ಯಂತ ಹೋರಾಟ ನಡೆಸುವುದಾಗಿ ಎಚ್ಚರಿಸಿದ್ದಾರೆ.

# ಪ್ರತಿಪಕ್ಷಗಳಿಗೆ ನಮ್ಮ ಗುಪ್ತನಿಧಿಯಲ್ಲಿ ಏನೇನಿದೆ ಎಂಬುದು ಗೊತ್ತಿಲ್ಲ: ಸಿಎಂ ಡಿ.ಕೆ.ಶಿವಕುಮಾರ್

**ಸಾಮಾಜಿಕ ನ್ಯಾಯಕ್ಕೆ ಕಾಂಗ್ರೆಸ್ ಬದ್ಧ**

**ಶಿಕ್ಷಣ, ವೈದ್ಯಕೀಯ ಹಾಗೂ ಉನ್ನತ ಶಿಕ್ಷಣ ಸಚಿವರ ಸಂಪುಟ ಉಪಸಮಿತಿ ರಚನೆ**

**ಪರೀಕ್ಷಾ ವ್ಯವಸ್ಥೆಯಲ್ಲಿ ಶಿಸ್ತು, ಪಾರದರ್ಶಕತೆಗೆ ಸರ್ಕಾರದ ಒತ್ತು**




ಹೈಕೋರ್ಟ್ ನ್ಯಾಯಮೂರ್ತಿ ಜಯಂತ್ ಬ್ಯಾನರ್ಜಿ, ಮಧ್ಯಪ್ರದೇಶ ಹೈಕೋರ್ಟ್ ನ್ಯಾಯಾಧೀಶರು ಹಾಗೂ ಸ್ಟಾಕ್ ವಿಟ್ನೆಸ್ ರಿಫಾರ್ಮ್ಸ್ ಕಮಿಟಿಯ ಅಧ್ಯಕ್ಷ ವಿವೇಕ್ ಅಗರ್ವಾಲ್, ಬೆಂಗಳೂರಿನ ಭಾರತದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅರವಿಂದ ಕಾಮತ್, ಕರ್ನಾಟಕ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ ಶೆಟ್ಟಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಸ್ಟಾಕ್ ವಿಟ್ನೆಸ್ ರಿಫಾರ್ಮ್ಸ್ ಕಮಿಟಿಯ ಸದಸ್ಯ ಎಸ್. ರಾಜಶೇಖರ್, ಎಸ್.ಡಿ. ಸಂಜಯ್ ಮತ್ತಿತರರು ಹಾಜರಿದ್ದರು.

ಬೆಂಗಳೂರು, ಸೆ.6: ವಿಪಕ್ಷಗಳು ಏನು ಬೇಕಾದರೂ ಹೇಳಲಿ. ನಮ್ಮ ಗುಪ್ತನಿಧಿಯಲ್ಲಿ ಇನ್ನೂ ಏನೇನಿದೆ ಎಂದು ಅವರಿಗೆ ಗೊತ್ತಿಲ್ಲ. ವಿರೋಧ ಪಕ್ಷಗಳು ಕನಸು ಕಾಣಲಿ, ಹಗಲುಗನಸು ಬೇಡ. ಕನಸು ಕಾಣುವುದು ತಪ್ಪಲ್ಲ" ಸಿಎಂ ಡಿ ಕೆ ಶಿವಕುಮಾರ್ ಅವರು ಲೇವಡಿ ಮಾಡಿದರು. ಅರಮನೆ ಮೈದಾನದಲ್ಲಿ ಶಿವಕುಮಾರ್ ಅವರು ಮಾಧ್ಯಮಗಳ ಪ್ರಶ್ನೆಗಳಿಗೆ ಭಾನುವಾರ ಪ್ರತಿಕ್ರಿಯೆ ನೀಡಿದರು.

ಪ್ರಿಯಾಂಕ್ ಖರ್ಗೆ ಅವರ ರಾಜಿನಾಮೆಗೆ ವಿಪಕ್ಷಗಳು ಪಟ್ಟು ಹಿಡಿದಿರಿರುವ ಬಗ್ಗೆ ಕೇಳಿದಾಗ, "ಅವರುಗಳು ಯಾವುದೇ ಬಾಂಬ್ ಬೇಕಾದರೂ ಸಿಡಿಸಲಿ. ನಾನು ಆತುರದಲ್ಲಿಲ್ಲ. ನಾನು ವೈಯಕ್ತಿಕ ವಿಚಾರಗಳಿಗೆ ಹೋಗುವುದಿಲ್ಲ. ಕೆಪಿಎಸ್ ಸಿಗೆ ಅಧ್ಯಕ್ಷರನ್ನು ನೇಮಕ ಮಾಡಿದವರು ಯಾರು? ಯಾರು ಸೇರಿಕೊಂಡಿದ್ದಾರೆ? ಯಾರು ಹೊಣೆ, ಯಾರು ಭಾಗಿಯಾಗಿದ್ದಾರೆ? ಜಮೀನು ಖರೀದಿ ಸೇರಿದಂತೆ ಹಲವು ಆರೋಪಗಳ ಬಗ್ಗೆ ಈಗಲೇ ಯಾವುದೇ ಹೇಳಿಕೆ ನೀಡುವುದಿಲ್ಲ" ಎಂದರು.

"ತನಿಖೆ ನಡೆಯುತ್ತಿದ್ದು, ತನಿಖೆಯ ವರದಿ ಮೊದಲು ಬರಲಿ. ಬಳಿಕ ದಾಖಲೆ ಸಮೇತ ಯಾರು ಮಾತನಾಡಬೇಕೋ ಅವರು ಮಾತನಾಡುತ್ತಾರೆ. ಅವರ ನಡೆಯನ್ನು 'ಹಿಟ್ ವಿಕೆಟ್' ಎಂದು ಕರೆಯುತ್ತಾರೆ. ರಾಜ್ಯದ ಅಭಿವೃದ್ಧಿ, ರೈತರ ಸಮಸ್ಯೆ, ವಿದ್ಯಾರ್ಥಿಗಳ ಭವಿಷ್ಯ ಹಾಗೂ ಪರೀಕ್ಷಾ ವ್ಯವಸ್ಥೆಯ ಬಗ್ಗೆ ಚರ್ಚೆಯಾಗಬೇಕು. ರಾಜ್ಯದ ಅಭಿವೃದ್ಧಿಯೇ ನನ್ನ ಆದ್ಯತೆ ಎಂದು ಹೇಳಿದರು. ದೆಹಲಿ ಭೇಟಿ ವೇಳೆ ಸಂಪುಟ ವಿಸ್ತರಣೆ ಚರ್ಚೆ ಮಾಡುವಿರಾ ಎಂದಾಗ, "ಈ ವಿಚಾರ ಚರ್ಚೆಯಲ್ಲಿಯೇ ಇಲ್ಲ. ಅದು ಆಗಬೇಕಾದ ಕಾಲಕ್ಕೆ ಆಗುತ್ತದೆ" ಎಂದರು

**ಸಾಮಾಜಿಕ ನ್ಯಾಯಕ್ಕೆ ಕಾಂಗ್ರೆಸ್ ಬದ್ಧ**

ಹಿಂದುಳಿದ ಜಾತಿಗಳ ಸಮಾವೇಶ ಹಾಗೂ ಮಧುಸೂಧನ್ ನಾಯ್ಕ್ ವರದಿ ಜಾರಿಗೆ ಒತ್ತಾಯಿಸುತ್ತಿರುವ ಬಗ್ಗೆ ಕೇಳಿದಾಗ, "ಅಹಿಂದ ನಮ್ಮದು. ಕಾಂಗ್ರೆಸ್ ಸಿದ್ಧಾಂತ ಅಹಿಂದ ಸಿದ್ಧಾಂತ. ಹಿಂದುಳಿದ ವರ್ಗಗಳ ವಿಚಾರದಲ್ಲಿ ಕಾಂಗ್ರೆಸ್ ತನ್ನ ಸಿದ್ಧಾಂತದಂತೆ ಮುಂದುವರಿಯಲಿದೆ. ರಾಹುಲ್ ಗಾಂಧಿ ಅವರ ಮಾರ್ಗದರ್ಶನದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್ ಹಾಗೂ ಸಚಿವರು ಒಗ್ಗಟ್ಟಿನಿಂದ ಸಾಮಾಜಿಕ ನ್ಯಾಯಕ್ಕಾಗಿ ಕೆಲಸ ಮಾಡುತ್ತಿದ್ದಾರೆ" ಎಂದು ಹೇಳಿದರು.

**ಇಬ್ಬರು ವಿದೇಶಿ ಕನ್ನಡಿಗರಿಗೆ ರಾಜ್ಯೋತ್ಸವ ಪ್ರಶಸ್ತಿ**

ಅಕ್ಕ ಸಮ್ಮೇಳನಕ್ಕೆ ನೀಡಿದ ಸಂದೇಶದ ಬಗ್ಗೆ ಕೇಳಿದಾಗ, "ವಿದೇಶಗಳಲ್ಲಿ ಕನ್ನಡ ಭಾಷೆ, ಸಂಸ್ಕೃತಿ, ಸಂಘಟನೆಗಳನ್ನು ಬೆಳೆಸುತ್ತಿರುವ ಕನ್ನಡಿಗರನ್ನು ಗುರುತಿಸುವ ನಿಟ್ಟಿನಲ್ಲಿ ರಾಜ್ಯೋತ್ಸವ ಪ್ರಶಸ್ತಿಗಳಲ್ಲೂ ಅವಕಾಶ ಕಲ್ಪಿಸುವ ನಿರ್ಧಾರ ಕೈಗೊಳ್ಳಲಾಗಿದೆ.

ಅಮೆರಿಕ ಮಾತ್ರವಲ್ಲ, ವಿಶ್ವದಾದ್ಯಂತ ಕನ್ನಡಕ್ಕಾಗಿ ಕೆಲಸ ಮಾಡುತ್ತಿರುವವರನ್ನು ಗುರುತಿಸಬೇಕು. ವಿದೇಶಗಳಲ್ಲಿ ಕನ್ನಡ ಸಂಘಟನೆಗಳನ್ನು ಕಟ್ಟಿಕೊಂಡು ಭಾಷೆ, ನಾಡು ಮತ್ತು ಸಂಸ್ಕೃತಿಯನ್ನು ಪ್ರತಿನಿಧಿಸುತ್ತಿರುವವರು ನಮ್ಮ ಹೆಮ್ಮೆ. ಅಂತಹ ಎಲ್ಲ ಕನ್ನಡಿಗರಿಗೆ ಸರ್ಕಾರದ ಪರವಾಗಿ ಗೌರವ ಸಲ್ಲಿಸುತ್ತೇನೆ? ಎಂದು ಹೇಳಿದರು.

ಯಾರಿಗೆ ಧ್ವನಿ ಇಲ್ಲ, ಯಾರು ನೊಂದಿದ್ದಾರೆ, ಯಾರಿಗೆ ನ್ಯಾಯ ಒದಗಿಸಬೇಕು ಎಂಬುದನ್ನು ಗುರುತಿಸಿ ಅವರ ಪರವಾಗಿ ನಿಲ್ಲುವುದು ಕಾಂಗ್ರೆಸ್ ಸಿದ್ಧಾಂತ. ಎಲ್ಲ ವರ್ಗದ ಜನರಿಗೆ ರಕ್ಷಣೆ ಮತ್ತು ನ್ಯಾಯ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಮುಂದುವರಿಯಲಿದೆ? ಎಂದರು.

**ವಿದ್ಯಾರ್ಥಿ ಹಿತಕ್ಕಾಗಿ ಶಿಕ್ಷಣ ವ್ಯವಸ್ಥೆ ಸುಧಾರಣೆ**

"ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಸಮಗ್ರ ಸುಧಾರಣೆ ತಂದು ವಿದ್ಯಾರ್ಥಿಗಳು ಹಾಗೂ ಯುವಜನತೆಗೆ ಹೆಚ್ಚಿನ ಅವಕಾಶ ಕಲ್ಪಿಸುವ ಉದ್ದೇಶದಿಂದ ಶಿಕ್ಷಣ, ವೈದ್ಯಕೀಯ ಶಿಕ್ಷಣ ಮತ್ತು ಉನ್ನತ ಶಿಕ್ಷಣ ಸಚಿವರನ್ನು ಒಳಗೊಂಡ ಸಂಪುಟ ಉಪಸಮಿತಿ ರಚಿಸಲಾಗಿದೆ" ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ಹೇಳಿದರು. "ಯುವಜನರ ಭವಿಷ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂಬುದು ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಸಂದೇಶ. ಶಿಕ್ಷಣ ವ್ಯವಸ್ಥೆಯನ್ನು ಹೇಗೆ ಸುಧಾರಿಸಬೇಕು, ವಿದ್ಯಾರ್ಥಿಗಳಿಗೆ ಹೇಗೆ ನೆರವಾಗಬೇಕು ಎಂಬ ಕುರಿತು ಈಗಾಗಲೇ ಹಲವು ವಿಚಾರಗಳನ್ನು ಚರ್ಚಿಸಲಾಗಿದ್ದು, ಸಂಪುಟ ಉಪಸಮಿತಿ ಈ ನಿಟ್ಟಿನಲ್ಲಿ ಮಾರ್ಗದರ್ಶನ ನೀಡಲಿದೆ" ಎಂದರು.

**ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕ ಮುಂಚೂಣಿ**

"ಕರ್ನಾಟಕ ಪ್ರತಿಭೆಯ ತವರು ರಾಜ್ಯ. ದೇಶದ ಶಿಕ್ಷಣ ಕ್ಷೇತ್ರದಲ್ಲಿ ರಾಜ್ಯವು ಹಲವು ದಶಕಗಳಿಂದ ಮುಂಚೂಣಿಯಲ್ಲಿದೆ. ಸುಪ್ರೀಂಕೋರ್ಟ್ ದೆಹಲಿಯಲ್ಲಿದೆ ಆದರೆ ರಾಷ್ಟ್ರೀಯ ಕಾನೂನು ಶಾಲೆ ನಮ್ಮಲ್ಲಿದೆ. ಭಾರತೀಯ ವಿಜ್ಞಾನ ಸಂಸ್ಥೆ ಸೇರಿದಂತೆ ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ಬೆಂಗಳೂರಿನಲ್ಲಿ ಸ್ಥಾಪನೆಯಾಗಿರುವುದು ರಾಜ್ಯದ ಶೈಕ್ಷಣಿಕ ಸಾಮರ್ಥ್ಯಕ್ಕೆ ಸಾಕ್ಷಿ" ಎಂದು ಹೇಳಿದರು.

ಈ ಸಾಮರ್ಥ್ಯವನ್ನು ಮತ್ತಷ್ಟು ವಿಸ್ತರಿಸಿ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಕರ್ನಾಟಕದ ಮುನ್ನಡೆಯನ್ನು ಹೆಚ್ಚಿಸಬೇಕು. ಜಾಗತಿಕ ಶಿಕ್ಷಣ ವ್ಯವಸ್ಥೆಯೊಂದಿಗೆ ಸ್ಪರ್ಧಿಸುವ ಮಟ್ಟಕ್ಕೆ ನಮ್ಮ ಯುವಜನರನ್ನು ಸಜ್ಜುಗೊಳಿಸಬೇಕು. ರಾಜೀವ್ ಗಾಂಧಿ ಅವರು ಶಿಕ್ಷಣ ಕ್ಷೇತ್ರದಲ್ಲಿ ದೂರದೃಷ್ಟಿಯ ಬದಲಾವಣೆ ತಂದರು. ಭಾರತ ಇಂದು ಅಂತರರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯೊಂದಿಗೆ ಸ್ಪರ್ಧಿಸುವ ಸಾಮರ್ಥ್ಯ ಹೊಂದಿದೆ" ಎಂದು ಹೇಳಿದರು.

**ನೀಟ್, ಕೆಪಿಎಸ್‌ಸಿ ಪರೀಕ್ಷೆಗಳಲ್ಲಿ ಶಿಸ್ತು**

"ನೀಟ್, ಕೆಪಿಎಸ್‌ಸಿ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಾರದರ್ಶಕತೆ ಮತ್ತು ಶಿಸ್ತು ಕಾಪಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ. ಪರೀಕ್ಷಾ ಪ್ರಕ್ರಿಯೆಗಳನ್ನು ಮತ್ತಷ್ಟು ಪರಿಶುದ್ಧವಾಗಿ ನಡೆಸಬೇಕು ಎಂಬ ಕುರಿತು ಈಗಾಗಲೇ ಚರ್ಚಿಸಿ ಮಾರ್ಗಸೂಚಿಗಳನ್ನು ರೂಪಿಸಲಾಗಿದೆ" ಎಂದು ತಿಳಿಸಿದರು.

# ಹೆಲಿಕಾಪ್ಟರ್‌ನಲ್ಲಿ ಓಡಾಡುವುದರಿಂದ ಪ್ರಜಾಸೇವಕನಾಗಲು ಸಾಧ್ಯವಿಲ್ಲ



ಭಾನುವಾರದ ಕಾರ್ಯಕ್ರಮಕ್ಕೆ ತೆರಳುವ ಮೊದಲು ವಿಜಯೇಂದ್ರ ಅವರು ಮರಾಳಿ ಗ್ರಾಮದಲ್ಲಿನ ಕುರುಬ ಶಿಬಿರಕ್ಕೆ ಭೇಟಿ ನೀಡಿದರು. ನಂತರ ಸಮುದಾಯದವರೊಂದಿಗೆ ಅವರ ಕಷ್ಟಗಳ ಬಗ್ಗೆ ಮಾತನಾಡಿದರು ಮತ್ತು ಅವರೊಂದಿಗೆ ಸ್ವಲ್ಪ ಸಮಯ ಕಳೆದರು. ಬರಗಾಲದಿಂದ ಉಂಟಾದ ಬೆಳೆ ನಷ್ಟದ ಬಗ್ಗೆ ರೈತರೊಂದಿಗೆ ಅವರು ಸಂವಾದ ನಡೆಸಿದರು ಮತ್ತು ಪ್ರಸ್ತಾವಿತ ನವಲಿ ಸಮತೋಲನ ಜಲಾಶಯದ ಅಗತ್ಯದ ಬಗ್ಗೆ ಚರ್ಚಿಸಿದರು.

**ಬಿಜೆಪಿ ಪಾದಯಾತ್ರೆ ಬಳಿಕ ಉತ್ತರ ಕರ್ನಾಟಕದತ್ತ ಮುಖ ಮಾಡಿದ ಸಿಎಂ: ಬಿ.ವೈ. ವಿಜಯೇಂದ್ರ ವ್ಯಂಗ್ಯ**

ಗಂಗಾವತಿ, ಸೆ.6: ಪಾದಯಾತ್ರೆ ಆರಂಭಿಸಿದ ಬಳಿಕವೇ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉತ್ತರ ಕರ್ನಾಟಕದತ್ತ ಬರುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವ್ಯಂಗ್ಯವಾಡಿದರು.

ಬಳ್ಳಾರಿ ಚಲೋ ಪಾದಯಾತ್ರೆ ನಡುವೆ ಗಂಗಾವತಿಯ ಜಂಗಮರ ಕಲ್ಗುಡಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಅವರು ತಮ್ಮನ್ನು 'ನಾಡಿನ ದೊರೆ' ಎಂದು ಕರೆಯಬೇಡಿ, 'ಪ್ರಜಾಸೇವಕ' ಎಂದು ಕರೆಯಿರಿ ಎಂದು ಹೇಳಿದ್ದಾರೆ. ಆದರೆ, ಕಳೆದ ಮೂರು ತಿಂಗಳಿಂದ ಬೆಂಗಳೂರಿನಲ್ಲೇ ಇದ್ದ ಮುಖ್ಯಮಂತ್ರಿ, ಬಿಜೆಪಿ ಪಾದಯಾತ್ರೆ ಆರಂಭಿಸದಿದ್ದರೆ ಉತ್ತರ ಕರ್ನಾಟಕದತ್ತ ಬರುತ್ತಿದ್ದರೇ ಎಂಬುದನ್ನು ಜನರೇ ಪ್ರಶ್ನಿಸುತ್ತಿದ್ದಾರೆ. ಸೂಟು–ಬೂಟು ಧರಿಸಿ ಹೆಲಿಕಾಪ್ಟರ್‌ನಲ್ಲಿ ಓಡಾಡುವುದರಿಂದ ಮಾತ್ರ ಪ್ರಜಾಸೇವಕರಾಗಲು ಸಾಧ್ಯವಿಲ್ಲ ಎಂದು ಟೀಕಿಸಿದರು.

ಮುಖ್ಯಮಂತ್ರಿಗಳ ಜೀವನದ ಬಹುದೊಡ್ಡ ಆಸೆಗಳು ಬಿಡದಿ ಟೌನ್‌ಶಿಪ್ ಮತ್ತು ಕನಕಪುರ ವಿಮಾನ ನಿಲ್ದಾಣ ಯೋಜನೆಗಳಾಗಿವೆ ಎಂದು ಕಾಣುತ್ತಿದೆ. ಈ ಎರಡೂ ಯೋಜನೆಗಳು ಪೂರ್ಣಗೊಂಡರೆ ಮುಂದೆ ಮುಖ್ಯಮಂತ್ರಿ ಆಗಿದ್ದರೂ, ಇಲ್ಲದಿದ್ದರೂ ಪರವಾಗಿಲ್ಲ ಎಂಬ ಲೆಕ್ಕಾಚಾರ ಅವರಲ್ಲಿರುವಂತಿದೆ ಎಂದು ವ್ಯಂಗ್ಯವಾಡಿದರು.

ಬಡವರ ಬಿಪಿಎಲ್ ಕಾರ್ಡ್‌ಗಳ ಸಂಖ್ಯೆಯನ್ನು ಕಡಿಮೆ ಮಾಡಲಾಗುತ್ತಿದೆ. ಇದರಿಂದ ಲಕ್ಷಾಂತರ ಬಡವರು ಬೀದಿಗೆ ಬರುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಸರ್ಕಾರಕ್ಕೆ ಮನುಷ್ಯತ್ವ ಇದೆಯೇ ಎಂದು ಪ್ರಶ್ನಿಸಿದರು. ರಾಜ್ಯದಲ್ಲಿ ಬರ ಪರಿಹಾರ ನೀಡಿಲ್ಲ. ಗ್ರಾಮೀಣ ಪ್ರದೇಶಗಳ ಶಾಲೆಗಳಲ್ಲಿ ಶಿಕ್ಷಕರಿಲ್ಲ, ಆಸ್ಪತ್ರೆಗಳಲ್ಲಿ ವೈದ್ಯರಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಮುಖ್ಯಮಂತ್ರಿಗಳನ್ನು ಪ್ರಜಾಸೇವಕ ಎಂದು ಹೇಗೆ ಕರೆಯಲು ಸಾಧ್ಯ. ಜಾಹೀರಾತೇ ಬೇರೆ, ಕಾರ್ಯಕ್ರಮವೇ ಬೇರೆ ಎಂಬಂತಾಗಿದೆ. ಜನರಿಗೆ ಹತ್ತಿರವಾಗುವ ಕಾರ್ಯಕ್ರಮಗಳು ಹಾಗೂ ಬಡವರಿಗೆ ಅನುಕೂಲವಾಗುವ ಯೋಜನೆಗಳನ್ನು ನೀಡಿದಾಗ ಮಾತ್ರ ಜನರು ಮುಖ್ಯಮಂತ್ರಿಯನ್ನು ಪ್ರಜಾಸೇವಕ ಎನ್ನುತ್ತಾರೆ ಎಂದರು.

### ಡಿ.ಕೆ.ಶಿವಕುಮಾರ್ ಓರ್ವ ವ್ಯಾಪಾರಿ ಸಿಎಂ: ಶ್ರೀರಾಮುಲು ಟೀಕೆ



ಡಿ.ಕೆ.ಶಿವಕುಮಾರ್ ಓರ್ವ ವ್ಯಾಪಾರಿ ಸಿಎಂ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿಯ ಬಳ್ಳಾರಿ ಚಲೊ ಪಾದಯಾತ್ರೆ 6ನೇ ದಿನದ ಅಂಗವಾಗಿ ನಗರದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಎಲ್ಲವನ್ನೂ ವ್ಯಾಪಾರ ದೃಷ್ಟಿಯಿಂದ ನೋಡುತ್ತಾರೆ ಎಂದು ಟೀಕಿಸಿದರು.

ಜನಸೇವೆ ಎಂದರೇನು? ಕಲ್ಯಾಣ ಕರ್ನಾಟಕದ ಬಡವರು ಹೇಗಿದ್ದಾರೆ ಎಂಬ ಕಳಕಳಿ ಅವರಿಗೆ ಇಲ್ಲ; ಸಂಕಷ್ಟದಲ್ಲಿರುವ ಜನರಿಗೆ ಪರಿಹಾರ ಕೊಡಬೇಕು ಎಂಬ ಯೋಚನೆಯೂ ಅವರಿಗೆ ಇಲ್ಲ ಎಂದು ದೂರಿದರು.ಬೆಳಗಾದರೆ ಸಾಕು ಎಷ್ಟು ದುಡಿಯಬೇಕೆಂದು ಯೋಚಿಸುತ್ತಾರೆ. ವ್ಯಾಪಾರವೇ ಬೇರೆ; ಜನಸೇವೆಯೇ ಬೇರೆ ಎಂಬುದನ್ನು ತಿಳಿದುಕೊಳ್ಳಬೇಕೆಂದು ಹೇಳಿದರು. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಜನರ ಸೇವೆ ಮಾಡುವ ವ್ಯಕ್ತಿಯಾಗಿದ್ದರು. ಅವರು ರಾಜೀನಾಮೆ ಕೊಡಲು ಎರಡು ತಿಂಗಳ ಸಮಯ ಕೇಳಿದ್ದರೂ ಬಿಡದೆ ಡಿಕೆಶಿ ಅಧಿಕಾರ ಕಿತ್ತುಕೊಂಡರು ಎಂದು ಟೀಕಿಸಿದರು.ಶಾಸಕ ಜನಾರ್ದನ ರೆಡ್ಡಿ ತಾಕತ್ತಿನ ಬಗ್ಗೆ ಮಾಜಿ ಸಚಿವ ಬಿ. ನಾಗೇಂದ್ರ ಮಾತನಾಡುತ್ತಾರೆ ಎಂದು ಆಕ್ಷೇಪಿಸಿದರು. ಇವರನ್ನು ಲಘುವಾಗಿ ಪರಿಗಣಿಸದಿರಿ ಎಂದು ಎಚ್ಚರಿಕೆ ನೀಡಿದರು.

# ಚುನಾವಣಾ ರಾಜಕೀಯದಿಂದ ಮಾತ್ರ ನಿವೃತ್ತಿ: ಮಾಜಿ ಸಿಎಂ ಸಿದ್ದರಾಮಯ್ಯ



ಬೆಂಗಳೂರು, ಸೆ.6: ಸಕ್ರಿಯ ರಾಜಕೀಯದಲ್ಲಿ ಇರುತ್ತೇನೆ. ನಿಮ್ಮ ಜೊತೆ ಹೋರಾಟ ಮಾಡುತ್ತೇನೆ. ಚುನಾವಣಾ ರಾಜಕೀಯದಿಂದ ಮಾತ್ರ ನಾನು ನಿವೃತ್ತಿ ಹೊಂದುತ್ತೇನೆ. ನಮ್ಮ ಚುನಾವಣೆ ವ್ಯವಸ್ಥೆ ಈಗ ದುಬಾರಿಯಾಗಿದೆ. ಚುನಾವಣೆ ವ್ಯವಸ್ಥೆ ಸುಧಾರಣೆ ಆಗಬೇಕು ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಹೇಳಿದರು.

ಬೆಂಗಳೂರು ಅರಮನೆ ಮೈದಾನದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟವು ಆಯೋಜಿಸಿದ್ದ ಸಮಾವೇಶದಲ್ಲಿ ಮಾತನಾಡಿ, ನನಗೆ ವಯಸ್ಸು ಆಯ್ತು ಎಂಬ ಕಾರಣಕ್ಕೆ ಚುನಾವಣೆ ನಿಲ್ಲಲ್ಲ ಅಂತ ಎಂದಿಲ್ಲ. ಆದರೆ, ಚುನಾವಣೆ ವ್ಯವಸ್ಥೆ ಬಹಳ ಹದಗೆಟ್ಟಿದೆ, ಆ ಕಾರಣಕ್ಕೆ ಸ್ಪರ್ಧಿಸಲ್ಲ ಎಂದು ಹೇಳಿದ್ದೇನೆ ಹೊರತು ಬೇರೆ ಕಾರಣಕ್ಕೆ ಅಲ್ಲ. ನಿಮಗೆ ನ್ಯಾಯ ಸಿಗುವವರೆಗೆ, ನಿಮಗೆಲ್ಲರಿಗೂ ಸಮಾನ ಅವಕಾಶ ಸಿಗುವವರೆಗೆ ನಿಮ್ಮ ಜೊತೆ ಇದ್ದು, ಹೋರಾಟ ಮಾಡುತ್ತೇನೆ. ಯಾರೂ ಆತಂಕ ಪಡುವ ಅಗತ್ಯ ಇಲ್ಲ ಎಂದು ತಿಳಿಸಿದರು.

**ಜಾತಿ ಸಮೀಕ್ಷೆ ವರದಿ ಶಿಫಾರಸು ಜಾರಿಗೆ ಸಿಎಂಗೆ ಮನವಿ**

ಜಾತಿ ಸಮೀಕ್ಷೆ ವರದಿ ಶಿಫಾರಸುಗಳನ್ನು ಜಾರಿಗೊಳಿಸುವಂತೆ ಮಾಜಿ ಸಿಎಂ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಡಿ. ಕೆ.ಶಿವಕುಮಾರಗೆ ಮನವಿ ಮಾಡಿದ್ದಾರೆ. ನಾನು 1996ರಲ್ಲಿ ಡಿಸಿಎಂ ಆಗಿದ್ದಾಗ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ಆಗಬೇಕು ಎಂಬ ಕನಸು ಕಂಡಿದ್ದೆ. ನ್ಯಾಯಾಲಯಗಳು ಸರಿಯಾದ ರೀತಿ ಸಮೀಕ್ಷೆ ಆಗಿಲ್ಲ, ನಿಖರವಾದ ಅಂಕಿ–ಅಂಶ ಇಲ್ಲ ಅಂತ ಅನೇಕ ಬಾರಿ ಹೇಳಿವೆ. ಅದಕ್ಕಾಗಿ ನಾನು 2013ರಲ್ಲಿ ಸಿಎಂ ಆಗಿದ್ದಾಗ ಜಾತಿ ಸಮೀಕ್ಷೆ ಮಾಡಲು ಸೂಚನೆ ನೀಡಿದ್ದೆ. ಆದರೆ ನನ್ನ ಅವಧಿಯಲ್ಲಿ ವರದಿ ತಯಾರಾಗಲಿಲ್ಲ. ನಾನು ಎಲ್ಲಾ ಶೋಷಿತ ವರ್ಗದ ಜೊತೆ ಇರುತ್ತೇನೆ. ಜಾತಿ ವ್ಯವಸ್ಥೆ ನಿರ್ಮೂಲನೆ ಆಗುವವರೆಗೆ ನಿಮ್ಮ ಜೊತೆ ಹೋರಾಟ ಮಾಡುತ್ತೇನೆ. ನಾನು ನನ್ನ ಆಡಳಿತಾವಧಿಯಲ್ಲಿ ಎಲ್ಲಾ ಭಾಗ್ಯಗಳನ್ನು ಕೊಡಲು ನೀವು ನೀಡಿದ ಶಕ್ತಿ ಮತ್ತು ಆಶೀರ್ವಾದವೇ ಕಾರಣ. ನಿಮ್ಮ ಹೋರಾಟದಲ್ಲಿ ನಾನು ಯಾವತ್ತೂ ನಿಮ್ಮ ಜೊತೆ ಇರುತ್ತೇನೆ ಎಂದರು.

# ಸಿದ್ದರಾಮಯ್ಯಗಿಂತ ವಿಭಿನ್ನ ನಾಯಕ ಸಿಗಲು ಸಾಧ್ಯವಿಲ್ಲ: ಡಿಸಿಎಂ ಡಾ.ಜಿ. ಪರಮೇಶ್ವರ್

**ಹಿಂದುಳಿದ ಜಾತಿಗಳ ಒಕ್ಕೂಟ ಆಯೋಜಿಸಿದ್ದ ರಜತ ಮಹೋತ್ಸವ, ಜನಜಾಗೃತಿ ಸಮಾವೇಶದಲ್ಲಿ ಬಣ್ಣನೆ**

ಬೆಂಗಳೂರು, ಸೆ.6: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಾಯಕತ್ವ ಹಾಗೂ ಆಡಳಿತ ಶೈಲಿಯನ್ನು ಮೆಚ್ಚಿ ಮಾತನಾಡಿರುವ ಗೃಹ ಸಚಿವ ಡಾ. ಜಿ ಪರಮೇಶ್ವರ್ ಅವರು, "ಸಿದ್ದರಾಮಯ್ಯ ಅವರಿಗಿಂತ ವಿಭಿನ್ನವಾದ ನಾಯಕ ನಮಗೆ ಸಿಗಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ಸಿದ್ದರಾಮಯ್ಯ ಅವರ ಅನುಭವ, ಜನಪರ ನಿಲುವು ಹಾಗೂ ನಾಯಕತ್ವದ ಗುಣಗಳನ್ನು ಶ್ಲಾಘಿಸಿರುವ ಈ ಹೇಳಿಕೆ ಇದೀಗ ರಾಜಕೀಯ ವಲಯದಲ್ಲಿ ಗಮನ ಸೆಳೆದಿದೆ. ಇಂದು ಬೆಂಗಳೂರು ಅರಮನೆ ಮೈದಾನದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟವು ಆಯೋಜಿಸಿದ್ದ "ರಜತ ಮಹೋತ್ಸವ ಹಾಗೂ ಹಿಂದುಳಿದ ಜಾತಿಗಳ ಬೃಹತ್ ಜನ ಜಾಗೃತಿ ಸಮಾವೇಶ" ಮತ್ತು ನಿಕಟಪೂರ್ವ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರಿಗೆ ಅಭಿನಂದನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸಿದ್ದರಾಮಯ್ಯ ನೇತೃತ್ವದಲ್ಲಿ ನಾವೆಲ್ಲ ಹೋರಾಟ ಮಾಡೋಣ. ಸಮಾನತೆಯ ಸಂಕಲ್ಪ ಮಾಡಬೇಕು. ಅವರು ರಾಜ್ಯ ರಾಜಕೀಯದಲ್ಲಿ ಹೊಸ ಚಿಂತನೆಯನ್ನು ಹುಟ್ಟು ಹಾಕಿದ ನಾಯಕ. ಅಹಿಂದ ಹೋರಾಟದ ಮೂಲಕ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಜಾತಿಗಳಿಗೆ, ಧ್ವನಿ ಇಲ್ಲದ ಸಮುದಾಯಗಳಿಗೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಶಕ್ತಿ ತುಂಬುವ ಕೆಲಸ ಮಾಡಿದ್ದಾರೆ ಎಂದು ಹೇಳಿದರು.

ಈ ಒಕ್ಕೂಟವೂ ಕಳೆದ 25 ವರ್ಷಗಳಿಂದ ಹಿಂದುಳಿದ ಸಮುದಾಯಗಳಿಗೆ ಧ್ವನಿ ನೀಡುವಂತ, ಹೋರಾಟಕ್ಕೆ ಶಕ್ತಿ, ಸರ್ಕಾರದಲ್ಲಿ ಸಿಗಬೇಕಾದ ಸವಲತ್ತುಗಳು ಮತ್ತು ಅಧಿಕಾರಕ್ಕಾಗಿ ಒಕ್ಕೂಟವು ಕೆಲಸ ಮಾಡಿಕೊಂಡು ಬಂದಿದೆ. ಸಿದ್ದರಾಮಯ್ಯನ ವರಿಗೆ ಮಾತ್ರವಲ್ಲದೆ, ನಮ್ಮೆಲ್ಲರ ರಾಜಕಾರಣಕ್ಕೆ ಅಹಿಂದ ಹೋರಾಟ ಬಹಳ ಯಶಸ್ವಿಯಾಗಿ ಕೆಲಸ ಮಾಡಿದೆ.

ಸಿದ್ದರಾಮಯ್ಯ ಅವರು ರಾಜ್ಯ ಕಂಡ ಅಪರೂಪದ ರಾಜಕಾರಣಿ. ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ಅನುಕರಿಸಿ, ಭಾರತರತ್ನ ಡಾ. ಬಿ.ಆರ್.ಅಂಬೇಡ್ಕರ್ ಅವರ ಆಶಯಗಳನ್ನು ಮೈಗೂಡಿಸಿಕೊಂಡು ಕೆಲಸ ಮಾಡಿದ್ದಾರೆ ಎಂದು ಹೇಳಿದರು.

ಕಷ್ಟದಲ್ಲಿರುವ ಸಮುದಾಯಗಳಿಗೆ ಆರ್ಥಿಕ ಶಕ್ತಿ, ಸಾಮಾಜಿಕ ಶಕ್ತಿ ನೀಡುವ ಉದ್ದೇಶದಿಂದ ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಕರ್ನಾಟಕ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಪರಿಚಯಿಸಿ, ಸಮರ್ಪಕವಾಗಿ ಜಾರಿಗೊಳಿಸಿದರು. ಈ ಗ್ಯಾರಂಟಿ ಯೋಜನೆಗಳನ್ನು ಆರಂಭದಲ್ಲಿ ಅನೇಕರು ಟೀಕೆ ಮಾಡಿದರು. ಈಗ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಗ್ಯಾರಂಟಿ ಯೋಜನೆಗಳನ್ನು ಒಪ್ಪಿಕೊಂಡಿದ್ದಾರೆ ಎಂದರು.

ಸಿದ್ದರಾಮಯ್ಯ ಅವರು ಅಧಿಕಾರದಿಂದ ಕೆಳಗೆ ಇಳಿದಿದ್ದರೆ ಎಂದು ಯಾರು ಸಹ ಭಾವಿಸಬಾರದು. ಒಂದು ವೇಳೆ ಯಾರಾದ್ರು ಭಾವಿಸಿದರೆ, ಈ ಸಮುದಾಯಗಳ ಸಂಘಟನೆಗಳು ಮುಂಚೂಣಿಯಲ್ಲಿ ನಿಂತು ಹೋರಾಟ ಮಾಡಬೇಕು ಎಂದರು

ಕಾರ್ಯಕ್ರಮದಲ್ಲಿ ಸಚಿವರಾದ ಸಂತೋಷ್ ಲಾಡ್, ಪುಟ್ಟರಂಗಶೆಟ್ಟಿ, ಬೈರತಿ ಸುರೇಶ್, ಮಧುಬಂಗಾರಪ್ಪ, ಡಾ. ಅಜಯ್‌ಸಿಂಗ್, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ, ಶಾಸಕರಾದ ಬಸವರಾಜ ಶಿವಣ್ಣನವರ್, ಭೀಮಸೇನ ಚಿಮ್ಮನಕಟ್ಟಿ, ಉಮೇಶ್ ಮೇಟಿ, ವಿಧಾನ ಪರಿಷತ್ ಸದಸ್ಯರಾದ ಎಂ.ಆರ್.ಸೀತಾರಾಮ್, ಮಳವಳ್ಳಿ ಶಿವಣ್ಣ ಮುಂತಾದವರು ಇದ್ದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

# ಹಳೇ ಪಿಂಚಣಿ ವ್ಯವಸ್ಥೆ ಮರುಜಾರಿಗೆ ಶೀಘ್ರ ಆದೇಶ

**ಬೆಂಗಳೂರು, ಸೆ.6:** 2023ರ ವಿಧಾನಸಭೆ ಚುನಾವಣೆಯಲ್ಲಿ ನೀಡಿದ್ದ ಭರವಸೆಯಂತೆ ರಾಜ್ಯ ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ವ್ಯವಸ್ಥೆ ಜಾರಿಗೊಳಿಸಲು ಶೀಘ್ರದಲ್ಲೇ ರಾಜ್ಯ ಸರ್ಕಾರ ಆದೇಶ ಹೊರಡಿಸಲಿದೆ ಎಂದು ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಮುನ್ಸೂಚನೆ ನೀಡಿದ್ದಾರೆ.



ಕರ್ನಾಟಕದ 2026–27ನೇ ಸಾಲಿನ ಬಜೆಟ್‌ನಲ್ಲಿ ವೇತನಕ್ಕೆ 90,557 ಕೋಟಿ ರೂ., ಪಿಂಚಣಿಗೆ 41,136 ಕೋಟಿ ರೂ. ಹಾಗೂ ಬಡ್ಡಿ ಪಾವತಿಗಳಿಗೆ 53,332 ಕೋಟಿ ರೂ. ಮೀಸಲಿಡಲಾಗಿದೆ. ಒಟ್ಟಾರೆ ಬದ್ಧ ವೆಚ್ಚ ಸುಮಾರು 1.85 ಲಕ್ಷ ಕೋಟಿ ರೂ. ಎಂದು ಅಂದಾಜಿಸಲಾಗಿದೆ.ರಾಜ್ಯದ ಒಟ್ಟು ಆದಾಯ ಸ್ವೀಕೃತಿಗಳಲ್ಲಿ ಬದ್ಧ ವೆಚ್ಚದ ಪ್ರಮಾಣವೂ ಗಮನಾರ್ಹವಾಗಿರುವ ಹಿನ್ನೆಲೆಯಲ್ಲಿ, ಎಲ್ಲಾ ಸರ್ಕಾರಿ ನೌಕರರನ್ನು ಓಪಿಎಸ್‌ಗೆ ವರ್ಗಾಯಿಸುವ ನಿರ್ಧಾರವು ರಾಜ್ಯದ ಭವಿಷ್ಯದ ಹಣಕಾಸು ಸ್ಥಿತಿಯ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆಯಿದೆ. ಸರ್ಕಾರಿ ನೌಕರರಿಗೆ ನಿವೃತ್ತಿ ಭದ್ರತೆ ಒದಗಿಸುವುದರ ಜತೆಗೆ ರಾಜ್ಯದ ಹಣಕಾಸಿನ ಸುಸ್ಥಿರತೆಯನ್ನೂ ಕಾಪಾಡಿಕೊಳ್ಳುವುದು ಸರ್ಕಾರದ ಮುಂದಿರುವ ಪ್ರಮುಖ ಸವಾಲಾಗಿದೆ. 2023ರ ವಿಧಾನಸಭೆ ಚುನಾವಣೆಯಲ್ಲಿ ನೀಡಿದ್ದ ಭರವಸೆಯಂತೆ ರಾಜ್ಯ ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ವ್ಯವಸ್ಥೆ ಜಾರಿಗೊಳಿಸಲು ಶೀಘ್ರದಲ್ಲೇ ರಾಜ್ಯ ಸರ್ಕಾರ ಆದೇಶ ಹೊರಡಿಸಲಿದೆ ಎಂದು ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅವರು ಮುನ್ಸೂಚನೆ ನೀಡಿದ್ದಾರೆ.

ಓಪಿಎಸ್ ಜಾರಿಯ ಸಾಧಕ–ಬಾಧಕಗಳ ಕುರಿತು ಈಗಾಗಲೇ ವ್ಯಾಪಕ ಚರ್ಚೆ ನಡೆಯುತ್ತಿದೆ. ಎಲ್ಲಾ ಎನ್‌ಪಿಎಸ್ ನೌಕರರನ್ನು ಓಪಿಎಸ್ ವ್ಯಾಪ್ತಿಗೆ ತರುವುದರಿಂದ ರಾಜ್ಯ ಸರ್ಕಾರದ ಮೇಲೆ ದೀರ್ಘಾವಧಿಯ ಹಣಕಾಸಿನ ಹೊಣೆಗಾರಿಕೆ ಹೆಚ್ಚಾಗಲಿದೆ ಎಂಬ 16ನೇ ಹಣಕಾಸು ಆಯೋಗದ ಎಚ್ಚರಿಕೆಯೂ ಈ ಸಂದರ್ಭದಲ್ಲಿ ಮುನ್ನೆಲೆಗೆ ಬಂದಿದೆ.

ಉದಾಹರಣೆಗೆ, ಒಬ್ಬ ನೌಕರನ ಮೂಲ ವೇತನ 50 ಸಾವಿರ ರೂ. ಹಾಗೂ ತುಟ್ಟಿಭತ್ಯೆ 25 ಸಾವಿರ ರೂ. ಇದ್ದರೆ, ಒಟ್ಟು ವೇತನ 75 ಸಾವಿರ ರೂ. ಆಗುತ್ತದೆ. ಇದರ ಶೇ.10ರಂತೆ ನೌಕರರು ತಿಂಗಳಿಗೆ 7,500 ರೂ. ವಂತಿಕೆ ನೀಡುತ್ತಾರೆ. ಸರ್ಕಾರದ ಶೇ.14ರ ಕೊಡುಗೆ 10,500 ರೂ. ಆಗಿರುತ್ತದೆ. ಹೀಗಾಗಿ ತಿಂಗಳಿಗೆ ಒಟ್ಟು 18 ಸಾವಿರ ರೂ. ನಿವೃತ್ತಿ ನಿಧಿಗೆ ಸೇರುತ್ತದೆ. ಓಪಿಎಸ್ ಜಾರಿಯಾದರೆ ಹೊರೆ ಹೆಚ್ಚಳ–ಓಪಿಎಸ್ ಅಡಿಯಲ್ಲಿ ಪಿಂಚಣಿಯೋಗ್ಯ ವೇತನದ ಸುಮಾರು ಶೇ.50ರಷ್ಟು ಪಿಂಚಣಿ ದೊರೆಯುವ ಮಾದರಿಯಿದೆ. ಇದರೊಂದಿಗೆ ಅನ್ವಯವಾಗುವ ತುಟ್ಟಿಭತ್ಯೆ ಪರಿಹಾರ, ಕುಟುಂಬ ಪಿಂಚಣಿ, ನಿವೃತ್ತಿ ಗ್ರಾ್ಯಚ್ಯುಟಿ, ಕಮ್ಯುಟೇಶನ್ ಸೇರಿದಂತೆ ಇತರ ಪಿಂಚಣಿ ಸೌಲಭ್ಯಗಳೂ ದೊರೆಯುತ್ತವೆ.

### ಕೇಂದ್ರದಿಂದ ಎನ್‌ಪಿಎಸ್ ಹಣ ವಾಪಸ್ ಕಷ್ಟ

ಬಹುಮುಖ್ಯವಾಗಿ, ಎನ್‌ಪಿಎಸ್ ಅಡಿಯಲ್ಲಿ ಸಂಗ್ರಹವಾಗಿರುವ ನೌಕರರ ವಂತಿಕೆಯ ಹಣ ಕೇಂದ್ರ ಸರ್ಕಾರದ ಬಳಿಯಿದೆ. ಈ ಹಣವನ್ನು ರಾಜ್ಯಗಳಿಗೆ ಮರಳಿಸುವುದಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ ಎನ್ನಲಾಗುತ್ತಿದೆ. ಹೀಗಾಗಿ ರಾಜ್ಯ ಸರ್ಕಾರವೇ ಭಾರಿ ಪ್ರಮಾಣದ ಹಣಕಾಸು ಸಂಪನ್ಮೂಲ ಕ್ರೋಡೀಕರಿಸಿ ಓಪಿಎಸ್ ಆದರೂ, ಮುಂದಿನ ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಓಪಿಎಸ್ ಜಾರಿಗೆ ಆದೇಶ ಹೊರಡಿಸಿ ಕಾಂಗ್ರೆಸ್ ಸರ್ಕಾರ ನಿರ್ಗಮಿಸಲಿದೆ ಎಂಬ ರಾಜಕೀಯ ಚರ್ಚೆಯೂ ನಡೆಯುತ್ತಿದೆ.



ಬೆಂಗಳೂರಿನ ಎಂಜಿ ರಸ್ತೆ, ಮೆಟ್ರೋ ನಿಲ್ದಾಣದ ರಂಗಸ್ಥಳದಲ್ಲಿ ಭಾನುವಾರ ಮುಂಜಾನೆ ಶ್ರೀಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು.

## ಪಿಓಪಿ ಗಣೇಶ ಮೂರ್ತಿಗಳ ವಿರುದ್ಧ ರಾಜ್ಯಾದ್ಯಂತ ವಿಶೇಷ ಕಾರ್ಯಾಚರಣೆ: 1,283 ಮೂರ್ತಿಗಳ ಜಪ್ತಿ

**ಬೆಂಗಳೂರು, ಸೆ.6:** ಪರಿಸರಕ್ಕೆ ಹಾನಿಕಾರಕವಾಗಿರುವ ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಓಪಿ) ಗಣೇಶ ಮೂರ್ತಿಗಳ ತಯಾರಿಕೆ ಮತ್ತು ಮಾರಾಟಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಸಚಿವ ರಾಮಲಿಂಗಾರೆಡ್ಡಿ ಅವರ ಮಾರ್ಗದರ್ಶನದಲ್ಲಿ ರಾಜ್ಯಾದ್ಯಂತ ವಿಶೇಷ ಕಾರ್ಯಾಚರಣೆ ತಂಡಗಳನ್ನು ರಚಿಸಿ ತಪಾಸಣೆ ನಡೆಸಲಾಗಿದೆ. ಗಣೇಶ ಚತುರ್ಥಿ ಹಿನ್ನೆಲೆಯಲ್ಲಿ ಜಲಮೂಲಗಳು ಮತ್ತು ಜಲಚರಗಳ ಮೇಲೆ ಉಂಟಾಗಬಹುದಾದ ದುಷ್ಪರಿಣಾಮವನ್ನು ತಡೆಯುವ ಉದ್ದೇಶದಿಂದ ಪ್ರತಿ ಜಿಲ್ಲೆಯಲ್ಲೂ ನಾಲ್ಕರಿಂದ ಐದು ವಿಶೇಷ ತಂಡಗಳನ್ನು ರಚಿಸಲಾಗಿದೆ.

ಆಗಸ್ಟ್ 18ರಿಂದ ಸೆಪ್ಟೆಂಬರ್ 6ರವರೆಗೆ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ಸ್ಥಳೀಯ ಪೊಲೀಸ್ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳ ಸಹಕಾರದೊಂದಿಗೆ ವ್ಯಾಪಕ ಪರಿಶೀಲನೆ ನಡೆಸಲಾಗಿದೆ.

ಬೆಂಗಳೂರು ನಗರ ಸೇರಿದಂತೆ ರಾಮನಗರ, ಮೈಸೂರು, ಚಾಮರಾಜನಗರ, ಹಾಸನ, ಕೊಡಗು, ಮಂಗಳೂರು, ಚಿಕ್ಕಮಗಳೂರು, ಕಾರವಾರ, ಉಡುಪಿ, ಬೆಳಗಾವಿ, ವಿಜಯಪುರ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ತುಮಕೂರು, ಬಾಗಲಕೋಟೆ, ಹಾವೇರಿ, ಗದಗ, ಧಾರವಾಡ, ಕಲಬುರಗಿ, ಬೀದರ್, ಯಾದಗಿರಿ, ಬಳ್ಳಾರಿ, ಕೊಪ್ಪಳ, ರಾಯಚೂರು ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಕಾರ್ಯಾಚರಣೆ ನಡೆದಿದೆ.



ಈ ಸಂದರ್ಭದಲ್ಲಿ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸದೆ ಪಿಓಪಿ ಗಣೇಶ ಮೂರ್ತಿಗಳನ್ನು ತಯಾರಿಸುತ್ತಿದ್ದ ಅಥವಾ ಮಾರಾಟ ಮಾಡುತ್ತಿದ್ದ 214 ಮಳಿಗೆಗಳು ಹಾಗೂ ಗೋದಾಮುಗಳನ್ನು ಪರಿಶೀಲಿಸಲಾಗಿದ್ದು, ಒಟ್ಟು 1,283 ಪಿಓಪಿ ಗಣೇಶ ಮೂರ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

**ಸರ್ಕಾರದ ಕಠಿಣ ನಿಲುವು**

ಪಿಓಪಿ ಮೂರ್ತಿಗಳ ತಯಾರಿಕೆ, ಸಾಗಣೆ, ಮಾರಾಟ ಹಾಗೂ ವಿಸರ್ಜನೆಯನ್ನು ಕರ್ನಾಟಕ ಸರ್ಕಾರ ಕಡ್ಡಾಯವಾಗಿ ನಿಷೇಧಿಸಿರುವ ಹಿನ್ನೆಲೆಯಲ್ಲಿ ಈ ಬಾರಿ ನಿಯಮ ಉಲ್ಲಂಘನೆ ವಿರುದ್ಧ ಕಠಿಣ ಕ್ರಮಕ್ಕೆ ಮುಂದಾಗಿದೆ. ಕೇವಲ ನಿಷೇಧದ ಆದೇಶ ಹೊರಡಿಸುವುದಕ್ಕೆ ಸೀಮಿತವಾಗದೆ, ಜಿಲ್ಲಾಮಟ್ಟದಲ್ಲಿ ವಿಶೇಷ ತಂಡಗಳನ್ನು ನಿಯೋಜಿಸಿ ನೆಲಮಟ್ಟದಲ್ಲಿ ಅನುಷ್ಠಾನ ಪರಿಶೀಲನೆ ನಡೆಸಿರುವುದು ಸರ್ಕಾರದ ಕ್ರಮದ ಪ್ರಮುಖ ಅಂಶವಾಗಿದೆ.

### ಪಿಓಪಿ ಬೇಡ, ಮಣ್ಣಿನ ಗಣೇಶಮೂರ್ತಿ ಪೂಜಿಸಿ: ರಾಮಲಿಂಗಾರೆಡ್ಡಿ ಮನವಿ



ಗಣೇಶ ಮೂರ್ತಿಗಳ ವಿಸರ್ಜನೆಯ ಸಂದರ್ಭದಲ್ಲಿ ಪಿಓಪಿ ಸುಲಭವಾಗಿ ಕರಗದ ಕಾರಣ ಕೆರೆ, ನದಿ ಹಾಗೂ ಇತರ ಜಲಮೂಲಗಳಲ್ಲಿ ತ್ಯಾಜ್ಯ ಸಂಗ್ರಹವಾಗುವ ಸಾಧ್ಯತೆ ಇದೆ. ಇದರ ಜೊತೆಗೆ ಮೂರ್ತಿಗಳಿಗೆ ಬಳಸುವ ಬಣ್ಣಗಳು ಹಾಗೂ ಇತರ ರಾಸಾಯನಿಕ ವಸ್ತುಗಳು ನೀರಿನ ಗುಣಮಟ್ಟದ ಮೇಲೆ ಪರಿಣಾಮ ಬೀರುವ ಆತಂಕವಿದೆ. ಇದರಿಂದ ಗಣೇಶ ಹ' ಬ್ಬ ದ ಧಾರ್ಮಿಕ ಆಚರಣೆಯ ಜೊತೆಗೆ ಪರಿಸರ ಸಂರಕ್ಷಣೆಯನ್ನೂ ಸಮನ್ವಯಗೊಳಿಸುವ ಅಗತ್ಯವನ್ನು ಸರ್ಕಾರ ಒತ್ತಿಹೇಳುತ್ತಿದೆ.

ಸಚಿವ ರಾಮಲಿಂಗಾ ರೆಡ್ಡಿ ಅವರು ಸಾರ್ವಜನಿಕರಲ್ಲಿ ಪರಿಸರ ಸ್ನೇಹಿ ಗಣೇಶೋತ್ಸವ ಆಚರಿಸುವಂತೆ ಮನವಿ ಮಾಡಿದ್ದಾರೆ. ಮಣ್ಣಿನಿಂದ ತಯಾರಿಸಿದ ಗಣೇಶ ಮೂರ್ತಿಗಳನ್ನೇ ಬಳಸುವ ಮೂಲಕ ಪರಿಸರ ಮತ್ತು ಜಲಚರಗಳ ಸಂರಕ್ಷಣೆಗೆ ಸಾರ್ವಜನಿಕರು ಕೈಜೋಡಿಸಬೇಕು ಎಂದು ಅವರು ಕರೆ ನೀಡಿದ್ದಾರೆ.

## ಭದ್ರಾವತರಣ: ಫಲಿಸಿತು ಭಗೀರಥ ಪ್ರಯತ್ನ

**ಬಯಲುಸೀಮೆಗೆ ಭದ್ರಾ ನೀರು ಹರಿಸುವ ಪ್ರಾಯೋಗಿಕ ಕಾರ್ಯಕ್ಕೆ ಸಚಿವ ಟಿ.ರಘುಮೂರ್ತಿ ಚಾಲನೆ ಇನ್ನೆರಡು ತಿಂಗಳಲ್ಲಿ ಹರಿಯಲಿದೆ ತುಂಗೆ**

**ಚಿತ್ರದುರ್ಗ, ಸೆ.6:** ಐದಾರು ದಶಕಗಳ ಕಾಲದ ಭದ್ರಾ ಮೇಲ್ದಂಡೆ ಯೋಜನೆಯ ಸುದೀರ್ಘ ಕನಸು ನನಸಾಗುವತ್ತ ಸಾಗಿದೆ. ಬಯಲು ಸೀಮೆಯ ಜನರ ಭಗೀರಥ ಪ್ರಯತ್ನಕ್ಕೆ ಭದ್ರೆ ಒಲಿದಿದ್ದು, 'ಭದ್ರಾವತರಣಕ್ಕೆ' ದಿನಗಣನೆ ಶುರುವಾಗಿದೆ. ಧಾವಂತದಿಂದ ಹರಿದು ಬರುತ್ತಿರುವ ಭದ್ರೆ ಜಿಲ್ಲೆಗೆ ಪ್ರವೇಶಿಸಿದೊಡನೆ ಸದಾ ಬರಗಾಲದ ಜಿಲ್ಲೆ ಎಂಬ ಹಣೆಪಟ್ಟಿಗೆ ಪಾಪ ವಿಮೋಚನೆಯಾಗುವ ಕನಸು ಚಿಗುರೊಡೆದಿದೆ. ಭದ್ರೆಯೊಡನೆ ಇನ್ನೆರಡು ತಿಂಗಳಲ್ಲಿ ತುಂಗೆಯೂ ಜಿಲ್ಲೆಯ ಕಡೆ ಮುಖಮಾಡಲಿದ್ದಾಳೆ. ಭದ್ರಾ ಜಲಾಶಯದಿಂದ ಚಿತ್ರದುರ್ಗ ಶಾಖಾ ಕಾಲುವೆಗೆ ಪ್ರಾಯೋಗಿಕವಾಗಿ ನೀರು ಹರಿಸುವ ಕಾರ್ಯಕ್ರಮಕ್ಕೆ ಭದ್ರಾ ಮೇಲ್ದಂಡೆ ಯೋಜನೆಗೆ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯಲ್ಲಿ ಇನ್‌ಟೇಕ್ ಪಾಯಿಂಟ್ (ಲಕ್ಕವಳ್ಳಿ ಅಣೆಕಟ್ಟು)ನಲ್ಲಿ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವ ಟಿ.ರಘುಮೂರ್ತಿ ಅವರು ಭಾನುವಾರ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು.

**ಸಾಕ್ಷಾತ್ಕಾರಗೊಳ್ಳುತ್ತಿದೆ ದಶಕಗಳ ಕನಸು**

ಚಾಲನೆ ನೀಡಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಸಚಿವ ಟಿ. ರಘುಮೂರ್ತಿ, ಇಂದು ಇತಿಹಾಸದಲ್ಲಿ ನೆನಪಿಡಬೇಕಾದ ಮಹತ್ವದ ದಿನ. ಐದಾರು ದಶಕಗಳಿಂದ ಬಯಲುಸೀಮೆ ಜನರು ಕಂಡಿದ್ದ ಭದ್ರಾ ಮೇಲ್ದಂಡೆ ಯೋಜನೆಯ ಕನಸು ಇಂದು ನನಸಾಗುತ್ತಿದೆ. ಈ ಯೋಜನೆಗೆ ಮುನ್ನುಡಿ ಬರೆದ ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ. ಕೃಷ್ಣ ಹಾಗೂ ಸಚಿವರಾಗಿದ್ದ ಟಿ.ಬಿ. ಜಯಚಂದ್ರ ಸೇರಿದಂತೆ, ಯೋಜನೆಯ ಸಾಕಾರಕ್ಕಾಗಿ ಶ್ರಮಿಸಿದ ಪ್ರತಿಯೊಬ್ಬ ಹೋರಾಟಗಾರರು, ರೈತರು, ಸ್ವಾಮೀಜಿಗಳನ್ನು ಹಾಗೂ ಜನಪ್ರತಿನಿಧಿಗಳನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ ಎಂದರು.



ಈ ವೇಳೆ ಹಿರಿಯ ದೆಹಲಿ ವಿಶೇಷ ಪ್ರತಿನಿಧಿ ಹಾಗೂ ಶಿರಾ ಶಾಸಕ ಟಿ.ಬಿ.ಜಯಚಂದ್ರ, ತರೀಕೆರೆ ಶಾಸಕ ಶ್ರೀನಿವಾಸ್, ಹೊಸದುರ್ಗ ಶಾಸಕ ಬಿ.ಜಿ.ಗೋವಿಂದಪ್ಪ, ಹೊಳಲ್ಕೆರೆ ಶಾಸಕ ಡಾ.ಎಂ. ಚಂದ್ರಪ್ಪ, ಚಿತ್ರದುರ್ಗ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಪಿ.ರಘು, ಜಿಲ್ಲಾ ಗ್ಯಾರಂಟಿ ಯೋಜನೆ ಪ್ರಾಧಿಕಾರದ ಅಧ್ಯಕ್ಷ ಗಂಜಿಗಟ್ಟೆ ಶಿವಣ್ಣ, ಜನ ಪ್ರತಿನಿಧಿಗಳು, ಅಧಿಕಾರಿಗಳು ಹಾಜರಿದ್ದರು.

ಯೋಜನೆಯಿಂದ ಚಿಕ್ಕಮಗಳೂರು, ತುಮಕೂರು, ಚಿತ್ರದುರ್ಗ ಹಾಗೂ ದಾವಣಗೆರೆ ಸೇರಿದಂತೆ 4 ಜಿಲ್ಲೆಗಳ 12 ತಾಲೂಕುಗಳಿಗೆ ಅನುಕೂಲವಾಗಲಿದೆ. ಒಟ್ಟು 2,25,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯಲಿದೆ. ಒಟ್ಟು 367 ಕೆರೆಗಳಿಗೆ ನೀರು ತುಂಬಿಸುವ ಬೃಹತ್ ಯೋಜನೆ ಇದಾಗಿದೆ. ತುಂಗಾದಿಂದ ಬರಬೇಕಾದ 17.4 ಟಿ.ಎಂ.ಸಿ ನೀರಿನ ಕಾಮಗಾರಿಗಳು ಎರಡು ಟವರ್ ಕೆಲಸ ಮುಂದಿನ ಎರಡು ತಿಂಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದು ಸಚಿವ ಟಿ.ರಘುಮೂರ್ತಿ ವಿಶ್ವಾಸ ವ್ಯಕ್ತಪಡಿಸಿದರು.

**ಪಕ್ಷಾತೀತವಾಗಿ ಯೋಜನೆಗೆ ನೆರವು**

ಭದ್ರಾ ಮೇಲ್ದಂಡೆ ಯೋಜನೆಗೆ ಧರಂ ಸಿಂಗ್, ಯಡಿಯೂರಪ್ಪ ಹಾಗೂ ಕುಮಾರಸ್ವಾಮಿ ಅವರ ನೇತೃತ್ವದ ಸಮ್ಮಿಶ್ರ ಸರ್ಕಾರದ ಅವಧಿಯಿಂದ ಹಿಡಿದು ಸಿದ್ದರಾಮಯ್ಯನವರ ಸರ್ಕಾರದವರೆಗೆ ಹಲವು ಹಂತಗಳಲ್ಲಿ ಅನುದಾನ ಹಂಚಿಕೆಯಾಗಿದೆ. ಯೋಜನೆ ಅನುಷ್ಠಾನಗೊಳ್ಳಲು ಎಲ್ಲಾ ಪಕ್ಷಗಳು ಪಕ್ಷಾತೀತವಾಗಿ ನೆರವು ನೀಡಿದನ್ನು ಸಚಿವ ಟಿ.ರಘುಮೂರ್ತಿ ಸ್ಮರಿಸಿದರು.

**ರೂ.11,500 ಕೋಟಿ ವೆಚ್ಚ:**

ಯೋಜನೆಗೆ ಇದುವರೆಗೆ ಸುಮಾರು ರೂ.11,500 ಕೋಟಿ ವೆಚ್ಚವಾಗಿದ್ದು, ಪ್ರಸ್ತುತ ಕೆರೆಗಳಿಗೆ ನೀರು ತುಂಬಿಸುವ ಕೆಲಸಗಳು ನಡೆಯುತ್ತಿವೆ. ಕೇಂದ್ರ ಸರ್ಕಾರವು 2022–23ರ ಆಯವ್ಯಯದಲ್ಲಿ ಭರವಸೆ ನೀಡಿದ್ದ ರೂ.5,300 ಕೋಟಿ ಅನುದಾನವನ್ನು ಬಿಡುಗಡೆ ಮಾಡಿದ್ದರೆ ಕಾಮಗಾರಿ ಇನ್ನು ಹೆಚ್ಚಿನ ವೇಗ ಪಡೆದುಕೊಳ್ಳುತ್ತಿತ್ತು. ಇಂದಿಗೂ ಕೇಂದ್ರದ ಅನುದಾನದ ನಿರೀಕ್ಷೆಯಲ್ಲಿದ್ದೇವೆ ಎಂದು ಸಚಿವ ಟಿ.ರಘುಮೂರ್ತಿ ಹೇಳಿದರು.

**2028ರ ವೇಳೆ ಯೋಜನೆ ಪೂರ್ಣ**

ಈ ಯೋಜನೆಯಲ್ಲಿ ಯಾವುದೇ ರಾಜಕಾರಣ ಮಾಡುವುದಿಲ್ಲ. 2028ರ ವೇಳೆಗೆ ಭದ್ರಾ ಮೇಲ್ದಂಡೆ ಯೋಜನೆಯನ್ನು ಸಂಪೂರ್ಣವಾಗಿ ಪೂರ್ಣಗೊಳಿಸಲು ಅಗತ್ಯ ಕ್ರಮವಹಿಸುವಂತೆ ಸದನದಲ್ಲೂ ಒತ್ತಾಯಿಸಲಾಗಿದೆ. ನಾಲ್ಕು ಜಿಲ್ಲೆಗಳ ರೈತರ ಹಿತದೃಷ್ಟಿಯಿಂದ ಪ್ರತಿಯೊಬ್ಬರೂ ಪಕ್ಷಾತೀತವಾಗಿ ಶ್ರಮಿಸಬೇಕಿದೆ ಎಂದು ಸಚಿವ ಟಿ.ರಘುಮೂರ್ತಿ ಹೇಳಿದರು

## ಕೊಡಗಿನಲ್ಲಿ ಕ್ರೀಡಾ ಪ್ರವಾಸೋದ್ಯಮಕ್ಕೆ ಹೊಸ ವೇಗ: ಸಚಿವ ಕೆ.ಜೆ. ಜಾರ್ಜ್ ಘೋಷಣೆ



**ಗೋಣಿಕೊಪ್ಪಲಿನ ಕಾಲ್ಸ್ ಶಾಲೆ ಆವರಣದಲ್ಲಿ ಮಾನ್‌ಸೂನ್ ಹಾಫ್ ಮ್ಯಾರಥಾನ್‌ಗೆ ಚಾಲನೆ**

**ಮಡಿಕೇರಿ, ಸೆ.6:** ಪ್ರಾಕೃತಿಕ ಚೆಲುವಿನ ಜೊತೆಗೆ ಶ್ರೀಮಂತ ಕ್ರೀಡಾ ಪರಂಪರೆಯನ್ನು ಮೈಗೂಡಿಸಿಕೊಂಡಿರುವ ಕೊಡಗು ಜಿಲ್ಲೆಯಲ್ಲಿ 'ಕ್ರೀಡಾ ಪ್ರವಾಸೋದ್ಯಮ'ವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ ಎಂದು ಇಂಧನ ಹಾಗೂ ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ತಿಳಿಸಿದ್ದಾರೆ. ಗೋಣಿಕೊಪ್ಪಲಿನ ಕಾಲ್ಸ್ ಶಾಲಾ ಆವರಣದಲ್ಲಿ ಆಯೋಜಿಸಲಾಗಿದ್ದ 'ಕೊಡಗು ಮಾನ್ಸೂನ್ ಹಾಫ್ ಮ್ಯಾರಥಾನ್' ಕೂಟಕ್ಕೆ ಹಸಿರು ನಿಶಾನೆ ತೋರಿದ ಬಳಿಕ ಅವರು ಮಾತನಾಡಿದರು. 5,900ಕ್ಕೂ ಹೆಚ್ಚು ಓಟಗಾರರ ಸಂಭ್ರಮ --ಅಶ್ವಿನಿ ಸ್ಪೋರ್ಟ್ಸ್ ಫೌಂಡೇಶನ್, ಕಾಲ್ಸ್, ಎನ್‌ಇಬಿ ಸ್ಪೋರ್ಟ್ಸ್ ಎಂಟರ್‌ಟೇನ್‌ಮೆಂಟ್ ಹಾಗೂ ಪ್ರವಾಸೋದ್ಯಮ ಇಲಾಖೆಯ ಜಂಟಿ ಆಶ್ರಯದಲ್ಲಿ ನಡೆದ ಈ ಬೃಹತ್ ಕ್ರೀಡಾಕೂಟದಲ್ಲಿ ಸುಮಾರು 5,902 ಸ್ಪರ್ಧಿಗಳು ಭಾಗವಹಿಸಿದ್ದರು. 21 ಕಿ.ಮೀ, 10 ಕಿ.ಮೀ ವಿಭಾಗಗಳಲ್ಲದೆ ಸಾರ್ವಜನಿಕರ ಉತ್ಸಾಹ ಹೆಚ್ಚಿಸಲು 5ಕಿ.ಮೀ 'ಮಜಾ ರನ್' ಸಹ ಏರ್ಪಡಿಸಲಾಗಿತ್ತು.

## ಕ್ಯಾನ್ಸರ್ ಚಿಕಿತ್ಸೆ ಕೈಗೆಟುಕುವಂತಾಗಬೇಕು: ಸಂಸದ ಸಿ.ಎನ್. ಮಂಜುನಾಥ್

**ಬೆಂಗಳೂರು, ಸೆ.6:** ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ದೊಡ್ಡಕಲ್ಲಸಂದ್ರ, ಕನಕಪುರ ಮುಖ್ಯ ರಸ್ತೆಯಲ್ಲಿರುವ ಮೀನಾಕ್ಷಿ ರಂಗಮಂಚ್ (ಕುಮಾರನ್ಸ್ ಶಾಲಾ ಸಭಾಂಗಣ)ದಲ್ಲಿ ಇಂದು ಲಕ್ಷ್ಮೀಶ ಫೌಂಡೇಶನ್ (ರಿ.) ವತಿಯಿಂದ ಆಯೋಜಿಸಲಾಗಿದ್ದ 6ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸದಸ್ಯ ಡಾ. ಸಿ.ಎನ್. ಮಂಜುನಾಥ್ ಅವರು ಭಾಗವಹಿಸಿ, ಕ್ಯಾನ್ಸರ್ ಪೀಡಿತರು ಹಾಗೂ ಅವರ ಕುಟುಂಬಗಳಿಗೆ ಫೌಂಡೇಶನ್ ನೀಡುತ್ತಿರುವ ಮಾನವೀಯ ಸೇವೆಯನ್ನು ಶ್ಲಾಘಿಸಿದರು.

ಕ್ಯಾನ್ಸರ್ ರೋಗಿಗಳ ಚಿಕಿತ್ಸೆಗೆ ನೆರವಾಗುವ ಉದ್ದೇಶದಿಂದ ನಿಧಿ ಸಂಗ್ರಹಿಸುವ ಈ ಮಹತ್ವದ ಕಾರ್ಯಕ್ರಮದ ಮುಖ್ಯ ರೂವಾರಿಗಳಾದ ಎಂ.ಡಿ. ಪಲ್ಲವಿ ಹಾಗೂ ಅವರ ತಂಡಕ್ಕೆ ಡಾ. ಮಂಜುನಾಥ್ ಅವರು ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿದರು.



ಕಾರ್ಯಕ್ರಮದಲ್ಲಿ ಸ್ಥಳೀಯ ಮಾಜಿ ಬಿಬಿಎಂಪಿ ಸದಸ್ಯರಾದ ಸೋಮು, ಖ್ಯಾತ ಗಾಯಕಿ ಎಂ.ಡಿ. ಪಲ್ಲವಿ, ಲಕ್ಷ್ಮೀಶ ಫೌಂಡೇಶನ್‌ನ ಎಲ್ಲಾ ಪದಾಧಿಕಾರಿಗಳು ಹಾಗೂ ಸದಸ್ಯರು ಸೇರಿದಂತೆ ಹಲವು ಗಣ್ಯರು, ವೈದ್ಯರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು

ನಾವು ಎಷ್ಟು ಓದಿದ್ದೇವೆ, ಎಷ್ಟು ಪ್ರಶಸ್ತಿಗಳನ್ನು ಗಳಿಸಿದ್ದೇವೆ ಎಂಬುದಕ್ಕಿಂತ, ನಮ್ಮ ವಿದ್ಯೆ ಮತ್ತು ಬದುಕಿನಿಂದ ಎಷ್ಟು ಜನರ ಮುಖದಲ್ಲಿ ಮಂದಹಾಸ ಮೂಡಿದೆ, ಎಷ್ಟು ಮನೆಗಳಲ್ಲಿ ನಂದಾದೀಪ ಬೆಳಗಿದೆ ಎಂಬುದೇ ಅತ್ಯಂತ ಮುಖ್ಯ. ಮತ್ತೊಬ್ಬರ ಕಣ್ಣೀರನ್ನು ಒರೆಸುವ ಸೇವೆಯೇ ನಿಜವಾದ ಪುಣ್ಯದ ಕೆಲಸ ಹಾಗೂ ದೇವರ ಕೆಲಸ, ಎಂದು ಅವರು ಹೇಳಿದರು.

ಕ್ಯಾನ್ಸರ್ ಚಿಕಿತ್ಸೆಯೆಂದರೆ ಕೇವಲ ಶಸ್ತ್ರಚಿಕಿತ್ಸೆ ಮತ್ತು ಔಷಧ ನೀಡುವುದಷ್ಟೇ ಅಲ್ಲ. ರೋಗಿಗೆ ಆತ್ಮವಿಶ್ವಾಸ ತುಂಬುವುದು, ಅವರ ಮನಸ್ಸಿನ ನೋವಿಗೆ ಸ್ಪಂದಿಸುವುದು, ಕರುಣೆ ತೋರುವುದು ಹಾಗೂ ಧೈರ್ಯ ನೀಡುವುದು ಕೂಡ ಚಿಕಿತ್ಸೆಯ ಪ್ರಮುಖ ಭಾಗವಾಗಿದೆ. ನಮ್ಮ ಮಾತಿನಲ್ಲೂ ಔಷಧವಿದೆ, ಆತ್ಮವಿಶ್ವಾಸದಲ್ಲೂ ಔಷಧವಿದೆ ಎಂದು ಅವರು ಹೇಳಿದರು.

ಲಕ್ಷ್ಮೀಶ ಫೌಂಡೇಶನ್ ಕ್ಯಾನ್ಸರ್ ಪೀಡಿತ ಕುಟುಂಬಗಳ ಮಕ್ಕಳಿಗೆ, ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದ ಹಾಗೂ ಕೊಳಗೇರಿ ಪ್ರದೇಶಗಳ ಮಕ್ಕಳಿಗೆ ಶಿಕ್ಷಣಕ್ಕೆ ನೆರವಾಗುತ್ತಿರುವುದನ್ನು ಪ್ರಶಂಸಿಸಿದ ಅವರು, ಸಮಾಜ ಸೇವೆ ಮಾಡಲು ಕೇವಲ ಹಣವಿದ್ದರೆ ಸಾಲದು, ಸಹಾಯ ಮಾಡುವ ಹೃದಯವೂ ಇರಬೇಕು ಎಂದು ಹೇಳಿದರು.

ಪ್ರತಿಯೊಬ್ಬರ ಹೃದಯ ಭೌತಿಕವಾಗಿ ಚಿಕ್ಕದಾಗಿರಬಹುದು; ಆದರೆ ಸಾಮಾಜಿಕವಾಗಿ ಅದು ದೊಡ್ಡದಾಗಿರಬೇಕು. ನಾವು ಒಬ್ಬರಿಗೆ ಮಾಡುವ ಸಹಾಯ ಮತ್ತೊಂದು ರೂಪದಲ್ಲಿ ಸಮಾಜಕ್ಕೆ ಇನ್ನೂ ದೊಡ್ಡದಾಗಿ ಮರಳುತ್ತದೆ ಎಂಬ ಪರಿಕಲ್ಪನೆ ನಮ್ಮಲ್ಲಿರಬೇಕು, ಎಂದು ಡಾ. ಮಂಜುನಾಥ್ ಕರೆ ನೀಡಿದರು.

ಇಂದಿನ ಜೀವನಶೈಲಿ, ಆಹಾರ ಪದ್ಧತಿ ಹಾಗೂ ಹೆಚ್ಚುತ್ತಿರುವ ಮಾಲಿನ್ಯದಿಂದ ಹೃದಯ ಸಂಬಂಧಿ ಕಾಯಿಲೆಗಳು, ಕ್ಯಾನ್ಸರ್, ಮಧುಮೇಹ ಮತ್ತು ಪಾರ್ಶ್ವವಾಯು ಸೇರಿದಂತೆ ಜೀವನಶೈಲಿ ಆಧಾರಿತ ಕಾಯಿಲೆಗಳು ಹೆಚ್ಚಾಗುತ್ತಿವೆ. ಹೀಗಾಗಿ ರೋಗ ಬರುವುದನ್ನು ಕಾಯುವುದಕ್ಕಿಂತ ಮುನ್ನೆಚ್ಚರಿಕೆ ವಹಿಸುವುದು, ನಿಯಮಿತ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಹಾಗೂ ಆರಂಭಿಕ ಹಂತದಲ್ಲೇ ರೋಗವನ್ನು ಪತ್ತೆಹಚ್ಚುವುದು ಅತ್ಯಂತ ಅಗತ್ಯ ಎಂದು ಅವರು ಒತ್ತಿ ಹೇಳಿದರು.

ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಗಳ ಚಿಕಿತ್ಸೆಯಲ್ಲಿ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ನೆರವಾಗುವ ಸಂಘ–ಸಂಸ್ಥೆಗಳ ಸೇವೆ ಅತ್ಯಂತ ಮಹತ್ವದ್ದಾಗಿದೆ. ಇಂತಹ ಸೇವಾ ಕಾರ್ಯಗಳಿಗೆ ಸಮಾಜದ ಪ್ರತಿಯೊಬ್ಬರೂ ತಮ್ಮ ಕೈಲಾದಷ್ಟು ಸಹಕಾರ ನೀಡಬೇಕು ಎಂದು ಅವರು ಮನವಿ ಮಾಡಿದರು.

ಕ್ಯಾನ್ಸರ್ ರೋಗಿಗಳ ಚಿಕಿತ್ಸೆಗೆ ನೆರವಾಗುವ ಈ ಮಾನವೀಯ ಸೇವಾ ಕಾರ್ಯಕ್ಕೆ ಕೈಜೋಡಿಸುವ ಮೂಲಕ ಅವರ ಬದುಕಿನಲ್ಲಿ ಆಶಾಕಿರಣ ಮೂಡಿಸೋಣ ಎಂದು ಅವರು ಕರೆ ನೀಡಿದರು.

# ಕರಾವಳಿ–ಮಲೆನಾಡು ಪ್ರವಾಸೋದ್ಯಮಕ್ಕೆ ಸಮಗ್ರ ಉತ್ತೇಜನ

### ಕ್ರೂಸ್, ಹೌಸ್‌ಬೋಟ್, ಬೀಚ್ ಅಭಿವೃದ್ಧಿಗೆ ಕ್ರಮ: ಸಚಿವ ಕೆ.ಜೆ. ಜಾರ್ಜ್

**ಮಂಗಳೂರು, ಸೆ.7:** ಕರ್ನಾಟಕದ ಕರಾವಳಿ ಮತ್ತು ಮಲೆನಾಡು ಪ್ರದೇಶಗಳ ಪ್ರವಾಸೋದ್ಯಮ ಸಾಮರ್ಥ್ಯವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರ ವಿಶೇಷ ಒತ್ತು ನೀಡಿದ್ದು, ನದಿ ಪ್ರವಾಸೋದ್ಯಮ, ಕ್ರೂಸ್, ಹೌಸ್‌ಬೋಟ್, ಬೀಚ್ ಪ್ರವಾಸೋದ್ಯಮ, ವಾಟರ್ ಸ್ಪೋರ್ಟ್ಸ್ ಹಾಗೂ ಸ್ಥಳೀಯ ಸಮುದಾಯ ಆಧಾರಿತ ಪ್ರವಾಸೋದ್ಯಮವನ್ನು ಪರಸ್ಪರ ಜೋಡಿಸುವ ಯೋಜನೆಗಳನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುವುದು ಎಂದು ಇಂಧನ ಹಾಗೂ ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.



ಮಂಗಳೂರಿನ ವಿವಿಧ ಪ್ರವಾಸಿ ತಾಣಗಳಿಗೆ ಭಾನುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ನೇತ್ರಾವತಿ ನದಿ, ತಣ್ಣೀರುಬಾವಿ ಬ್ಲೂ ಫ್ಲ್ಯಾಗ್ ಬೀಚ್, ಕರಾವಳಿ ಪ್ರದೇಶಗಳು ಹಾಗೂ ನ್ಯೂ ಮಂಗಳೂರು ಬಂದರಿನ ಪ್ರವಾಸೋದ್ಯಮ ಸಾಮರ್ಥ್ಯದ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದರು.

**ನೇತ್ರಾವತಿಯಲ್ಲಿ ರಿವರ್ ಕ್ರೂಸ್, ಹೌಸ್‌ಬೋಟ್**

ನೇತ್ರಾವತಿ ನದಿಯಲ್ಲಿ ರಿವರ್ ಕ್ರೂಸ್ ಹಾಗೂ ಹೌಸ್‌ಬೋಟ್ ಪ್ರವಾಸೋದ್ಯಮ ಅಭಿವೃದ್ಧಿಪಡಿಸುವ ಯೋಜನೆ ರೂಪಿಸಲಾಗುತ್ತಿದೆ. ಈ ಯೋಜನೆಗಳಲ್ಲಿ ಸ್ಥಳೀಯ ಮೀನುಗಾರರು ಮತ್ತು ಕರಾವಳಿ ಸಮುದಾಯದ ಜನರನ್ನು ಸಕ್ರಿಯವಾಗಿ ತೊಡಗಿಸಿಕೊಂಡು, ಅವರಿಗೆ ಹೊಸ ಉದ್ಯೋಗ ಮತ್ತು ಆದಾಯದ ಅವಕಾಶಗಳನ್ನು ಸೃಷ್ಟಿಸುವ ಉದ್ದೇಶ ಹೊಂದಲಾಗಿದೆ. ಕ್ರೂಸ್ ಹಡಗುಗಳಲ್ಲಿ ಮಂಗಳೂರಿಗೆ ಬರುವ ಪ್ರವಾಸಿಗರು ಕರಾವಳಿಯ ವಿವಿಧ ಪ್ರವಾಸಿ ತಾಣಗಳಿಗೆ ಭೇಟಿ ನೀಡಲು ಅನುಕೂಲವಾಗುವಂತೆ ಕ್ರೂಸ್ ಸಂಪರ್ಕಿತ ಪ್ರವಾಸಿ ವಲಯಗಳು ಮತ್ತು ಅಗತ್ಯ ಮೂಲಸೌಕರ್ಯ ಅಭಿವೃದ್ಧಿಪಡಿಸುವುದಕ್ಕೂ ಕ್ರಮ ಕೈಗೊಳ್ಳಲಾಗುವುದು ಎಂದು ಕೆ.ಜೆ. ಜಾರ್ಜ್ ತಿಳಿಸಿದರು.

**ಮಂಗಳೂರು–ಗೋವಾ ಕ್ರೂಸ್ ಪ್ರವಾಸೋದ್ಯಮ**

ನ್ಯೂ ಮಂಗಳೂರು ಬಂದರಿನ ಸಾಮರ್ಥ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಹೆಚ್ಚಿನ ದೇಶೀಯ ಮತ್ತು ಅಂತರರಾಷ್ಟ್ರೀಯ ಕ್ರೂಸ್ ಹಡಗುಗಳನ್ನು ಆಕರ್ಷಿಸುವ ಕುರಿತು ಚರ್ಚಿಸಲಾಗಿದೆ. ಮಂಗಳೂರು – ಕಾರವಾರ – ಗೋವಾ ವಲಯದಲ್ಲಿ ದೇಶೀಯ ಕ್ರೂಸ್ ಸೇವೆಗಳನ್ನು ಉತ್ತೇಜಿಸಲು ಖಾಸಗಿ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸಲಾಗುವುದು. ಕರಾವಳಿ ಪ್ರವಾಸೋದ್ಯಮಕ್ಕೆ ಅಗತ್ಯವಿರುವ ಜೆಟ್ಟಿ ಹಾಗೂ ಇತರೆ ಮೂಲಸೌಕರ್ಯಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಅಗತ್ಯ ಅನುಮತಿಗಳಿಗಾಗಿ ಕೇಂದ್ರ ಸರ್ಕಾರದೊಂದಿಗೆ ಸಮನ್ವಯ ಸಾಧಿಸಲಾಗುತ್ತಿದೆ ಎಂದು ಕೆ.ಜೆ. ಜಾರ್ಜ್ ತಿಳಿಸಿದರು.

### ವಾಟರ್ ಸ್ಪೋರ್ಟ್ಸ್‌ಗೆ ಮೂಲಸೌಕರ್ಯ

ವಾಟರ್ ಸ್ಪೋರ್ಟ್ಸ್, ಸಾಹಸ ಪ್ರವಾಸೋದ್ಯಮ ಹಾಗೂ ಕರಾವಳಿ ಉತ್ಸವಗಳನ್ನು ದೊಡ್ಡ ಮಟ್ಟದಲ್ಲಿ ಅಭಿವೃದ್ಧಿಪಡಿಸುವ ಮುನ್ನ, ರಸ್ತೆ ಸಂಪರ್ಕ, ಪ್ರವೇಶ ಮಾರ್ಗ, ಸುರಕ್ಷತೆ ಹಾಗೂ ಪ್ರವಾಸಿಗರಿಗೆ ಅಗತ್ಯವಿರುವ ಮೂಲಸೌಕರ್ಯವನ್ನು ಬಲಪಡಿಸಬೇಕಾಗಿದೆ. ಮೂಲಸೌಕರ್ಯವನ್ನು ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸಿದ ನಂತರ ಖಾಸಗಿ ಹೂಡಿಕೆ ಮತ್ತು ವಾಟರ್ ಸ್ಪೋರ್ಟ್ಸ್ ಚಟುವಟಿಕೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಆಕರ್ಷಿಸಲು ಸಾಧ್ಯವಾಗಲಿದೆ ಎಂದು ಕೆ.ಜೆ. ಜಾರ್ಜ್ ತಿಳಿಸಿದರು.

ಪ್ರವಾಸಿಗರಿಗೆ ಸ್ಥಳೀಯ ಜೀವನಶೈಲಿ ಮತ್ತು ಸಂಸ್ಕೃತಿಯ ಅನುಭವ ನೀಡುವ ನೈಜ ಹೋಂಸ್ಟೇ ವ್ಯವಸ್ಥೆಯನ್ನು ಪ್ರೋತ್ಸಾಹಿಸಲಾಗುವುದು. ಆದರೆ ಹೋಂಸ್ಟೇ ಹೆಸರಿನಲ್ಲಿ ದೊಡ್ಡ ಪ್ರಮಾಣದ ವಾಣಿಜ್ಯ ಲಾಡ್ಜ್ ಅಥವಾ ಹೋಟೆಲ್ ಚಟುವಟಿಕೆ ನಡೆಸುವುದಕ್ಕೆ ಅವಕಾಶ ನೀಡಲಾಗುವುದಿಲ್ಲ.

–ಕೆ.ಜೆ. ಜಾರ್ಜ್, ಇಂಧನ ಹಾಗೂ ಪ್ರವಾಸೋದ್ಯಮ ಸಚಿವ

**ಬ್ಲೂ ಫ್ಲ್ಯಾಗ್ ಬೀಚ್‌ಗಳಲ್ಲಿ ಗುಣಮಟ್ಟದ ಸೌಲಭ್ಯ**

ತಣ್ಣೀರುಬಾವಿ ಬ್ಲೂ ಫ್ಲ್ಯಾಗ್ ಬೀಚ್ ಸೇರಿದಂತೆ ಪ್ರಮುಖ ಬೀಚ್‌ಗಳಲ್ಲಿ ಪ್ರವಾಸಿಗರಿಗೆ ಅಗತ್ಯವಿರುವ ಗುಣಮಟ್ಟದ ಮೂಲಸೌಕರ್ಯ, ಆಹಾರ ಮಳಿಗೆಗಳು, ಶ್ಯಾಕ್‌ಗಳು, ಸ್ವಚ್ಛತಾ ವ್ಯವಸ್ಥೆ ಹಾಗೂ ಇತರೆ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ತಾತ್ಕಾಲಿಕ ಹಾಗೂ ಅಸಂಘಟಿತ ವ್ಯವಸ್ಥೆಗಳ ಬದಲಿಗೆ, ಏಕರೂಪದ ಗುಣಮಟ್ಟ ಮತ್ತು ಸ್ವಚ್ಛತೆಯನ್ನು ಖಚಿತಪಡಿಸುವ ಮಾದರಿಯನ್ನು ರೂಪಿಸಲಾಗುವುದು. ತಣ್ಣೀರುಬಾವಿ ಬ್ಲೂ ಫ್ಲ್ಯಾಗ್ ಬೀಚ್‌ನ ಮೊದಲ ಹಂತದ ಮೂಲಸೌಕರ್ಯ ಕಾಮಗಾರಿಗಳನ್ನು ಆರು ತಿಂಗಳಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಎಂದು ಸಚಿವರು ತಿಳಿಸಿದರು.

# ಪ್ರಧಾನಿ ಮೋದಿ ದೂರದೃಷ್ಟಿ ನಾಯಕತ್ವದಿಂದ ಭಾರತದ ಆರೋಗ್ಯ ರಕ್ಷಣಾ ವ್ಯವಸ್ಥೆಯ ಪರಿವರ್ತನೆ: ಉಪರಾಷ್ಟ್ರಪತಿ

**ನವದೆಹಲಿ,ಸೆ.6:** ಗುವಾಹಟಿಯ ಶ್ರೀಮಂತ ಶಂಕರದೇವ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಪದವಿ ಪಡೆದ ಆರೋಗ್ಯ ವೃತ್ತಿಪರರು ಕರುಣೆ, ನೀತಿಶಾಸ್ತ್ರ ಮತ್ತು ವೈಜ್ಞಾನಿಕ ಶ್ರೇಷ್ಠತೆಯನ್ನು ಎತ್ತಿಹಿಡಿಯಬೇಕು ಮತ್ತು ಮಾನವೀಯತೆಯ ಸೇವೆಗೆ ತಮ್ಮ ಜ್ಞಾನ ಮತ್ತು ಕೌಶಲ್ಯಗಳನ್ನು ಅರ್ಪಿಸಬೇಕು ಎಂದು ಇಂದು ಒತ್ತಾಯಿಸಿದರು. ಅವರು 2023, 2024 ಮತ್ತು 2025 ರ ವರ್ಷಗಳಿಗೆ ಡಾ. ಜಾನ್ ಬೆರ್ರಿ ವೈಟ್ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಘಟಿಕೋತ್ಸವವನ್ನುದ್ದೇಶಿಸಿ ಮಾತನಾಡಿದ ಅವರು, ಮಹಾಪುರುಷ ಶ್ರೀಮಂತ ಶಂಕರದೇವ ಅವರ ಹೆಸರಿನ ವಿಶ್ವವಿದ್ಯಾಲಯವು ಆರೋಗ್ಯ ವಿಜ್ಞಾನ ಶಿಕ್ಷಣ, ಸಂಶೋಧನೆ ಮತ್ತು ಸಾರ್ವಜನಿಕ ಆರೋಗ್ಯಕ್ಕೆ ಪ್ರಮುಖ ಸಂಸ್ಥೆಯಾಗಿ ಹೊರಹೊಮ್ಮಿದೆ ಎಂದು ಹೇಳಿದರು. ಆಂಗ್ಲೋ-ಅಸ್ಸಾಮಿ ವೈದ್ಯಕೀಯ ವಿಜ್ಞಾನ ನಿಘಂಟು ಮತ್ತು ಅಸ್ಸಾಮಿಯಲ್ಲಿ ವೈದ್ಯಕೀಯ ಪಠ್ಯಪುಸ್ತಕಗಳ ಪ್ರಕಟಣೆ ಸೇರಿದಂತೆ ಸ್ಥಳೀಯ ಭಾಷೆಗಳಲ್ಲಿ ವೈದ್ಯಕೀಯ ಜ್ಞಾನವನ್ನು ಉತ್ತೇಜಿಸಲು ಅದರ ಪ್ರಯತ್ನಗಳನ್ನು ಅವರು ಶ್ಲಾಘಿಸಿದರು.



ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತದ ಆರೋಗ್ಯ ಕ್ಷೇತ್ರದ ಪರಿವರ್ತನೆಯನ್ನು ಉಪರಾಷ್ಟ್ರಪತಿ ಆಯುಷ್ಮಾನ್ ಭಾರತ್ ನಂತಹ ಉಪಕ್ರಮಗಳನ್ನು ಉಲ್ಲೇಖಿಸಿ ಎತ್ತಿ ತೋರಿಸಿದರು. 44 ಕೋಟಿಗೂ ಹೆಚ್ಚು ಆಯುಷ್ಮಾನ್ ಕಾರ್ಡ್‌ಗಳನ್ನು ನೀಡಲಾಗಿದೆ ಎಂದು ಅವರು ಗಮನಿಸಿದರು ಮತ್ತು ಈ ಯೋಜನೆಯು ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ವೈದ್ಯಕೀಯ ವೆಚ್ಚದಲ್ಲಿ 2 ಲಕ್ಷ ಕೋಟಿ ರೂ.ಗಳನ್ನು ಉಳಿಸಲು ಸಹಾಯ ಮಾಡಿದೆ ಎಂದು ನೆನಪಿಸಿಕೊಂಡರು.

ಅಸ್ಸಾಂನ ಆರೋಗ್ಯ ಕ್ಷೇತ್ರದ ಪ್ರಗತಿಯನ್ನು ಎತ್ತಿ ತೋರಿಸುತ್ತಾ, ಸಿ.ಪಿ. ರಾಧಾಕೃಷ್ಣನ್ ಅವರು, ರಾಜ್ಯದಲ್ಲಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ 2021 ರಲ್ಲಿ ಏಳರಿಂದ ದ್ವಿಗುಣಗೊಂಡಿದೆ, 15ಕ್ಕೆ ತಲುಪಿದೆ ಮತ್ತು ಇನ್ನೂ ಒಂಬತ್ತು ನಿರ್ಮಾಣ ಹಂತದಲ್ಲಿದೆ ಎಂದು ಹೇಳಿದರು. ಈಶಾನ್ಯದ ಮೊದಲ ಏಮ್ಸ್ ಗುವಾಹಟಿ ಏಮ್ಸ್ ಮತ್ತು ರಾಜ್ಯದ ಮೊದಲ ಪ್ರೋಟಾನ್ ಬೀಮ್ ಥೆರಪಿ ಸೆಂಟರ್ ಸೇರಿದಂತೆ ಅಸ್ಸಾಂನ ಮೂರು ಹಂತದ ಕ್ಯಾನ್ಸರ್-ಕೇರ್ ನೆಟ್ವರ್ಕ್ ಅನ್ನು ಸಹ ಅವರು ಉಲ್ಲೇಖಿಸಿದರು.

ಆರೋಗ್ಯ ಮೂಲಸೌಕರ್ಯವನ್ನು ಬಲಪಡಿಸಿದ್ದಕ್ಕಾಗಿ ಉಪರಾಷ್ಟ್ರಪತಿಯವರು ಮುಖ್ಯಮಂತ್ರಿ ಡಾ. ಹಿಮಂತ ಬಿಸ್ವಾ ಶರ್ಮಾ ಮತ್ತು ಅಸ್ಸಾಂ ಸರ್ಕಾರವನ್ನು ಅಭಿನಂದಿಸಿದರು ಮತ್ತು ಬದಲಾಗುತ್ತಿರುವ ಆರೋಗ್ಯ ರಕ್ಷಣಾ ಭೂದೃಶ್ಯವು ಅಸ್ಸಾಂನ ಹೊರಗಿನ ರೋಗಿಗಳು ಗುವಾಹಟಿಯಲ್ಲಿ ಸುಧಾರಿತ ಚಿಕಿತ್ಸೆಯನ್ನು ಪಡೆಯಲು ಅನುವು ಮಾಡಿಕೊಡುತ್ತಿದೆ ಎಂದು ಹೇಳಿದರು.

ಯುವಜನರು ಆರೋಗ್ಯಕರ ಮತ್ತು ಶಿಸ್ತಿನ ಜೀವನವನ್ನು ನಡೆಸುವಂತೆ ಕರೆ ನೀಡಿದ ಸಿ.ಪಿ. ರಾಧಾಕೃಷ್ಣನ್, ಮಾದಕ ದ್ರವ್ಯ ಸೇವನೆಯಿಂದ ದೂರವಿರಿ ಮತ್ತು ನಶಾಮುಕ್ತ ಭಾರತವನ್ನು ನಿರ್ಮಿಸಲು ಕೊಡುಗೆ ನೀಡಬೇಕೆಂದು ಒತ್ತಾಯಿಸಿದರು. ವಿದ್ಯಾರ್ಥಿಗಳು ಸಾಮಾಜಿಕ ಮಾಧ್ಯಮವನ್ನು ರಚನಾತ್ಮಕವಾಗಿ ಬಳಸಬೇಕು ಮತ್ತು ಅದು ಹೆಚ್ಚಿನ ಸಮಯವನ್ನು ವ್ಯಯಿಸಲು ಬಿಡಬಾರದು ಎಂದು ಅವರು ಸಲಹೆ ನೀಡಿದರು. ಯುವ ಆರೋಗ್ಯ ವೃತ್ತಿಪರರು ವಿಕ್ಷಿತ್ ಮತ್ತು ಸ್ವಸ್ಥ ಭಾರತದ ದೃಷ್ಟಿಕೋನವನ್ನು ಮುನ್ನಡೆಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಾರೆ ಎಂದು ಉಪರಾಷ್ಟ್ರಪತಿಗಳು ಹೇಳಿದರು ಮತ್ತು ಪದವಿ ಪಡೆದ ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಪ್ರಯತ್ನಗಳಲ್ಲಿ ಯಶಸ್ಸನ್ನು ಹಾರೈಸಿದರು.

ಘಟಿಕೋತ್ಸವದಲ್ಲಿ ಅಸ್ಸಾಂ ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ, ಸಿಎಂ ಹಿಮಂತ ಬಿಸ್ವಾ ಶರ್ಮಾ;, ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಸಚಿವ ಅಶೋಕ್ ಸಿಂಘಾಲ್, ಶಿಕ್ಷಣ ಸಚಿವ ಡಾ.ರನೋಜ್ ಪೆಗು, ಮುಖ್ಯ ಕಾರ್ಯದರ್ಶಿ ಡಾ.ರವಿ ಕೋಟಾ, ಎಸ್ಎಸ್‌ಯುಎಚ್ಎಸ್‌ನ ಉಪಕುಲಪತಿ ಡಾ. ಅನುಪ್ ಕುಮಾರ್ ಬರ್ಮನ್, ಅಧ್ಯಾಪಕರು, ಸಂಶೋಧಕರು, ವಿದ್ಯಾರ್ಥಿಗಳು ಮತ್ತು ಪೋಷಕರು ಭಾಗವಹಿಸಿದ್ದರು.

# 2029ರ ಲೋಕಸಭಾ ಚುನಾವಣೆಯಲ್ಲಿ ಇಂಡಿಯಾ ಕೂಟದ ನೇತೃತ್ವ ರಾಹುಲ್ ಗಾಂಧಿ ಹೆಗಲಿಗೆ: ಕೆ.ಸಿ.ವೇಣುಗೋಪಾಲ್

**ನವದೆಹಲಿ,ಸೆ.6:** 2029 ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹಿರಿಯ ನಾಯಕ ರಾಹುಲ್ ಗಾಂಧಿ ಇಂಡಿಯಾ ಬ್ಲಾಕ್ ಅನ್ನು ಮುನ್ನಡೆಸಲಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಭಾನುವಾರ ಹೇಳಿದ್ದಾರೆ, ಟಿವಿಕೆ ತನ್ನ ನಾಯಕ ಮತ್ತು ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರನ್ನು ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯಾಗಿ ಪ್ರಸ್ತಾಪಿಸಿದೆ ಎಂಬುದನ್ನು ನಿರಾಕರಿಸಿದ್ದಾರೆ.



2029 ರ ಸಂಸತ್ ಚುನಾವಣೆಯಲ್ಲಿ ವಿಜಯ್ ಅವರನ್ನು ಪ್ರಧಾನಿ ಹುದ್ದೆಗೆ ಬಿಂಬಿಸುವ ವರದಿಗಳ ಕುರಿತು ವರದಿಗಾರರ ಪ್ರಶ್ನೆಗಳಿಗೆ ವೇಣುಗೋಪಾಲ್ ಉತ್ತರಿಸುತ್ತಿದ್ದರು. ಟಿವಿಕೆ ಅಂತಹ ಯಾವುದೇ ಬೇಡಿಕೆಯನ್ನು ಇಟ್ಟಿಲ್ಲ ಎಂದು ಅವರು ಹೇಳಿದರು. "ಯಾರೂ ಅಂತಹ ಗೊಂದಲವನ್ನು ಸೃಷ್ಟಿಸಬಾರದು. ರಾಹುಲ್ ಗಾಂಧಿ ಇಂಡಿಯಾ ಮೈತ್ರಿಕೂಟದ ಮುಖವಾಗಲಿದ್ದಾರೆ" ಎಂದು ಅವರು ಹೇಳಿದರು. ವಿದ್ಯಾರ್ಥಿಗಳು, ರೈತರು ಮತ್ತು ಯುವಕರಿಗೆ ಸಂಬಂಧಿಸಿದ ವಿಷಯಗಳ ಕುರಿತು ಗಾಂಧಿಯವರ ರಾಜಕೀಯ ಪ್ರಚಾರಗಳು ದೇಶಾದ್ಯಂತ ವ್ಯಾಪಕ ಗಮನ ಸೆಳೆದಿವೆ ಎಂದು ವೇಣುಗೋಪಾಲ್ ಹೇಳಿದರು. "ಇಂದು ಭಾರತದಲ್ಲಿ ಹೆಚ್ಚು ಚರ್ಚಿಸಲ್ಪಡುತ್ತಿರುವುದು ಅವರು ಮುನ್ನಡೆಸುತ್ತಿರುವ ಹೋರಾಟ – ಅದು ವಿದ್ಯಾರ್ಥಿಗಳು, ರೈತರು ಅಥವಾ ಯುವಕರಿಗಾಗಿ ಇರಲಿ. ಎಲ್ಲರೂ ಅದನ್ನು ಒಪ್ಪಿಕೊಂಡಿದ್ದಾರೆ" ಎಂದು ಅವರು ಹೇಳಿದರು.

2029 ರ ಚುನಾವಣೆಯಲ್ಲಿ ಗಾಂಧಿಯವರು ಭಾರತ ಮೈತ್ರಿಕೂಟವನ್ನು ಮುನ್ನಡೆಸುತ್ತಾರೆಯೇ ಎಂದು ಕೇಳಿದಾಗ, ವೇಣುಗೋಪಾಲ್, "ಖಂಡಿತ. ರಾಹುಲ್ ಗಾಂಧಿ ಇಂದು ಭಾರತದ ಜನರು ಪ್ರೀತಿಸುವ ಅತ್ಯಂತ ಪ್ರಮುಖ ನಾಯಕ. ಎಲ್ಲರೂ ರಾಹುಲ್ ಗಾಂಧಿಯವರ ನಿರ್ಧಾರಗಳು ಮತ್ತು ಕಾರ್ಯಗಳನ್ನು ಬಹಳ ಗಮನದಿಂದ ಕೇಳುತ್ತಿದ್ದಾರೆ" ಎಂದು ಹೇಳಿದರು. ಕೆಲವು ರಾಜ್ಯಗಳಲ್ಲಿ ತನ್ನ ಮತದಾರರ ನಡುವಿನ ಭಿನ್ನಾಭಿಪ್ರಾಯಗಳ ಹೊರತಾಗಿಯೂ ಭಾರತ ಮೈತ್ರಿಕೂಟವು ಪ್ರಬಲವಾಗಿ ಉಳಿದಿದೆ ಎಂದು ಅವರು ಹೇಳಿದರು. "ಭಾರತ ಮೈತ್ರಿಕೂಟ ಮುಂದುವರಿಯುತ್ತಿದೆ.

ಕೆಲವು ರಾಜ್ಯಗಳಲ್ಲಿ ಅವರು ಪರಸ್ಪರ ಸ್ಪರ್ಧಿಸುತ್ತಿರುವ ಕೆಲವು ಸಮಸ್ಯೆಗಳಿವೆ. ಇಲ್ಲದಿದ್ದರೆ, ಭಾರತ ಮೈತ್ರಿಕೂಟವೇ ಮುಂದುವರಿಯುತ್ತಿದೆ. ಅದು ಸತ್ಯ" ಎಂದು ಅವರು ಹೇಳಿದರು.

ಭಾರತ ಮೈತ್ರಿಕೂಟದ ಭಾಗವಾಗಿರುವ ಸಿಪಿಐಎಂ ಅನ್ನು ಉಲ್ಲೇಖಿಸಿ, ಕೇರಳದ ಪಕ್ಷವು ತನ್ನ ತಪ್ಪುಗಳಿಂದ ಕಲಿಯದೆ ಮುಂದುವರಿಯುತ್ತಿದೆ ಎಂದು ವೇಣುಗೋಪಾಲ್ ಆರೋಪಿಸಿದರು. "ಹಾಗಾದರೆ, ಇಲ್ಲಿನ ಸಿಪಿಐಎಂ ಯಾವುದೇ ಪಾಠ ಕಲಿಯದೆ ಮುಂದುವರಿಯುತ್ತಿದೆ. ಅವರು ಕಲಿಯಲು ನಿರ್ಧರಿಸಿದರೂ, ವಿರೋಧ ಪಕ್ಷದ ನಾಯಕ ಪಿಣರಾಯಿ ವಿಜಯನ್ ಅವರಿಗೆ ಹಾಗೆ ಮಾಡಲು ಬಿಡುತ್ತಿಲ್ಲ" ಎಂದು ಅವರು ಹೇಳಿದರು. ಮೈತ್ರಿಕೂಟದೊಳಗಿನ ಭಿನ್ನಾಭಿಪ್ರಾಯಗಳನ್ನು ಪರಿಹರಿಸಲಾಗುವುದು ಮತ್ತು ಬಣವು ಬಲವಾಗಿ ಉಳಿಯುವಂತೆ ನೋಡಿಕೊಳ್ಳಲಾಗುವುದು ಎಂದು ವೇಣುಗೋಪಾಲ್ ಹೇಳಿದರು. ಬಿಜೆಪಿ ಸರ್ಕಾರ ದೇಶವನ್ನು "ಕತ್ತಲೆ ಯುಗ"ಕ್ಕೆ ಕರೆದೊಯ್ಯುತ್ತಿದೆ ಎಂದು ಅವರು ಆರೋಪಿಸಿದರು. ನವದೆಹಲಿಯ ಜಂತರ್ ಮಂತರ್‌ನಲ್ಲಿ ನಡೆದ ವಿದ್ಯಾರ್ಥಿಗಳ ಪ್ರತಿಭಟನೆ ಮತ್ತು ನಂತರದ ಪೊಲೀಸ್ ದಬ್ಬಾಳಿಕೆಯನ್ನು ಉಲ್ಲೇಖಿಸಿದ ವೇಣುಗೋಪಾಲ್, ಕೇಂದ್ರವು ಈ ಕ್ರಮವನ್ನು ಸಮರ್ಥಿಸುತ್ತಲೇ ಇದೆ ಎಂದು ಆರೋಪಿಸಿದರು.

"ಈ ಘಟನೆ ಜಂತರ್ ಮಂತರ್‌ನಲ್ಲಿ ನಡೆದಿದೆ. ಕೇಂದ್ರ ಸರ್ಕಾರ ಅದನ್ನು ಸಮರ್ಥಿಸುತ್ತಲೇ ಇದೆ. ಅವರು ವಿದ್ಯಾರ್ಥಿಗಳ ಮೇಲಿನ ದಬ್ಬಾಳಿಕೆಯನ್ನು ಸಹ ಸಮರ್ಥಿಸುತ್ತಿದ್ದಾರೆ" ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು. ಉತ್ತರಾಖಂಡದ ಹಲ್ದ್ವಾನಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾಷಣ ಮಾಡಿದ ವೇದಿಕೆಯ "ಶುದ್ಧೀಕರಣ"ವನ್ನು ವೇಣುಗೋಪಾಲ್ ಉಲ್ಲೇಖಿಸಿದರು, ಇಂತಹ ಬೆಳವಣಿಗೆಗಳು ದೇಶವು ಕರಾಳ ಯುಗದತ್ತ ಸಾಗುತ್ತಿದೆ ಎಂದು ಆರೋಪಿಸಿದರು. "ಇದು ಭಾರತವನ್ನು ಕರಾಳ ಯುಗಕ್ಕೆ ಕರೆದೊಯ್ಯುತ್ತಿದೆ. ಇದರ ವಿರುದ್ಧ ಬಲವಾದ ಹೋರಾಟ ದೇಶದಲ್ಲಿ ಅತ್ಯಗತ್ಯ, ಮತ್ತು ಅದು ನಮ್ಮ ಹಿತಾಸಕ್ತಿಯೂ ಆಗಿದೆ" ಎಂದು ಅವರು ಹೇಳಿದರು.




ಗೋವಾದ ಪಣಜಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮುಖ್ಯಮಂತ್ರಿ ಡಾ.ಪ್ರಮೋದ್ ಸಾವಂತ್ ಅವರೊಂದಿಗೆ ಗೋವಾಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಪರಿಶೀಲನಾ ಸಭೆಯಲ್ಲಿ ಪಾಲ್ಗೊಂಡರು.

# ಸಿಕ್ಕಿಂನ ಮಂಗನ್ ಜಿಲ್ಲೆಯಲ್ಲಿ ಭೂಕುಸಿತ: ಭಾರಿ ಪ್ರಮಾಣದ ಹಾನಿ

**ಗ್ಯಾಂಗ್ಟಕ್,ಸೆ.6:** ಸಿಕ್ಕಿಂನ ಮಂಗನ್ ಜಿಲ್ಲೆಯಲ್ಲಿ ಭಾನುವಾರ ಮುಂಜಾನೆ ಭಾರಿ ಭೂಕುಸಿತ ಸಂಭವಿಸಿದ್ದು, ಇದರಿಂದಾಗಿ ಎರಡು ನದಿಗಳ ಹರಿವಿಗೆ ಭಾಗಶಃ ಅಡ್ಡಿಯಾಗಿದ್ದು, ನೀರು ಸಂಗ್ರಹಗೊಂಡಿದೆ.

ಥೇಂಗ್ ಸುರಂಗದ ಎದುರು ನಾಗಾ ಅರಣ್ಯ ಪ್ರದೇಶದ ನಾಗಾ-ದೋಶಾ (ನಾಗಾ-ತೋಸಾ) ರಸ್ತೆಯ ಹೊಸ ರಸ್ತೆ ಕಟಿಂಗ್ ಬಳಿ ಬೃಹತ್ ಭೂಕುಸಿತ ಸಂಭವಿಸಿದೆ. ಬೆಟ್ಟದ ಇಳಿಜಾರಿನ ಗಣನೀಯ ಭಾಗವು ಚುಂಗ್ಥಾಂಗ್ ಉಪವಿಭಾಗದ ತೀಸ್ತಾ ಮತ್ತು ಚ್ಯಕೂಂಗ್ ನದಿಗಳ ಸಂಗಮದ ಬಳಿ ಕುಸಿದಿದೆ ಎಂದು ಅವರು ಹೇಳಿದರು. ಭೂಕುಸಿತ ಎರಡೂ ನದಿಗಳ ಹರಿವನ್ನು ಭಾಗಶಃ ನಿರ್ಬಂಧಿಸಿದೆ ಎಂದು ಅಧಿಕಾರಿಗಳು ಹೇಳಿದರು. ಇಲ್ಲಿಯವರೆಗೆ ಯಾವುದೇ ಸಾವು ನೋವುಗಳು ಅಥವಾ ಗಾಯಗಳಾಗಿರುವ ಬಗ್ಗೆ ವರದಿಯಾಗಿಲ್ಲ, ಆದರೆ ಆಸ್ತಿಗೆ ಹಾನಿಯ ಪ್ರಮಾಣವನ್ನು ಪರಿಶೀಲಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಂಕಲಾಂಗ್ ಮತ್ತು ಫಿಡಾಂಗ್ ಬಳಿ ನದಿಮಟ್ಟವು ಪ್ರಸ್ತುತ ಸಾಮಾನ್ಯವಾಗಿದೆ, ಆದರೂ ನೀರು ಕೆಸರುಮಯವಾಗಿಯೇ ಇದೆ ಎಂದು ಅವರು ಹೇಳಿದರು. ನೀರಿನ ಮಟ್ಟವನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲು ಮತ್ತು ಯಾವುದೇ ಗಮನಾರ್ಹ ಬದಲಾವಣೆಗಳನ್ನು ತಕ್ಷಣ ವರದಿ ಮಾಡಲು ಸ್ಥಳೀಯ ಆಡಳಿತಕ್ಕೆ ನಿರ್ದೇಶನ ನೀಡಲಾಗಿದೆ ಎಂದು ಅಧಿಕಾರಿಗಳು ಹೇಳಿದರು. ನದಿ ತೀರದ ಕೆಳಭಾಗದಲ್ಲಿ ವಾಸಿಸುವ ಸಾರ್ವಜನಿಕರು ತೀವ್ರ ಜಾಗರೂಕರಾಗಿರಬೇಕು ಮತ್ತು ಪರಿಸ್ಥಿತಿ ಸಂಪೂರ್ಣ ಸುರಕ್ಷಿತವಾಗುವವರೆಗೆ ನದಿಗಳ ಹತ್ತಿರ ಹೋಗಬಾರದು ಎಂದು ಜಿಲ್ಲಾಡಳಿತ ಮತ್ತು ಮಂಗನ್ ಪೊಲೀಸರು ಸೂಚಿಸಿದ್ದಾರೆ.



# ಜೆಎನ್‌ಯು ಪ್ರಾಧ್ಯಾಪಕನ ವಿರುದ್ಧ ಲೈಂಗಿಕ ಕಿರುಕುಳ ಆರೋಪ; ವಿದ್ಯಾರ್ಥಿಗಳಿಂದ ದೂರು


**ನವದೆಹಲಿ,ಸೆ.6:** ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಮೇಲೆ ಕನಿಷ್ಠ 10 ವಿದ್ಯಾರ್ಥಿನಿಯರು ಲೈಂಗಿಕ ಕಿರುಕುಳದ ಆರೋಪ ಮಾಡಿದ್ದಾರೆ. ವಿಶ್ವವಿದ್ಯಾಲಯದ ಆಂತರಿಕ ದೂರು ಸಮಿತಿಗೆ ವಿದ್ಯಾರ್ಥಿಗಳಿಂದ ದೂರು ಸಲ್ಲಿಕೆಯಾಗಿದೆ.

ವಿದ್ಯಾರ್ಥಿಗಳು ನೀಡಿದ ದೂರಿನಲ್ಲಿ, ಪ್ರೊಫೆಸರ್ ಮೀಟಿಂಗ್ ನೆಪದಲ್ಲಿ ತನ್ನ ಮನೆಗೆ ಕರೆಸಿಕೊಂಡು ಅನುಚಿತವಾಗಿ ವರ್ತಿಸಿದ್ದಾರೆ. ತರಗತಿ ವೇಳೆ ವಿದ್ಯಾರ್ಥಿನಿಯರಿಗೆ ಆಕ್ಷೇಪಾರ್ಹ ಕಾಮೆಂಟ್‌ಗಳನ್ನ ಸಹ ಮಾಡಲಾಗಿದೆ ಎಂದು ಆರೋಪಿಸಿದ್ದಾರೆ. ಐಸಿಸಿ ಒಂದು ತಿಂಗಳ ಹಿಂದೆ ದೂರು ಸ್ವೀಕರಿಸಿದ್ದು, ಅಂದಿನಿಂದ ಆರೋಪಗಳ ಕುರಿತು ತನಿಖೆ ಪ್ರಾರಂಭಿಸಿದೆ. ಸಮಿತಿಯು ಪ್ರಸ್ತುತ ಈ ವಿಷಯದ ಬಗ್ಗೆ ತನಿಖೆ ನಡೆಸುತ್ತಿದ್ದು, ವಿಚಾರಣೆಯ ಸಮಯದಲ್ಲಿ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳಿಂದಲೂ ಮಾಹಿತಿ ಸಂಗ್ರಹಿಸುವ ಸಾಧ್ಯತೆಯಿದೆ.

ಈ ವಿಷಯದಲ್ಲಿ ಯಾವುದೇ ಪೊಲೀಸ್ ದೂರು ದಾಖಲಾಗಿರುವ ಬಗ್ಗೆ ಇಲ್ಲಿಯವರೆಗೆ ಯಾವುದೇ ಮಾಹಿತಿ ಇಲ್ಲ. ಈ ಕುರಿತು ಜೆಎನ್‌ಯು ಕುಲಪತಿಗಳು ಕೂಡ ಯಾವುದೇ ಹೇಳಿಕೆ ನೀಡಿಲ್ಲ ಎಂದು ತಿಳಿದುಬಂದಿದೆ.

# ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮೂರು ದಿನ ಶ್ರೀಲಂಕಾಗೆ ಭೇಟಿ

**ನವದೆಹಲಿ,ಸೆ.6:** ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಸೆ.8 ರಿಂದ 10 ರವರೆಗೆ ಶ್ರೀಲಂಕಾಕ್ಕೆ ಅಧಿಕೃತ ಭೇಟಿ ನೀಡಲಿದ್ದಾರೆ. ಈ ಭೇಟಿಯ ಸಮಯದಲ್ಲಿ, ರಕ್ಷಣಾ ಸಚಿವ ಶ್ರೀಲಂಕಾದ ನಾಯಕತ್ವದೊಂದಿಗೆ ಹಲವಾರು ವಿಷಯಗಳ ಕುರಿತು ಸಮಾಲೋಚನೆ ನಡೆಸಲಿದ್ದಾರೆ ಮತ್ತು ಕೊಲಂಬೊದಲ್ಲಿ ಭಾರತೀಯ ವಲಸಿಗರೊಂದಿಗೆ ಸಂವಾದ ನಡೆಸಲಿದ್ದಾರೆ. ಅವರು ರಕ್ಷಣಾ ಸಚಿವಾಲಯ ಮತ್ತು ವಿದೇಶಾಂಗ ಸಚಿವಾಲಯದ ಹಿರಿಯ ಅಧಿಕಾರಿಗಳನ್ನು ಒಳಗೊಂಡ ಉನ್ನತ ಮಟ್ಟದ ನಿಯೋಗವನ್ನು ಮುನ್ನಡೆಸಲಿದ್ದಾರೆ.




ಭಾರತ ಮತ್ತು ಶ್ರೀಲಂಕಾ ಆಳವಾದ ನಾಗರಿಕ ಸಂಬಂಧಗಳನ್ನು ಮತ್ತು ಬಹುಮುಖ ಪಾಲುದಾರಿಕೆಯನ್ನು ಹಂಚಿಕೊಂಡಿದ್ದು, ಪ್ರಾದೇಶಿಕ ಭದ್ರತೆ, ರಕ್ಷಣೆ, ಆರ್ಥಿಕ ಮತ್ತು ವ್ಯಾಪಾರ ಸಹಕಾರ ಮತ್ತು ಬಲವಾದ ಜನರ-ಜನರ ಸಂಬಂಧಗಳಿಂದ ಇದು ಆಧಾರವಾಗಿದೆ. ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಭಾರತವು ಶ್ರೀಲಂಕಾಕ್ಕೆ ಸಹಾಯ ಮಾಡಿದಾಗ ಮತ್ತು 2025 ರಲ್ಲಿ ಶ್ರೀಲಂಕಾದಲ್ಲಿ ದಿತ್ವಾ ಚಂಡಮಾರುತದ ನಂತರ ಮೊದಲ ಪ್ರತಿಕ್ರಿಯೆ ನೀಡುವವರಲ್ಲಿ ಒಂದಾಗಿ ನೆರವು ನೀಡಿದಾಗ ದ್ವಿಪಕ್ಷೀಯ ಸಂಬಂಧವು ಮತ್ತಷ್ಟು ಬಲವನ್ನು ಪಡೆಯಿತು. ಇದು 'ನೆರೆಹೊರೆಯವರು ಮೊದಲು' ನೀತಿ ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಮಹಾಸಾಗರ್ (ಪ್ರದೇಶಗಳಾದ್ಯಂತ ಭದ್ರತೆ ಮತ್ತು ಬೆಳವಣಿಗೆಗೆ ಪರಸ್ಪರ ಮತ್ತು ಸಮಗ್ರ ಪ್ರಗತಿ) ದೃಷ್ಟಿಕೋನದ ಮೇಲೆ ಭಾರತದ ನಿರಂತರ ಬದ್ಧತೆ ಮತ್ತು ಒತ್ತು ನೀಡುವಿಕೆಯನ್ನು ಒತ್ತಿಹೇಳುತ್ತದೆ.

ಶ್ರೀಲಂಕಾಕ್ಕೆ ರಕ್ಷಾ ಮಂತ್ರಿಯವರ ಭೇಟಿಯು ಬಲವಾದ ಸಮುದ್ರ ಮತ್ತು ರಕ್ಷಣಾ ಪಾಲುದಾರಿಕೆ ಸೇರಿದಂತೆ ಪರಸ್ಪರ ಪ್ರಯೋಜನಕಾರಿ ಕ್ಷೇತ್ರಗಳಲ್ಲಿ ಸಾಂಪ್ರದಾಯಿಕವಾಗಿ ಬಲವಾದ ಮತ್ತು ಸ್ನೇಹಪರ ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಬಲಪಡಿಸುತ್ತದೆ.

# ಮಧ್ಯಪ್ರದೇಶದಲ್ಲಿ ನಕಲಿ ಮದ್ಯ ಸೇವಿಸಿ 12 ಮಂದಿ ಸಾವು



**ಸಾಗರ:** ಮಧ್ಯಪ್ರದೇಶದ ಸಾಗರ ಜಿಲ್ಲೆಯಲ್ಲಿ ನಕಲಿ ಮದ್ಯ ಸೇವಿಸಿ ಕನಿಷ್ಠ 12 ಮಂದಿ ಮೃತಪಟ್ಟಿದ್ದು, ಹತ್ತಕ್ಕೂ ಹೆಚ್ಚು ಮಂದಿ ತೀವ್ರ ಅಸ್ವಸ್ಥಗೊಂಡು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸಾಗರ ಜಿಲ್ಲಾ ಕೇಂದ್ರದಿಂದ ಸುಮಾರು 30 ಕಿ.ಮೀ ದೂರದಲ್ಲಿರುವ ಬಂದಾ ತೆಹಸಿಲ್ ವ್ಯಾಪ್ತಿಯ ಬರಾಜ್, ಘೂಘರ್, ನಾವ್ರಾಜ್ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಶನಿವಾರ ರಾತ್ರಿ ಗ್ರಾಮಸ್ಥರು ಮದ್ಯ ಸೇವಿಸಿದ್ದರು. ಭಾನುವಾರ ಮುಂಜಾನೆ ವೇಳೆಗೆ ಹಲವರಿಗೆ ತೀವ್ರ ತಲೆನೋವು, ವಾಂತಿ ಹಾಗೂ ಕಣ್ಣು ಮಂಜಾಗುವಿಕೆ ಕಾಣಿಸಿಕೊಂಡಿದೆ. ಕೂಡಲೇ ಕುಟುಂಬಸ್ಥರು ಅವರನ್ನು ಬುಂದೇಲಖಂಡ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೆ 12 ಮಂದಿ ಮೃತಪಟ್ಟಿದ್ದಾರೆ. ಚಿಕಿತ್ಸೆ ಪಡೆಯುತ್ತಿರುವ ಕೆಲವರಲ್ಲಿ ದೇಹ ಹಾಗೂ ಚರ್ಮ ನೀಲಿಬಣ್ಣಕ್ಕೆ ತಿರುಗುವ ಸೈನೋಸಿಸ್ ಮತ್ತು ಸ್ನಾಯು ಬಿಗಿತದಂತಹ ಲಕ್ಷಣಗಳು ಕಂಡುಬಂದಿವೆ. ಮದ್ಯದಲ್ಲಿ ಅತ್ಯಂತ ವಿಷಕಾರಿ ಮಿಥೈಲ್ ಆಲ್ಕೋಹಾಲ್ ಬೆರೆತಿರುವ ಸಾಧ್ಯತೆ ಇದೆ ಎಂದು ಮುಖ್ಯ ವೈದ್ಯಕೀಯ ಅಧಿಕಾರಿ ಶಂಕೆ ವ್ಯಕ್ತಪಡಿಸಿದ್ದಾರೆ.

ಘಟನೆ ಕುರಿತು ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ತನಿಖೆಗೆ ಆದೇಶಿಸಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಮುನ್ನೆಚ್ಚರಿಕಾ ಕ್ರಮವಾಗಿ ಸುತ್ತಮುತ್ತಲಿನ ಆರು ಮದ್ಯದ ಅಂಗಡಿಗಳನ್ನು ಸೀಲ್ ಮಾಡಲಾಗಿದೆ.

ಪ್ರಾಥಮಿಕ ತನಿಖೆಯಲ್ಲಿ ನಕಲಿ ಮದ್ಯದ ಜಾಲವು ಉತ್ತರ ಪ್ರದೇಶದ ಲಲಿತಪುರ ಗಡಿಯಿಂದ ಕಾರ್ಯನಿರ್ವಹಿಸುತ್ತಿರುವುದು ಪತ್ತೆಯಾಗಿದೆ. ಅಲ್ಲಿ ನಕಲಿ ಮದ್ಯ ತಯಾರಿಸಿ, ಅಸಲಿ ಬ್ರ್ಯಾಂಡ್‌ಗಳಂತೆ ಕಾಣುವಂತೆ ನಕಲಿ ಲೇಬಲ್, ಕ್ಯಾಪ್ ಹಾಗೂ ಕ್ಯೂಆರ್ ಕೋಡ್‌ಗಳನ್ನು ಬಾಟಲಿಗಳಿಗೆ ಅಂಟಿಸಿ, ಕಾರು ಮತ್ತು ಬೈಕ್‌ಗಳ ಮೂಲಕ ಸಾಗರ ಜಿಲ್ಲೆಯ ಗಡಿ ಗ್ರಾಮಗಳಿಗೆ ಪೂರೈಸಲಾಗುತ್ತಿತ್ತು ಎನ್ನಲಾಗಿದೆ.

# 200ಕ್ಕೂ ಹೆಚ್ಚು ಅಲ್ಪಸಂಖ್ಯಾತ ಮತದಾರರ ಹೆಸರು ಅಳಿಸುವ ಹುನ್ನಾರ; ಬಿಜೆಪಿ ಏಜೆಂಟ್ ಬಂಧನ

**ರಾಂಚಿ,ಸೆ.6:** ಜಾರ್ಖಂಡ್‌ನ ಗೋಡ್ಡಾ ಜಿಲ್ಲೆಯಲ್ಲಿ ಬಿಜೆಪಿ ಪಕ್ಷದ ಬೂತ್ ಮಟ್ಟದ ಏಜೆಂಟ್ ಒಬ್ಬನನ್ನ ಪೊಲೀಸರು ಬಂಧಿಸಿದ್ದಾರೆ. ವಿನಯ್ ಕುಮಾರ್ ಮಂಡಲ್ ಬಂಧಿತ ಬಿಜೆಪಿ ಏಜೆಂಟ್. ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆ ವೇಳೆ 200 ಫಾರ್ಮ್-7 ಅರ್ಜಿಗಳನ್ನು ಸಲ್ಲಿಸಿ, ಮತದಾರರ ಹೆಸರುಗಳನ್ನ ಪಟ್ಟಿಯಿಂದ ತೆಗೆದುಹಾಕಲು ಯತ್ನಿಸಿದ ಆರೋಪದ ಮೇಲೆ ಬಂಧಿಸಲಾಗಿದೆ. ಬಳಿಕ ಏಜೆಂಟ್‌ನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.



ಗೋಡ್ಡಾ ಬ್ಲಾಕ್ನ ಪಚ್ರುಖಿ ಗ್ರಾಮದ ಬೂತ್ ಸಂಖ್ಯೆ 231ರ ಬೂತ್ ಮಟ್ಟದ ಅಧಿಕಾರಿ ಹಾಗೂ ದೂರುದಾರರು ನೀಡಿರುವ ಮಾಹಿತಿಯ ಪ್ರಕಾರ, ವಿನಯ್ ಮಂಡಲ್ ಸಲ್ಲಿಸಿದ ಎಲ್ಲಾ ಅರ್ಜಿಗಳೂ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಮತದಾರರ ಹೆಸರಿನಲ್ಲಿದ್ದವು. ಹೆಸರುಗಳನ್ನ ಅಳಿಸಲು ಅರ್ಜಿ ಸಲ್ಲಿಸಿದವರಲ್ಲಿ BLO ಸಜಿದಾ ಬೀಬಿ ಹಾಗೂ ಅವರ ಪತಿಯ ಹೆಸರೂ ಸೇರಿವೆ.

ವಿನಯ್ ವಿರುದ್ಧ ಸೆಪ್ಟೆಂಬರ್ 3ರಂದು ಗೋಡ್ಡಾ ಮುಫಸ್ಸಿಲ್ ಪೊಲೀಸ್ ಠಾಣೆಯಲ್ಲಿ FIR ದಾಖಲಿಸಲಾಗಿತ್ತು. ಆತನನ್ನ BLA 2 ಎಂದು ಗುರುತಿಸಲಾಗಿದ್ದು, ಭಾರತೀಯ ನ್ಯಾಯ ಸಂಹಿತೆಯ ನಕಲಿ ದಾಖಲೆ ಸೃಷ್ಟಿ ಹಾಗೂ ಶಾಂತಿ ಭಂಗಕ್ಕೆ ಪ್ರಚೋದಿಸುವ ಉದ್ದೇಶಪೂರ್ವಕ ಅವಮಾನಕ್ಕೆ ಸಂಬಂಧಿಸಿದ ಸೆಕ್ಷನ್ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಜೊತೆಗೆ, ಮತದಾರರ ಪಟ್ಟಿಯ ಸಿದ್ಧತೆ ವೇಳೆ ಸುಳ್ಳು ಘೋಷಣೆಗೆ ಸಂಬಂಧಿಸಿದ ಜನಪ್ರತಿನಿಧಿತ್ವ ಕಾಯ್ದೆಯ ಸೆಕ್ಷನ್ 31ರ ಅಡಿಯಲ್ಲೂ ಪ್ರಕರಣ ದಾಖಲಾಗಿದೆ. ದೂರುದಾರ ಮುಕ್ಕರಂ ಅನ್ಸಾರಿ ಕೂಡ ಬೂತ್ ಸಂಖ್ಯೆ 231ರ ಮತದಾರರಾಗಿದ್ದು, ವಿನಯ್ ಸಲ್ಲಿಸಿದ್ದ ಫಾರ್ಮ್-7 ಅರ್ಜಿಗಳಲ್ಲಿ ಅವರ ಹೆಸರೂ ಇದೆ ಎನ್ನಲಾಗಿದೆ. ತಮ್ಮ ದೂರಿನಲ್ಲಿ ಅನ್ಸಾರಿ, ಮಂಡಲ್ ಫಾರ್ಮ್-7 ಸಲ್ಲಿಸಿರುವ ಎಲ್ಲ ಮತದಾರರೂ ನಿಜವಾದ ಮತದಾರರು ಎಂದು ತಿಳಿಸಿದ್ದಾರೆ.

ಅನ್ಸಾರಿ ನೀಡಿದ ಮಾಹಿತಿಯ ಪ್ರಕಾರ, ಮಂಡಲ್ ಬೂತ್ ಸಂಖ್ಯೆ 231ಕ್ಕೆ ಸೇರಿದ ಮತದಾರರ ಹೆಸರಿನ ಸುಮಾರು 200 ಫಾರ್ಮ್-7 ಅರ್ಜಿಗಳನ್ನು ಬಿಎಲ್‌ಓ ಸಜಿದಾ ಬೀಬಿ ಅವರಿಗೆ ಸಲ್ಲಿಸಿದ್ದರು. ಈ ಅರ್ಜಿಗಳ ಮೂಲಕ ನಮ್ಮ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆಸುವ ಹುನ್ನಾರ ನಡೆಸಿದ್ದರು. ವಿಷಯ ತಿಳಿದ ಬಳಿಕ ನಾವು ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದೇವೆ ಎಂದು ಅವರು ಹೇಳಿದ್ದಾರೆ. ನಂತರ ಮಂಡಲ್ ಅವರನ್ನು ಗ್ರಾಮಕ್ಕೆ ಕರೆಸಿ ಅರ್ಜಿಗಳ ಕುರಿತು ವಿಚಾರಣೆ ನಡೆಸಲಾಯಿತು. ಬಿಜೆಪಿ ಬಿಎಲ್‌ಓಗಳ ಸಭೆಯ ಬಳಿಕ ಈ ಅರ್ಜಿಗಳನ್ನು ತಮಗೆ ನೀಡಲಾಗಿತ್ತು ಎಂದು ಮಂಡಲ್ ಹೇಳಿದ್ದಾಗಿ ಅವರು ತಿಳಿಸಿದ್ದಾರೆ. ಆಗಸ್ಟ್ 29ರಂದು ಮಂಡಲ್ ಸುಮಾರು 200 ಫಾರ್ಮ್-7 ಅರ್ಜಿಗಳನ್ನು ತಮ್ಮ ಬಳಿ ತಂದಿದ್ದರು ಎಂದು ಬಿಎಲ್‌ಓ ಸಜಿದಾ ಬೀಬಿ ದೃಢಪಡಿಸಿದ್ದಾರೆ. ಸದ್ಯ ಪ್ರಕರಣದ ತನಿಖೆ ಮುಂದುವರಿದಿದೆ.

# ಇಸ್ರೋ ಹಸ್ತಾಂತರಿಸುವುದೇಕೆ: ಖಾಸಗೀಕರಣದ ಒತ್ತಾಯಕ್ಕೆ ವಿರೋಧ ಪಕ್ಷಗಳ ಆಕ್ಷೇಪ

**ನವದೆಹಲಿ,ಸೆ.6:** ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಖಾಸಗೀಕರಣದ ಒತ್ತಾಯದ ಮೇಲೆ ಭಾರಿ ರಾಜಕೀಯ ಬಿರುಗಾಳಿ ಎದ್ದಿದ್ದು, ವಿರೋಧ ಪಕ್ಷಗಳು ಸರ್ಕಾರದ ಉದ್ದೇಶಗಳನ್ನು ಬೆಂಬಲಿಸುತ್ತಿವೆ. ಏತನ್ಮಧ್ಯೆ, ಹಲವಾರು ಇಸ್ರೋ ಸಿಬ್ಬಂದಿ ಸಂಸ್ಥೆಗಳು ಸ್ಪಷ್ಟತೆ ಕೋರಿ ಇಸ್ರೋ ಮುಖ್ಯಸ್ಥರಿಗೆ ಪತ್ರ ಬರೆದಿವೆ. ಇಸ್ರೋ ಮುಖ್ಯಸ್ಥ ನಾರಾಯಣನ್ ಅವರಿಗೆ ಪತ್ರವನ್ನು ಸೆ.4ರಂದು EOS 5 ಅನ್ನು ಹೊತ್ತ GSLV F17 ಉಡಾವಣೆಯ ನಂತರ ಬರೆಯಲಾಗಿದೆ. ತಮ್ಮ ಪತ್ರದಲ್ಲಿ, ಉದ್ಯೋಗಿ ಸಂಘಗಳು ಪ್ರಾಥಮಿಕವಾಗಿ ಸರ್ಕಾರದ ಖಾಸಗೀಕರಣ ನೀತಿ, ಇಸ್ರೋದ ಭವಿಷ್ಯದ ಪಾತ್ರ ಮತ್ತು ಅಸ್ತಿತ್ವದಲ್ಲಿರುವ ಉದ್ಯೋಗಿಗಳು ಮತ್ತು ಭವಿಷ್ಯದ ನೇಮಕಾತಿಗಳಿಗೆ ಸಂಬಂಧಿಸಿದಂತೆ ಖಾಸಗೀಕರಣದ ಸಂಭವನೀಯ ಪರಿಣಾಮಗಳ ಬಗ್ಗೆ ಸ್ಪಷ್ಟತೆಯನ್ನು ಕೋರಿವೆ. ಇಸ್ರೋ ಸಂಶೋಧನೆಯನ್ನು ಖಾಸಗಿ ಕಂಪನಿಗಳಿಗೆ ತೆರೆಯುವ ಹಿಂದಿನ ಉದ್ದೇಶಗಳನ್ನು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಪ್ರಶ್ನಿಸಿದ್ದಾರೆ. "ಬಾಹ್ಯಾಕಾಶ ಆರ್ಥಿಕತೆಯಲ್ಲಿ ಸ್ಟಾರ್ಟ್‌ಅಪ್‌ಗಳನ್ನು ಪ್ರೋತ್ಸಾಹಿಸುವ ಹೆಸರಿನಲ್ಲಿ, ಇಸ್ರೋ ಪಾತ್ರವನ್ನು ಮೋದಿ ಸರ್ಕಾರ ಉದ್ದೇಶಪೂರ್ವಕವಾಗಿ ಸುತ್ತುವರೆದಿದೆ. ಇನ್ನೂ ಕೆಟ್ಟದಾಗಿ, ಅದು ದಶಕಗಳಿಂದ ಶ್ರಮದಾಯಕ ರೀತಿಯಲ್ಲಿ ನಿರ್ಮಿಸಿರುವ ಸಾಮರ್ಥ್ಯಗಳನ್ನು ದೀರ್ಘಕಾಲೀನ ಬದ್ಧತೆ ಅನುಮಾನಾಸ್ಪದವಾಗಿರುವ ಖಾಸಗಿ ಕಂಪನಿಗಳಿಗೆ ವರ್ಗಾಯಿಸಲಾಗುತ್ತಿದೆ." ಈ ಕ್ರಮದ ಹಿಂದೆ ಸ್ಪಷ್ಟತೆ ಕೋರಿ ಇಸ್ರೋ ಮುಖ್ಯಸ್ಥ ವಿ ನಾರಾಯಣನ್ ಅವರಿಗೆ ಪತ್ರ ಬರೆದಿರುವ ಸಂಸ್ಥೆಯೊಳಗಿನ ಧ್ವನಿಗಳನ್ನು ಅವರು ಶ್ಲಾಘಿಸಿದರು. "ಇಸ್ರೋದ ಮಾಜಿ ಅಧ್ಯಕ್ಷರೊಬ್ಬರು ತಮ್ಮ ಕಳವಳಗಳನ್ನು ವ್ಯಕ್ತಪಡಿಸುವಷ್ಟು ಧೈರ್ಯಶಾಲಿಯಾಗಿದ್ದಾರೆ. ಅವರಂತಹ ಇತರರು ಸುಮ್ಮನೆ ಇರಬಾರದು ಮತ್ತು ಅವರ ನಂಬಿಕೆಗಳ ಧೈರ್ಯವನ್ನು ಹೊಂದಿರಬೇಕು" ಎಂದು ಅವರು ಹೇಳಿದರು. ಹಿರಿಯ ನಾಯಕ ಮತ್ತು ಕಾಂಗ್ರೆಸ್ ಸಂಸದ ಅಭಿಷೇಕ್ ಸಿಂಘ್ವಿ ಕೂಡ ತಮ್ಮ ಎಕ್ಸ್‌ನಲ್ಲಿ ಈ ಕ್ರಮವನ್ನು ಟೀಕಿಸಿದ್ದಾರೆ. "ಇಸ್ರೋವನ್ನು ಭಾರತದ ಸ್ವಾವಲಂಬನೆಯ ಸಂಕೇತವಾಗಿ ನಿರ್ಮಿಸಲಾಗಿದೆ. ಪ್ರಧಾನಿ ಮೋದಿ ನೇತೃತ್ವದಲ್ಲಿ, ಆ ಪರಂಪರೆಯನ್ನು ಈಗ ಖಾಸಗಿ ಹಿತಾಸಕ್ತಿಗಳಿಗೆ ಹಸ್ತಾಂತರಿಸಲಾಗುತ್ತಿದೆಯೇ" ಎಂದು ಅವರು ಬರೆದಿದ್ದಾರೆ.

# ಗಣೇಶೋತ್ಸವ ಆಚರಣೆಗೆ ಕಠಿಣ ನಿಯಮ ಜಾರಿ

**ಬೆಂಗಳೂರು, ಸೆ.6:** ಗೌರಿ–ಗಣೇಶ ಹಬ್ಬವನ್ನು ಶಾಂತಿಯುತ ಹಾಗೂ ಪರಿಸರ ಸ್ನೇಹಿಯಾಗಿ ಆಚರಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮತ್ತು ಸ್ಥಳೀಯ ಆಡಳಿತಗಳು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿವೆ.

ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದಾದ್ಯಂತ ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ಬಿಗಿಯಾದ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲಾಗಿದ್ದು, ನಿಯಮ ಉಲ್ಲಂಘಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಆಡಳಿತ ಯಂತ್ರ ಎಚ್ಚರಿಸಿದೆ.

ಅನುಮತಿ ಪಡೆಯದೆ ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪಿಸುವುದು, ಸಂಚಾರಕ್ಕೆ ಅಡ್ಡಿಪಡಿಸುವುದು, ಅನಧಿಕೃತ ಪೆಂಡಾಲ್ ನಿರ್ಮಿಸುವುದು ಹಾಗೂ ನಿಗದಿತ ನಿಯಮಗಳನ್ನು ಮೀರಿ ಧ್ವನಿವರ್ಧಕ ಬಳಸುವುದಕ್ಕೆ ಅವಕಾಶ ಇರುವುದಿಲ್ಲ.

ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪಿಸಲು ಉದ್ದೇಶಿಸುವ ಸಂಘ–ಸಂಸ್ಥೆಗಳು ಅಥವಾ ಸಮಿತಿಗಳು ಕಡ್ಡಾಯವಾಗಿ ಸ್ಥಳೀಯ ಆಡಳಿತದಿಂದ ಹಾಗೂ ಪೊಲೀಸ್ ಇಲಾಖೆಯಿಂದ ಪೂರ್ವಾನುಮತಿ ಪಡೆಯಬೇಕು. ನಗರ ಪ್ರದೇಶಗಳಲ್ಲಿ ಬಿಬಿಎಂಪಿ ಅಥವಾ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಪಂಚಾಯಿತಿಯಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿದೆ.

ಅನುಮತಿ ಪ್ರಕ್ರಿಯೆಯನ್ನು ಸರಳಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ವಿಶೇಷ ಏಕಗವಾಕ್ಷಿ ಕೇಂದ್ರಗಳನ್ನು ತೆರೆಯಲಾಗಿದೆ. ಪೊಲೀಸ್, ಬೆಸ್ಕಾಂ ಹಾಗೂ ಅಗ್ನಿಶಾಮಕ ದಳದ ಅನುಮತಿಯನ್ನು ಒಂದೇ ವ್ಯವಸ್ಥೆಯ ಮೂಲಕ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

**ಪಿಒಪಿ ಮೂರ್ತಿಗಳಿಗೆ ಸಂಪೂರ್ಣ ನಿಷೇಧ:** ಪರಿಸರ ಸಮತೋಲನ ಕಾಪಾಡುವ ಹಾಗೂ ಜಲಮೂಲಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ಮತ್ತು ರಾಸಾಯನಿಕ ಬಣ್ಣಗಳಿಂದ ತಯಾರಿ ಸಿದ ಗಣೇಶ ಮೂರ್ತಿಗಳ ಬಳಕೆಗೆ ಕಟ್ಟುನಿಟ್ಟಿನ ನಿರ್ಬಂಧ ವಿಧಿಸಲಾಗಿದೆ.

ಬೆಂಗಳೂರು ಸೇರಿದಂತೆ ರಾಜ್ಯದ ಪ್ರಮುಖ ನಗರಗಳಲ್ಲಿ ಪಿಒಪಿ ಗಣೇಶ ಮೂರ್ತಿಗಳ ತಯಾರಿಕೆ, ಮಾರಾಟ ಮತ್ತು ಬಳಕೆಗೆ ಅವಕಾಶವಿಲ್ಲ. ಸಾರ್ವಜನಿಕರು ಪರಿಸರ ಸ್ನೇಹಿ ಜೇಡಿಮಣ್ಣಿನ ಮೂರ್ತಿಗಳನ್ನು ಮಾತ್ರ ಬಳಸಬೇಕು ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸೂಚಿಸಿದೆ.

**ಧ್ವನಿವರ್ಧಕ, ಸಂಚಾರಕ್ಕೂ ಕಟ್ಟುನಿಟ್ಟಿನ ನಿಯಮ:** ಹಬ್ಬದ ಸಂದರ್ಭದಲ್ಲಿ ಧ್ವನಿವರ್ಧಕ ಬಳಕೆ, ಪೆಂಡಾಲ್ ನಿರ್ಮಾಣ, ಮೆರವಣಿಗೆ ಹಾಗೂ ಗಣೇಶ ಮೂರ್ತಿ ವಿಸರ್ಜನೆಗೆ ಸಂಬಂಧಿಸಿದಂತೆ ನಿಗದಿತ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

ವಿದ್ಯುತ್ ಸುರಕ್ಷತೆಗೂ ವಿಶೇಷ ಆದ್ಯತೆ ನೀಡಲಾಗಿದ್ದು, ಮೆರವಣಿಗೆ ಸಂದರ್ಭದಲ್ಲಿ ವಿದ್ಯುತ್ ತಂತಿಗಳನ್ನು ಮೇಲಕ್ಕೆತ್ತುವುದು ಅಥವಾ ವಿದ್ಯುತ್ ಮಾರ್ಗಗಳಿಗೆ ಅಪಾಯ ಉಂಟು ಮಾಡುವ ರೀತಿಯಲ್ಲಿ ವ್ಯವಸ್ಥೆ ಮಾಡುವುದನ್ನು ತಪ್ಪಿಸುವಂತೆ ಸೂಚಿಸಲಾಗಿದೆ.

ಮೆರವಣಿಗೆಯ ಮಾರ್ಗ ಮತ್ತು ಸಮಯವನ್ನು ಕಡ್ಡಾಯವಾಗಿ ಪಾಲಿಸಬೇಕು. ಮೈಕ್ ಹಾಗೂ ಧ್ವನಿವರ್ಧಕಗಳ ಬಳಕೆಯಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನಗಳನ್ನು ಕಟ್ಟು ನಿಟ್ಟಾಗಿ ಅನುಸರಿಸಬೇಕು. ಅನುಮತಿ ಪಡೆಯದೆ ಅನಧಿಕೃತವಾಗಿ ಗಣೇಶ ಮೂರ್ತಿ ಪ್ರತಿಷ್ಠಾಪಿಸುವುದು, ನಿಷೇಧಿತ ಪಿಒಪಿ ಮೂರ್ತಿಗಳನ್ನು ಬಳಸುವುದು ಅಥವಾ ಸಂಚಾರಕ್ಕೆ ಹಾಗೂ ಸಾರ್ವಜನಿಕರಿಗೆ ತೊಂದರೆ ಉಂಟುಮಾಡುವ ಚಟುವಟಿಕೆಗಳಲ್ಲಿ ತೊಡಗುವುದು ಕಂಡುಬಂದರೆ ಆಯಾ ಆಯೋಜಕರ ವಿರುದ್ಧ ನೇರವಾಗಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಆಡಳಿತ ಎಚ್ಚರಿಕೆ ನೀಡಿದರು.

# ನವದೆಹಲಿಯಲ್ಲಿ ಹಾರಕೂಡ ಶ್ರೀಗಳ ಜನ್ಮ ದಿನೋತ್ಸವ ಆಚರಣೆ: ಪೂರ್ವಭಾವಿ ಚರ್ಚೆ



**ಕಲಬುರಗಿ, ಸೆ.06–** ಹಾರಕೂಡ ಮಠದ ಪೂಜ್ಯ ಡಾ. ಚೆನ್ನವೀರ ಶಿವಾಚಾರ್ಯರ 64ನೇ ಜನ್ಮದಿನೋತ್ಸವವನ್ನು ಈ ಬಾರಿ ನವೆಂಬರ್ 21ರಂದು ನವದೆಹಲಿಯಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಸಂಭ್ರಮದಿಂದ ಆಚರಿಸಲಾಗುವುದು ಎಂದು ಮಾಜಿ ಸಂಸದ ಡಾ.ಉಮೇಶ್ ಜಾಧವ್ ತಿಳಿಸಿದ್ದಾರೆ.

ಹಾರಕೂಡ ಮಠದಲ್ಲಿ ಪೀಠಾಧಿಪತಿ ಡಾ. ಚನ್ನವೀರ ಶಿವಾಚಾರ್ಯರ ಸಮ್ಮುಖದಲ್ಲಿ ಪೂರ್ವಭಾವಿ ಸಿದ್ಧತೆ ಕುರಿತಾಗಿ ಚರ್ಚಿಸಿದ ನಂತರ ಸುದ್ದಿಗಾರರ ಜೊತೆ ಮಾತನಾಡಿ ನ.21ರಂದು ನವದೆಹಲಿಯ ಜನಪಥ ರಸ್ತೆಯಲ್ಲಿರುವ ಡಾ. ಅಂಬೇಡ್ಕರ್ ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರ 64ನೇ ಜನ್ಮದಿನೋತ್ಸವವನ್ನು ಶ್ರೀಮಠದ ಭಕ್ತರು, ಪೂಜ್ಯರು ಗಣ್ಯ ವ್ಯಕ್ತಿಗಳ ಸಮ್ಮುಖದಲ್ಲಿ ಧಾರ್ಮಿಕ ವಿಧಿವಿಧಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ವೈಭವದೊಂದಿಗೆ ಅತ್ಯಂತ ವಿಜೃಂಭಣೆಯಿಂದ ಆಚರಿಸಲು ಈಗಾಗಲೇ ರೂಪುರೇಷೆ ಸಿದ್ಧಪಡಿಸಲಾಗಿದೆ.

ರಾಷ್ಟ್ರದ ರಾಜಧಾನಿಯಲ್ಲಿ ಶ್ರೀಗಳೊಬ್ಬರ ಜನ್ಮ ದಿನಾಚರಣೆ ಆಚರಿಸುತ್ತಿರುವ ಈ ವಿಶೇಷ ಕಾರ್ಯಕ್ರಮವು ಹಾರಕೂಡ ಮಠದ ತ್ರಿವಿಧ ದಾಸೋಹ ಹಾಗೂ ಸಾಮಾಜಿಕ ಸಾಮರಸ್ಯದ ಸಂದೇಶ ಬಿತ್ತಲು ಉತ್ತಮ ವೇದಿಕೆಯಾಗಿದೆ. ನವದೆಹಲಿಯಲ್ಲಿ ಆಯೋಜಿ ಸುವ ಕಾರ್ಯಕ್ರಮಕ್ಕೆ ಪೂಜ್ಯರು ಈಗಾಗಲೇ ಒಪ್ಪಿಗೆ ನೀಡಿದ್ದು ಮಠದ ಅಭಿಮಾನಿಗಳು ಮತ್ತು ಭಕ್ತರ ಜೊತೆ ಚರ್ಚೆಗಾಗಿ ಆಗಮಿಸಿ ಎಲ್ಲ ರೀತಿಯ ಸಲಹೆ ಸೂಚನೆ ಪಡೆದಿರುದಾಗಿ ಡಾ.ಉಮೇಶ್ ಜಾಧವ್ ತಿಳಿಸಿದರು.

# ವಿಕಸಿತ ಭಾರತಕ್ಕೆ ಪೂರಕ ಕಾರ್ಯಾಗಾರ

**ಬೆಂಗಳೂರು, ಸೆ.6:** ಎಲ್ಲ ಉತ್ಪಾದನಾ ವಲಯದಲ್ಲಿ ಉತ್ತಮ ಗುಣಮಟ್ಟ ಕಾಯ್ದುಕೊಳ್ಳುವುದು ಮುಖ್ಯ. ಇದಕ್ಕೆ ಸಂಬಂಧಿಸಿದ ಕಾರ್ಯಾಗಾರಗಳು ದೇಶಾದ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ನಡೆಯಬೇಕೆಂದು ಉತ್ತಮ ಗುಣಮಟ್ಟಕಾಯ್ದುಕೊಳ್ಳಲು ಕಾರ್ಯಾಗಾರ ನಡೆಯಬೇಕೆಂದು ಕ್ವಾಲಿಟಿ ಸರ್ಕಲ್ ಫೋರಂ ಆಫ್ ಇಂಡಿಯ ರಾಷ್ಟ್ರೀಯ ಅಧ್ಯಕ್ಷ ಅವಿನಾಶ್ ಮಿಶ್ರ ಹೇಳಿದ್ದಾರೆ.

ಅವರು ಕ್ವಾಲಿಟಿ ಸರ್ಕಲ್ ಫೋರಂ ಆಫ್ ಇಂಡಿಯ ಬೆಂಗಳೂರು ಶಾಖೆ ಬನ್ನೇರುಘಟ್ಟ ರಸ್ತೆಯಲ್ಲಿರುವ ಟಿ. ಜಾನ್ ಕಾಲೇಜಿನಲ್ಲಿ ಏರ್ಪಡಿಸಿದ್ದ ಒಂದು ದಿನ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದರು. ಬೆಂಗಳೂರು ಶಾಖೆಯ ಅಧ್ಯಕ್ಷ ತೇಜ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಸ್ಮಿತಾ ವೆಂಕಟೇಶ್ ಕಾರ್ಯಕ್ರಮವನ್ನು ಸಂಯೋಜಿಸಿದರು.

585 ತಂಡಗಳು 108 ಸಂಸ್ಥೆಗಳನ್ನು ಪ್ರತಿನಿಧಿಸಿದ್ದವು. ಆಟೋಮೊಬೈಲ್‌ನಿಂದ ಹಿಡಿದು ಆಸ್ಪತ್ರೆ ಮತ್ತು ಏರ್‌ಪೋರ್ಟ್ ಆಡಳಿತವರ್ಗಗಳವರೆಗೆ ವಿವಿಧ ಉದ್ದಿಮೆಗಳಿಗೆ ಸೇರಿದ 2 ಸಾವಿರ ಜನ ಭಾಗವಹಿಸಿದ್ದರು.




ಉತ್ಪಾದನಾ ವಲಯದಲ್ಲಿ ಯಾವುದೇ ವಸ್ತು ತಯಾರಿಸಿದರೆ ಗ್ರಾಹಕರು ಮೊದಲು ನೋಡುವುದು ಅದರ ಗುಣಮಟ್ಟ. ಅದು ಎಷ್ಟು ದಿನ ಬಾಳಿಕೆ ಬರುತ್ತೆ ಬಳಸಿರುವ ವಸ್ತುಗಳ ಗುಣಮಟ್ಟ, ಅದನ್ನು ತಯಾರಿಸಿರುವಾಗ ಗುಣಮಟ್ಟಕ್ಕೆ ಗಮನ ಕೊಟ್ಟಿದ್ದಾರೆಯೇ ಎಂಬುದನ್ನು ನೋಡುತ್ತಾರೆ. ಆಮೇಲೆ ಅದರ ಕಾರ್ಯಕ್ಷಮತೆಯನ್ನು ನೋಡುತ್ತಾರೆ. ಹೀಗಾಗಿ ಪ್ರತಿಯೊಂದು ಕೈಗಾರಿಕೆಯೂ ಗುಣಮಟ್ಟ ಕಾಯ್ದುಕೊಳ್ಳಲು ಗಮನ ಹರಿಸಲೇಬೇಕು.

ಹಿಂದೆ ಪ್ರತಿ ಕೈಗಾರಿಕೆ ಮತ್ತು ಪ್ರತಿಯೊಂದು ಇಲಾಖೆಯಲ್ಲೂ ಗುಣಮಟ್ಟ ನಿಯಂತ್ರಣ ವಿಭಾಗ ಇರುತ್ತಿತ್ತು.

ಈಗ ಇದು ಉಳಿದಿಲ್ಲ. ಜಪಾನ್ ತಂತ್ರಜ್ಞಾನದ ಪ್ರಕಾರ ಪ್ರತಿಯೊಬ್ಬರೂ ಗುಣಮಟ್ಟವನ್ನು ಪರಿಶೀಲಿಸಿ ಕೆಲಸ ಮಾಡಬೇಕು. ಒಂದು ವೇಳೆ ಅವರು ಬಳಸಿದ ಕಚ್ಚಾವಸ್ತುಗುಣಮಟ್ಟದ್ದಲ್ಲ ಎಂದರೆ ಅವರೇ ಅದನ್ನು ತಿರಸ್ಕರಿಸಬೇಕು. ಗುಣಮಟ್ಟ ನಿಯಂತ್ರಣ ವಿಭಾಗದ ಕೆಲಸ ಎನ್ನುವಂತಿಲ್ಲ. ಪ್ರತಿ ಹಂತದಲ್ಲೂ ಉತ್ತಮ ಗುಣಮಟ್ಟಕ್ಕೆ ಆದ್ಯತೆ ಕೊಡಲೇಬೇಕು. ಇದು ಎಲ್ಲ ಕೈಗಾರಿಕೆಗಳು ಅನುಸರಿಸುತ್ತಿರುವ ಮಾರ್ಗ. ಇದರ ಬಗ್ಗೆ ಕ್ವಾಲಿಟಿ ಸರ್ಕಲ್ ಫೋರಂ ಆಫ್ ಇಂಡಿಯ ಬೆಂಗಳೂರು ಶಾಖೆ ಪ್ರತಿ ವರ್ಷ ಕಾರ್ಯಗಾರ ನಡೆಸುತ್ತಿದೆ ಎಂದು ತೇಜ್ ಕುಮಾರ್ ತಿಳಿಸಿದರು.

# ಕೆಪಿಎಸ್‌ಸಿ ಪಶು ವೈದ್ಯಕೀಯ ಹುದ್ದೆ ನೇಮಕಾತಿ ಹಗರಣ ತನಿಖೆ: ಬೆಚ್ಚಿ ಬೀಳಿಸುವ ಮಾಹಿತಿ ಬಹಿರಂಗ

**ಬೆಂಗಳೂರು, ಸೆ.6:** ಕೆಪಿಎಸ್‌ಸಿ ಪಶುವೈದ್ಯಕೀಯ ಹುದ್ದೆಗಳ ನೇಮಕಾತಿ ಹಗರಣದ ತನಿಖೆ ಮುಂದುವರಿದಂತೆ ಒಂದೊಂದೇ ಬೆಚ್ಚಿಬೀಳಿಸುವ ಮಾಹಿತಿ ಹೊರಬರುತ್ತಿದೆ.

ಹಗರಣದ ಪ್ರಮುಖ ಆರೋಪಿಗಳಾದ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಹಾಗೂ ಸೂತ್ರದಾರ ಬಸವರಾಜ್ ಕನ್ನಾಳೆ ಅವರ ಜಾಲದಲ್ಲಿ ಬರೋಬ್ಬರಿ 15 ಅಭ್ಯರ್ಥಿಗಳು ಸಿಲುಕಿಕೊಂಡಿರುವುದು ಸಿಐಡಿ ತನಿಖೆಯಿಂದ ಬೆಳಕಿಗೆ ಬಂದಿದೆ ಎನ್ನಲಾಗಿದೆ.

ಬಸವರಾಜ್ ಕನ್ನಾಳೆ ಮೂಲಕ ಅಕ್ರಮವಾಗಿ ಪ್ರಶ್ನೆಪತ್ರಿಕೆ ಪಡೆದುಕೊಂಡಿದ್ದ 15 ಅಭ್ಯರ್ಥಿಗಳು ಸಿಐಡಿ ವಿಚಾರಣೆ ವೇಳೆ ತಮ್ಮ ಪಾತ್ರದ ಕುರಿತು ಮಾಹಿತಿ ನೀಡಿದ್ದಾರೆ ಎಂದು ವಿಶ್ವಾಸಾರ್ಹ ಮೂಲಗಳು ತಿಳಿಸಿವೆ.

ಪರೀಕ್ಷೆಗೂ ಮುನ್ನವೇ ಕನ್ನಾಳೆ ನೇತೃತ್ವದ ಜಾಲದ ಮೂಲಕ ಅಭ್ಯರ್ಥಿಗಳಿಗೆ ಪ್ರಶ್ನೆಪತ್ರಿಕೆ ತಲುಪಿಸಲಾಗಿತ್ತು ಎನ್ನಲಾಗಿದ್ದು, ವಿಚಾರಣೆ ಎದುರಿಸುತ್ತಿರುವ ಅಭ್ಯರ್ಥಿಗಳು ನೇಮಕಾತಿ ಪ್ರಕ್ರಿಯೆಯಲ್ಲಿ ತಾವು ಯಾವ ರೀತಿ ಭಾಗಿಯಾಗಿದ್ದರು ಹಾಗೂ ಅಕ್ರಮಕ್ಕೆ ಹೇಗೆ ಕೈಜೋಡಿಸಿದ್ದರು ಎಂಬುದರ ಕುರಿತು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದಾರೆ ಎನ್ನಲಾಗಿದೆ.

**ಹಣದ ವಹಿವಾಟಿನ ಮೇಲೂ ನಿಗಾ:**

ಮಧ್ಯವರ್ತಿಗಳಿಗೆ ಹಣ ನೀಡಿದ ದಿನಾಂಕ, ಹಣ ಪಾವತಿಯ ವಿಧಾನ, ನೇಮಕಾತಿಗೆ ಸಂಬಂಧಿಸಿದಂತೆ ನೀಡಲಾಗಿದ್ದ ಭರವಸೆ ಹಾಗೂ ನಡೆದಿದ್ದ ಒಪ್ಪಂದಗಳ ಕುರಿತು ಅಭ್ಯರ್ಥಿಗಳಿಂದ ಮಾಹಿತಿ ಪಡೆಯಲಾಗಿದೆ ಎಂದು ತಿಳಿದುಬಂದಿದೆ.

ಪ್ರಶ್ನೆಪತ್ರಿಕೆ ಪಡೆಯಲು ಹಣ ಪಾವತಿಸಲಾಗಿತ್ತೇ? ಪಾವತಿಸಿದ್ದರೆ ಯಾರಿಗೆ ಹಾಗೂ ಯಾವ ಮಾರ್ಗದಲ್ಲಿ ಹಣ ವರ್ಗಾವಣೆಯಾಗಿತ್ತು? ಅಭ್ಯರ್ಥಿಗಳಿಗೆ ನೇಮಕಾತಿ ಕುರಿತು ಯಾವ ರೀತಿಯ ಭರವಸೆ ನೀಡಲಾಗಿತ್ತು ಎಂಬ ಪ್ರಶ್ನೆಗಳು ಇದೀಗ ಸಿಐಡಿ ತನಿಖೆಯ ಪ್ರಮುಖ ಅಂಶಗಳಾಗಿವೆ.

ಅಭ್ಯರ್ಥಿಗಳ ಹೇಳಿಕೆಗಳನ್ನು ದೃಢೀಕರಿಸಲು ಬ್ಯಾಂಕ್ ಖಾತೆಗಳ ವ್ಯವಹಾರ, ಆನ್‌ಲೈನ್ ಹಣ ವರ್ಗಾವಣೆ, ಮೊಬೈಲ್ ಕರೆ ದಾಖಲೆಗಳು ಹಾಗೂ ಇತರ ಡಿಜಿಟಲ್ ಸಾಕ್ಷ್ಯಗಳನ್ನು ತನಿಖಾಧಿಕಾರಿ ಗಳು ಪರಿಶೀಲಿಸುತ್ತಿದ್ದಾರೆ ಎನ್ನಲಾಗಿದೆ.

**ಇನ್ನೂ 5ರಿಂದ 10 ಅಭ್ಯರ್ಥಿಗಳ ಮೇಲೆ ಅನುಮಾನ**

ಈ 15 ಅಭ್ಯರ್ಥಿಗಳಷ್ಟೇ ಅಲ್ಲದೆ, ಇದೇ ರೀತಿಯ ಅಕ್ರಮ ಮಾರ್ಗದ ಮೂಲಕ ಪ್ರಶ್ನೆಪತ್ರಿಕೆ ಅಥವಾ ನೇಮಕಾತಿಗೆ ಸಂಬಂಧಿಸಿದ ನೆರವು ಪಡೆದಿರಬಹುದಾದ ಇನ್ನೂ 5ರಿಂದ 10 ಅಭ್ಯರ್ಥಿಗಳ ಬಗ್ಗೆಯೂ ಸಿಐಡಿಗೆ ಅನುಮಾನವಿದೆ ಎನ್ನಲಾಗಿದೆ.

# ಉನ್ನತ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ತುರ್ತು ಕ್ರಮ ಅಗತ್ಯ

ಉನ್ನತ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಸರ್ಕಾರ ತ್ವರಿತ ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಹಾಗೂ ಶಿಕ್ಷಣ ತಜ್ಞರಾದ ಪ್ರೊ.ಟಿ.ಡಿ. ಕೆಂಪರಾಜು ಎಚ್ಚರಿಕೆಯ ಗಂಟೆ ಬಾರಿಸಿದ್ದಾರೆ.

ಸ್ವಾತಂತ್ರ್ಯಾನಂತರ ದೇಶದಲ್ಲಿ ಸಾಕ್ಷರತೆಯ ಪ್ರಮಾಣ ಗಣನೀಯವಾಗಿ ಹೆಚ್ಚಳವಾಗಿದ್ದರೂ ಉನ್ನತ ಶಿಕ್ಷಣ ರಂಗದ ದಾಖಲಾತಿಯ ಪ್ರಗತಿ ಅಷ್ಟೇನೂ ತೃಪ್ತಿಕರವಾಗಿಲ್ಲವೆಂದು ಅವರು ವಿಶ್ಲೇಷಿಸಿದರು.

ವಿಶ್ವವಿದ್ಯಾಲಯಗಳ ಸಂಖ್ಯೆ 1200 ಹಾಗೂ ಕಾಲೇಜುಗಳ ಸಂಖ್ಯೆ 40,000 ದಾಟಿದ್ದರೂ ವಿದ್ಯಾರ್ಥಿಗಳ ಪ್ರವೇಶದ





ಪ್ರಮಾಣ ಕೇವಲ ಶೇ.38 ರಷ್ಟಿದೆ. ಅಷ್ಟೇ ಅಲ್ಲದೆ ವಿಶ್ವದರ್ಜೆಯ ಮಟ್ಟದ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಅತ್ಯಲ್ಪವಾಗಿದೆ ಎಂದರು.

ಸಾರ್ವಜನಿಕ ವಿಶ್ವ ವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಕೋರ್ಸ್ ಗಳಿಗೆ ಪ್ರವೇಶ ಕ್ರಮೇಣ ಕುಸಿಯ ತೊಡಗಿದ್ದು ಖಾಯಂ ಅಧ್ಯಾಪಕರ ಕೊರತೆಯು ಬೋಧನೆ ಮತ್ತು ಸಂಶೋಧನೆಯ ಗುಣಮಟ್ಟದ ಗಂಭೀರ ಹಿನ್ನಡೆಗೆ ಕಾರಣವಾಗಿದೆ ಎಂದು ಅವರು ವಿಷಾದಿಸಿದರು.

ಖಾಸಗಿ ಮತ್ತು ವಿದೇಶಿ ವಿಶ್ವವಿದ್ಯಾಲಯಗಳಿಂದ ತೀವ್ರ ಪೈಪೋಟಿ ಎದುರಿಸುತ್ತಿರುವ ಸಾರ್ವ ಜನಿಕ ವಿಶ್ವವಿದ್ಯಾಲಯಗಳನ್ನು ಸಶಕ್ತಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕೆಂದು ಅವರು ಸಲಹೆಯಿತ್ತರು.

ಮೈಸೂರು ವಿಶ್ವವಿದ್ಯಾಲಯದಲ್ಲೂ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದ ಶಿಕ್ಷಕರಾಗಿ ದೇಶದ ಅತ್ಯುನ್ನತ ಪದವಿಯಾದ ರಾಷ್ಟ್ರಪತಿ ಸ್ಥಾನಕ್ಕೇರಿದ ಸರ್ವಪಲ್ಲಿ ರಾಧಾಕೃಷ್ಣರವರ ಆದರ್ಶ ಮಾರ್ಗದಲ್ಲಿ ಮುನ್ನಡೆದು ಯುವಶಕ್ತಿಗೆ ಸೂಕ್ತ ಮಾರ್ಗದರ್ಶನ ನೀಡುವಂತೆ ಅವರು ಉಪನ್ಯಾಸಕರನ್ನು ಪ್ರೇರೇಪಿಸಿ ದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳಾದ ಪ್ರೊ. ರಮೇಶ್. ಬಿ. ಮಾತನಾಡಿ, 1858ರಲ್ಲಿ ಸ್ಥಾಪಿತವಾದ ಸೆಂಟ್ರಲ್ ಕಾಲೇಜಿನ ಭವ್ಯ ಪರಂಪರೆಯನ್ನು ಮುಂದುವರಿ ಸುವ ಸಂಕಲ್ಪ ಕೈಗೊಳ್ಳುವಂತೆ ಅಧ್ಯಾಪಕರನ್ನು ಉತ್ತೇಜಿಸಿದರು.

# ಅನಧಿಕೃತ ಇ-ಕಾಮರ್ಸ್ ಗೋದಾಮುಗಳ ಮೇಲೆ ದಾಳಿ: 4 ಲಕ್ಷ ರೂ. ಅಕ್ರಮ ಔಷಧಗಳು ವಶಕ್ಕೆ



**ಬೆಂಗಳೂರು, ಸೆ.09:** ನಿಯಮ ಬಾಹಿರ ಔಷಧ ಸಂಗ್ರಹಣೆ ಮತ್ತು ವಿತರಣೆಯ ವಿರುದ್ಧ ತೀವ್ರ ಕಾರ್ಯಾಚರಣೆ ನಡೆಸಿರುವ ಕರ್ನಾಟಕ ಆಹಾರ ಸುರಕ್ಷತೆ ಹಾಗೂ ಔಷಧ ನಿಯಂತ್ರಣ ಇಲಾಖೆಯ (ಎಫ್.ಡಿ.ಎ) ಅಮಲುಜಾರಿ ಔಷಧ ವಿಭಾಗವು, ಪರವಾನಗಿ ಇಲ್ಲದ ಇ–ಕಾಮರ್ಸ್ ಸಂಸ್ಥೆಗಳ ಗೋದಾಮು ಗಳ ಮೇಲೆ ಯಶಸ್ವಿ ದಾಳಿ ನಡೆಸಿ ಭಾರಿ ಪ್ರಮಾಣದ ಔಷಧಗಳನ್ನು ಜಪ್ತಿ ಮಾಡಿದೆ. ಅನಧಿಕೃತ ನಿಯಮ ಉಲ್ಲಂಘನೆ ಗಳ ಕುರಿತು ಲಭ್ಯವಾದ ನಿಖರ ಮಾಹಿತಿಯ ಮೇರೆಗೆ, ರಾಜ್ಯದ ವಿವಿಧೆಡೆ ಎಫ್.ಡಿ.ಎ ಅಧಿಕಾರಿಗಳು ಏಕಕಾಲದಲ್ಲಿ ಈ ಕೆಳಗಿನಂತೆ ಮಿಂಚಿನ ದಾಳಿಗಳನ್ನು ನಡೆಸಿದ್ದಾರೆ:

1. ಆನೇಕಲ್ ದಾಳಿ: ರಾಜ್ಯ ಗುಪ್ತದಳ ವಿಭಾಗದ ಸಹಾಯಕ ಔಷಧ ನಿಯಂತ್ರಕರಾದ ಶ್ರೀ ಮನೋಹರ್ ಮತ್ತು ಔಷಧ ಪರಿವೀಕ್ಷಕರ ತಂಡವು, ಬೆಂಗಳೂರಿನ ಆನೇಕಲ್ ತಾಲೂಕಿನ ತಟ್ಟನಹಳ್ಳಿ ಯಲ್ಲಿರುವ (562107) 'ಮೆಸರ್ಸ್ ಅಮೆಜಾನ್ ಸೆಲ್ಲರ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್' ನ ಪರವಾನಗಿ ರಹಿತ ಆವರಣದ ಮೇಲೆ ದಾಳಿ ನಡೆಸಿ, ಕಾನೂನುಬಾಹಿರವಾಗಿ ಸಂಗ್ರಹಿಸಿಟ್ಟಿದ್ದ ರೂ. 2,45,352/– ಮೌಲ್ಯದ ಔಷಧಗಳನ್ನು ವಶಪಡಿಸಿ ಕೊಂಡಿದೆ.

2. ದೇವನಹಳ್ಳಿ ದಾಳಿ: ಇದೇ ವೇಳೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಔಷಧ ಪರಿವೀಕ್ಷಕರಾದ ಶ್ರೀಮತಿ ವಿಭಾ ಮತ್ತು ಅವರ ತಂಡವು, ದೇವನಹಳ್ಳಿಯ ಏರೋ ಸ್ಪೇಸ್‌ನಲ್ಲಿರುವ 'ಮೆಸರ್ಸ್ ಅಮೆ ಜಾನ್' ಸಂಸ್ಥೆಯ ಪರವಾನಗಿ ರಹಿತ ಆವರಣದ ಮೇಲೆ ದಾಳಿ ನಡೆಸಿ, ಅಕ್ರಮವಾಗಿ ದಾಸ್ತಾನು ಮಾಡಲಾಗಿದ್ದ ರೂ. 1,57,000/– ಮೌಲ್ಯದ ಔಷಧಗಳನ್ನು ಜಪ್ತಿ ಮಾಡಿದೆ.

# ಕೆಪಿಎಸ್‌ಸಿ ನೇಮಕಾತಿ ವಿರುದ್ಧ ಜೆನ್–ಝೀಗಳಿಂದ ಹೋರಾಟಕ್ಕೆ ಸಜ್ಜು



**ಬೆಂಗಳೂರು, ಸೆ.6:** ಕರ್ನಾಟಕ ಲೋಕ ಸೇವಾ ಆಯೋಗದ (ಕೆಪಿಎಸ್‌ಸಿ) ನೇಮಕಾತಿ ಪರೀಕ್ಷೆಗಳಲ್ಲಿ ನಡೆದಿದೆ ಎನ್ನಲಾದ ವ್ಯಾಪಕ ಅಕ್ರಮ ಹಾಗೂ ಗೋಲ್‌ಮಾಲ್ ಪ್ರಕರಣ ರಾಜ್ಯದಲ್ಲಿ ತೀವ್ರ ರಾಜಕೀಯ ಮತ್ತು ಸಾಮಾಜಿಕ ಸಂಚಲನಕ್ಕೆ ಕಾರಣವಾಗಿದೆ.

ಸಿಐಡಿ ತನಿಖೆ ತೀವ್ರಗೊಂಡಿರುವ ಬೆನ್ನಲ್ಲೇ, ಹಗರಣವನ್ನು ಖಂಡಿಸಿ ಹಾಗೂ ವಿವಾದಿತ ಪರೀಕ್ಷೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಿ ಮರುಪರೀಕ್ಷೆ ನಡೆಸುವಂತೆ ಒತ್ತಾಯಿಸಿ ರಾಜ್ಯದ ಜೆನ್‌ಜಿ ಯುವ ಸಮೂಹ ಮತ್ತು ವಿದ್ಯಾರ್ಥಿ ಸಂಘಟನೆಗಳು ಬೀದಿಗಿಳಿಯಲು ಸಜ್ಜಾಗಿವೆ.

ದೆಹಲಿಯಲ್ಲಿ ನಡೆದ ನೀಟ್ ಪ್ರತಿಭಟನೆಯ ಮಾದರಿಯಲ್ಲಿ ರಾಜ್ಯದಲ್ಲೂ ಜೆನ್–ಝೀ ಶೈಲಿಯ ವಿನೂತನ ಹಾಗೂ ತೀವ್ರ ಹೋರಾಟ ನಡೆಸಲು ಸಿದ್ಧತೆಗಳು ನಡೆಯುತ್ತಿವೆ. ಇದೇ ತಿಂಗಳ ಎರಡನೇ ವಾರದಿಂದ ಬೆಂಗಳೂರು ಕೇಂದ್ರಿತವಾಗಿ ಪ್ರತಿಭಟನೆ ಆರಂಭಿಸಲು ವಿದ್ಯಾರ್ಥಿ ಸಂಘಟನೆ ಗಳು ಚರ್ಚೆ ನಡೆಸುತ್ತಿದ್ದು, ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ವಿದ್ಯಾರ್ಥಿ ಗಳು ಹೋರಾಟಕ್ಕೆ ಕೈಜೋಡಿಸುವ ಸಾಧ್ಯತೆಯಿದೆ.

**ಮರುಪರೀಕ್ಷೆಗೆ ಆಗ್ರಹ**

ಪಶುವೈದ್ಯಾಧಿಕಾರಿಗಳ ಹುದ್ದೆ ನೇಮಕಾತಿ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಒಎಂಆರ್ ಶೀಟ್ ತಿರುಚಿರುವ ಆರೋಪಗಳು ಕೇಳಿಬಂದಿವೆ. ಹೀಗಾಗಿ ಪ್ರಕರಣದ ಸಮಗ್ರ ತನಿಖೆ ನಡೆಸುವುದರ ಜತೆಗೆ ವಿವಾದಿತ ಪರೀಕ್ಷೆಯನ್ನು ಸಂಪೂರ್ಣ ವಾಗಿ ರದ್ದುಗೊಳಿಸಿ ಮರುಪರೀಕ್ಷೆ ನಡೆಸಬೇಕು ಎಂಬುದು ಅಭ್ಯರ್ಥಿಗಳು ಹಾಗೂ ವಿದ್ಯಾರ್ಥಿ ಸಂಘಟನೆಗಳ ಪ್ರಮುಖ ಆಗ್ರಹವಾಗಿದೆ.

ಈಗಾಗಲೇ ಹೈದರಾಬಾದ್–ಕರ್ನಾಟಕ ಸೇರಿದಂತೆ ರಾಜ್ಯದ ವಿವಿಧ ಭಾಗಗಳ ನೂರಾರು ಅಭ್ಯರ್ಥಿಗಳು ಹಾಗೂ ವಿದ್ಯಾರ್ಥಿ ಸಂಘಟನೆಗಳ ಪ್ರಮುಖರು ಮುಖ್ಯಮಂತ್ರಿ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ನ್ಯಾಯ ಒದಗಿಸುವಂತೆ ಮನವಿ ಮಾಡಿದ್ದಾರೆ. ಸರ್ಕಾರದ ವಿರುದ್ಧದ ಆಕ್ರೋಶವನ್ನು ಬೀದಿಗೆ ತಂದು ಹೋರಾಟ ನಡೆಸಲು ಯುವಪಡೆ ಸಜ್ಜಾಗುತ್ತಿದೆ.

**ಸಾಮಾಜಿಕ ಜಾಲತಾಣಗಳ ಮೂಲಕವೂ ಹೋರಾಟ**

ಈ ಹೋರಾಟದ ಮತ್ತೊಂದು ಪ್ರಮುಖ ಅಂಶವೆಂದರೆ ಸಾಂಪ್ರದಾಯಿಕ ಪ್ರತಿಭಟನೆಯ ಜತೆಗೆ ಸಾಮಾಜಿಕ ಜಾಲತಾಣಗಳನ್ನು ವ್ಯಾಪಕವಾಗಿ ಬಳಸಿಕೊಳ್ಳುವ ಯೋಜನೆ. ವಿದ್ಯಾರ್ಥಿ ಸಂಘಟನೆಗಳು ಒಗ್ಗೂಡಿ ಬೆಂಗಳೂರಿನಲ್ಲಿ ಹೋರಾಟ ರೂಪಿಸುವ ಸಿದ್ಧತೆಯಲ್ಲಿದ್ದು, ಇದೇ ತಿಂಗಳ ಎರಡನೇ ವಾರದಿಂದ ಪ್ರತಿಭಟನೆ ಆರಂಭಿಸುವ ಕುರಿತು ಚರ್ಚೆ ನಡೆಸಿವೆ ಎನ್ನಲಾಗಿದೆ.

ಇದು ಕೇವಲ ಒಂದು ನೇಮಕಾತಿ ಪರೀಕ್ಷೆಯ ಪ್ರಶ್ನೆಯಲ್ಲ; ಸರ್ಕಾರಿ ಉದ್ಯೋಗಕ್ಕಾಗಿ ಪ್ರಾಮಾಣಿಕವಾಗಿ ಸ್ಪರ್ಧಿಸುತ್ತಿರುವ ಲಕ್ಷಾಂತರ ಯುವಕರ ಭವಿಷ್ಯ ಮತ್ತು ನಂಬಿಕೆಯ ಪ್ರಶ್ನೆ ಎಂಬ ಸಂದೇಶವನ್ನು ಜನರಿಗೆ ತಲುಪಿಸಲು ಹೋರಾಟಗಾರರು ಮುಂದಾಗಿದ್ದಾರೆ.

**ಸಾಂಪ್ರದಾಯಿಕ ಪ್ರತಿಭಟನೆಯ ಜತೆಗೆ ಸಾಮಾಜಿಕ ಜಾಲತಾಣಗಳನ್ನು ವ್ಯಾಪಕವಾಗಿ ಬಳಸಿಕೊಳ್ಳುವ ಯೋಜನೆ. ವಿದ್ಯಾರ್ಥಿ ಸಂಘಟನೆಗಳು ಒಗ್ಗೂಡಿ ಬೆಂಗಳೂರಿನಲ್ಲಿ ಹೋರಾಟ ರೂಪಿಸುವ ಸಿದ್ಧತೆಯಲ್ಲಿದ್ದು, ಇದೇ ತಿಂಗಳ ಎರಡನೇ ವಾರದಿಂದ ಪ್ರತಿಭಟನೆ ಆರಂಭಿಸುವ ಕುರಿತು ಚರ್ಚೆ ನಡೆಸಿವೆ**

# ಕೃಷ್ಣನ ಜನ್ಮವಾಗಬೇಕಿರುವುದು ನಮ್ಮೊಳಗೆ, ಅಧರ್ಮದ ಸಾಮ್ರಾಜ್ಯಕ್ಕೆ ನಡುಕ ಹುಟ್ಟಿಸಿದ ಕೃಷ್ಣನ ಒಂದೇ ಜನ್ಮ

ಜನ್ಮಾಷ್ಟಮಿ ಕೇವಲ ಹಬ್ಬವಲ್ಲ; ನಮ್ಮೊಳಗಿನ ಕತ್ತಲೆಯನ್ನು ಬೆಳಕಾಗಿಸುವ ಒಂದು ನೆನಪು

"ಕಾಣದ ಕತ್ತಲಿನ ಖೈದಿಮನೆಯಲ್ಲಿ ಹುಟ್ಟಿದ ಕೃಷ್ಣ ಜಗತ್ತಿಗೆ ಹಚ್ಚಿದ್ದು ಮಾತ್ರ ರಾಜಧರ್ಮದ ಬೆಳಕಿನ ದೀಪವನ್ನ, ಪಾಲಿಸಿದ್ದು; ಶತ್ರು ಸಂಹಾರದ ಬೇಧದ ಸತ್ಯವನ್ನ,

ಕಲಿಸಿದ್ದು ಕರ್ಮ ಪಾಲನೆಯ ಸರಳ ಸೂತ್ರವನ್ನ,

ಬಿಟ್ಟು ಹೋಗಿದ್ದು ಕೋಟಿ ವರ್ಷಗಳು ಬಿತ್ತಿ ಬೆಳೆಯುವ ನೀತಿ ಪಾಠದ ಸತ್ಯ ಬೀಜವನ್ನ, ಧರ್ಮದ ಮೂಲವಾದ ದಯೆಯ, ಬದ್ಧತೆಯ ಬದುಕಿನೊಂದಿಗೆ ಸಾಗಬೇಕಾದರೆ ಅದಕ್ಕೆ ದಂಡಶಾಲೆಯ ಬತ್ತಳಿಕೆಯ ಎರಕ ಹೊಯ್ಯುವ ಅವಶ್ಯಕತೆ ಇದೆ".

ಕೃಷ್ಣ ಜನ್ಮಾಷ್ಟಮಿ ಅಂದರೆ ಸಾಕು ಮನೆ–ಮನೆಗಳಲ್ಲಿ ಕೃಷ್ಣನ ಮೂರ್ತಿಗೆ ಅಲಂಕಾರ, ದೇವಾಲಯಗಳಲ್ಲಿ ಭಜನೆ, ಮಕ್ಕಳಿಗೆ ಕೃಷ್ಣನ ವೇಷ ಎಲ್ಲೆಡೆ ಸಂಭ್ರಮ. ಆದರೆ ಈ ಸಂಭ್ರಮದ ನಡುವೆ ಒಂದು ಪ್ರಶ್ನೆ ನಮ್ಮನ್ನು ಕಾಡಬೇಕಿದೆ 'ಕೃಷ್ಣನ ಜನ್ಮವನ್ನು ನಾವು ಕೇವಲ ಆಚರಿಸುತ್ತಿದ್ದೇವೆಯೋ ಅಥವಾ ಕೃಷ್ಣನ ಸಂದೇಶವನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುತ್ತಿದ್ದೇವೆಯೋ

ಸಾವಿರಾರು ವರ್ಷಗಳ ಹಿಂದೆ ಕೃಷ್ಣ ಹುಟ್ಟಿದಾಗ ಸಮಾಜದ ಮೇಲೆ ಅಧರ್ಮದ ನೆರಳು ಆವರಿಸಿತ್ತು. ಅಧಿಕಾರದ ಅಹಂಕಾರ, ಅನ್ಯಾಯ, ಭಯ ಮತ್ತು ದೌರ್ಜನ್ಯ ಜನರನ್ನು ಕಂಗೆಡಿಸಿದ್ದವು. ಇಂದು ಕಾಲ ಬದಲಾಗಿದೆ. ಆದರೆ ಮಾನವನೊಳಗಿನ ಕಂಸ ಇನ್ನೂ ಸತ್ತಿಲ್ಲ.

ಇಂದು ಕಂಸ ಒಬ್ಬ ವ್ಯಕ್ತಿಯ ರೂಪದಲ್ಲಿಲ್ಲ.

ಅದು ಅಧಿಕಾರದ ಅಹಂಕಾರದಲ್ಲಿ, ಭ್ರಷ್ಟಾಚಾರದಲ್ಲಿ, ದ್ವೇಷದಲ್ಲಿ, ಜಾತೀಯತೆಯಲ್ಲಿ, ಸುಳ್ಳಿನಲ್ಲಿ, ಸ್ವಾರ್ಥದಲ್ಲಿ ಮತ್ತು ಮಾನವೀಯತೆಯ ಕೊರತೆಯಲ್ಲಿ ಕಾಣಿಸಿಕೊಳ್ಳುತ್ತಿದೆ.

ಕೃಷ್ಣನನ್ನು ಪೂಜಿಸುವ ಕೈಗಳೇ ಮತ್ತೊಬ್ಬರನ್ನು ನೋಯಿಸುತ್ತಿರುವಾಗ, ಕೃಷ್ಣನ ಹೆಸರನ್ನು ಜಪಿಸುವ ತುಟಿಗಳೇ ದ್ವೇಷವನ್ನು ಬಿತ್ತುತ್ತಿರುವಾಗ, ಕೃಷ್ಣನ ಭಕ್ತಿಯ ಬಗ್ಗೆ ಮಾತನಾಡುವ ಮನಸ್ಸಿನಲ್ಲೇ ಅಸೂಯೆ ತುಂಬಿಕೊಂಡಿರುವಾಗ ನಮ್ಮೊಳಗೆ ಕೃಷ್ಣ ಹುಟ್ಟಿದ್ದಾನೆ ಎಂದು ಹೇಗೆ ಹೇಳಿಕೊಳ್ಳಲು ಸಾಧ್ಯ



ಹೇಗೆ ಕೃಷ್ಣನ ಕೊಳಲು ನಮಗೆ ಒಂದು ಸುಂದರ ಪಾಠ ಕಲಿಸುತ್ತದೆ. ಕೊಳಲಿನಲ್ಲಿ ತನ್ನದೇನೂ ಇಲ್ಲ; ಅದು ಒಳಗೆ ಖಾಲಿಯಾಗಿರುವುದರಿಂದ ಕೃಷ್ಣನ ಉಸಿರಿಗೆ ಸಂಗೀತವಾಗುತ್ತದೆ. ನಮ್ಮ ಮನಸ್ಸು ಕೂಡ ಅಹಂಕಾರ, ದ್ವೇಷ, ಅಸೂಯೆ ಮತ್ತು ಸ್ವಾರ್ಥದಿಂದ ಖಾಲಿಯಾದಾಗ ಮಾತ್ರ ದೈವತ್ವದ ಸಂಗೀತ ನಮ್ಮೊಳಗೆ ಮೊಳಗುತ್ತದೆ.

ಭಗವದ್ಗೀತೆಯಲ್ಲಿ ಕೃಷ್ಣನು ಅರ್ಜುನನಿಗೆ ಹೇಳಿದ ಕರ್ಮಣ್ಯೇವಾಧಿಕಾರಸ್ತೇ ಎಂಬ ಸಂದೇಶ ಇಂದಿಗೂ ಅಷ್ಟೇ ಪ್ರಸ್ತುತ. ಫಲದ ಬಗ್ಗೆ ಅತಿಯಾದ ಚಿಂತೆಯನ್ನು ಬಿಟ್ಟು, ನಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡುವುದು, ಇದು ಕೃಷ್ಣನ ಜೀವನದ ಮಹತ್ವದ ಸಂದೇಶವಾಗಿದೆ.

ಇಂದು ನಾವು ಯಶಸ್ಸನ್ನು ಬಯಸುತ್ತೇವೆ; ಆದರೆ ಪರಿಶ್ರಮ ಬೇಡ. ಹೆಸರು ಬಯಸುತ್ತೇವೆ; ಆದರೆ ಜವಾಬ್ದಾರಿ ಬೇಡ. ಗೌರವ ಬಯಸುತ್ತೇವೆ; ಆದರೆ ಇತರರಿಗೆ ಗೌರವ ನೀಡಲು ಸಿದ್ಧರಿಲ್ಲ. ಸತ್ಯವನ್ನು ಬಯಸುತ್ತೇವೆ; ಆದರೆ ನಮ್ಮ ಅನುಕೂಲಕ್ಕೆ ತಕ್ಕ ಸುಳ್ಳನ್ನು ಒಪ್ಪಿಕೊಳ್ಳುತ್ತೇವೆ.

ಇಂತಹ ಸಂದರ್ಭದಲ್ಲಿ ಕೃಷ್ಣನ ಜನ್ಮಾಷ್ಟಮಿ ನಮ್ಮ ಆತ್ಮಾವಲೋಕನದ ದಿನವಾಗಬೇಕು.

ಕೃಷ್ಣನು ಹೊರಗಡೆ ದೇವಾಲಯದಲ್ಲಿ ಮಾತ್ರ ಹುಟ್ಟಬೇಕಿಲ್ಲ.

ಅವನು ನಮ್ಮ ಮಾತಿನಲ್ಲಿ ಸತ್ಯವಾಗಿ, ನಮ್ಮ ಕೃತ್ಯದಲ್ಲಿ ಧರ್ಮವಾಗಿ, ನಮ್ಮ ಹೃದಯದಲ್ಲಿ ಕರುಣೆಯಾಗಿ, ನಮ್ಮ ಬದುಕಿನಲ್ಲಿ ಪ್ರಾಮಾಣಿಕತೆಯಾಗಿ ಹುಟ್ಟಬೇಕು.

ಒಬ್ಬ ಬಡವನ ಕಣ್ಣೀರನ್ನು ಒರೆಸಿದಾಗ, ಅನ್ಯಾಯದ ವಿರುದ್ಧ ಧೈರ್ಯವಾಗಿ ನಿಂತಾಗ, ಹಸಿದವನಿಗೆ ಅನ್ನ ನೀಡಿದಾಗ, ದಾರಿ ತಪ್ಪಿದವನಿಗೆ ದಾರಿ ತೋರಿಸಿದಾಗ, ದ್ವೇಷದ ಬದಲು ಪ್ರೀತಿಯನ್ನು ಆರಿಸಿಕೊಂಡಾಗ ಕೃಷ್ಣ ಹುಟ್ಟುತ್ತಾನೆ. ಹಾಗಾಗಿ ಈ ಜನ್ಮಾಷ್ಟಮಿಗೆ ನಾವು ಕೇವಲ ಜೈ ಶ್ರೀಕೃಷ್ಣ ಎಂದು ಕೂಗುವುದಕ್ಕಿಂತ, ನಮ್ಮೊಳಗೆ ಒಂದು ಸಣ್ಣ ಬದಲಾವಣೆಗೆ ನಾಂದಿ ಹಾಡೋಣ. ಮನೆಯ ದೇವರ ಕೋಣೆಯಲ್ಲಿ ಕೃಷ್ಣನ ಮೂರ್ತಿ ಇರಲಿ. ಆದರೆ ಅದಕ್ಕಿಂತ ಮುಖ್ಯವಾಗಿ ನಮ್ಮ ಹೃದಯದಲ್ಲಿ ಕೃಷ್ಣನ ಮೌಲ್ಯಗಳು ಇರಲಿ. ಏಕೆಂದರೆ

ಕೃಷ್ಣನ ಜನ್ಮವನ್ನು ಆಚರಿಸುವುದು ಹಬ್ಬ;

ಕೃಷ್ಣನ ಸಂದೇಶದಂತೆ ಬದುಕುವುದು ನಿಜವಾದ ಭಕ್ತಿ. ಇಂದು ಸಮಾಜಕ್ಕೆ ಮತ್ತೊಬ್ಬ ಕೃಷ್ಣನ ಅಗತ್ಯವಿಲ್ಲ. ಪ್ರತಿಯೊಬ್ಬ ಮನುಷ್ಯನೊಳಗೂ ಒಬ್ಬ ಕೃಷ್ಣ ಎಚ್ಚರಗೊಳ್ಳುವ ಅಗತ್ಯವಿದೆ. ಅದು ನಡೆದ ದಿನವೇ ನಿಜವಾದ ಜನ್ಮಾಷ್ಟಮಿ.



ಕೃಷ್ಣನು ಹುಟ್ಟಲಿ ಆದರೆ, ಕಾರಾಗೃಹದಲ್ಲಿ ಅಲ್ಲ; ನಮ್ಮ ಹೃದಯದಲ್ಲಿ.

ಕಂಸನನ್ನು ಕೊಲ್ಲಲು ಅಲ್ಲ; ನಮ್ಮೊಳಗಿನ ಕಂಸನನ್ನು ಕೊಲ್ಲಲು!

ನಾಡಿನ ಸಮಸ್ತ ಬಂಧು–ಮಿತ್ರರಿಗೂ ಈ ಕೃಷ್ಣ ಪ್ರೀಯನ ಪ್ರೀತಿ ಪೂರ್ವಕ ಶ್ರೀ ಕೃಷ್ಣ ಜನ್ಮಾಷ್ಟಮಿಯ ಶುಭಾಶಯಗಳು.



ಪ್ರೊ. ಸಂತೋಷ ಮುಗಳಿ,
ಮುಗಳಖೋಡ



ದಸರಾ ಆನೆ ಮಹೇಂದ್ರ ಭಾನುವಾರ ಮರಳಿನ ಚೀಲಗಳನ್ನು ಹೊತ್ತು ಜಂಬೂಸವಾರಿ ಮಾರ್ಗದಲ್ಲಿ ಇತರ ಆನೆಗಳನ್ನು ಮುನ್ನಡೆಸುವ ಮೂಲಕ ತೂಕ ತರಬೇತಿಯನ್ನು ಪ್ರಾರಂಭಿಸಿತು.

### 6 ಸಾವಿರಕ್ಕೆ ಕೆಲಸಕ್ಕಿದ್ದವ ಈಗ ಕೋಟಿ ಕೋಟಿ ಒಡೆಯ

# ಕೆಪಿಎಸ್‌ಸಿ ಸದಸ್ಯನಾದ ನಂತರ 100 ಎಕರೆ ಜಮೀನು ಖರೀದಿ 'ಸುಂಗಪ್ಪ' ಸಾಹುಕಾರ್ ಸ್ಟೋರಿ

**ಕಲಬುರಗಿ, ಸೆ. 6:** ಕೆಪಿಎಸ್‌ಸಿ ಪಶುವೈದ್ಯ ಹುದ್ದೆಗಳ ನೇಮಕಾತಿ ಅಕ್ರಮ ಹಗರಣದಲ್ಲಿ ಆರೋಪ ಹೊತ್ತಿರುವ ಆಯೋಗದ ಮಾಜಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಸಂಪತ್ತು ಬಗೆದಷ್ಟು ಬಯಲಾಗುತ್ತಿದೆ. ಕೆಪಿಎಸ್‌ಸಿ ಸದಸ್ಯನಾಗಿ 2019ರಲ್ಲಿ ನೇಮಕವಾಗಿದ್ದ ಶಿವಶಂಕರಪ್ಪ ಸಾಹುಕಾರ್, 2019ವರೆಗೆ ಕಲಬುರಗಿ ಸರ್ಕಾರೇತರ ಸಂಸ್ಥೆಯಲ್ಲಿ ಮಾಸಿಕ 6 ಸಾವಿರ ಸಂಬಳಕ್ಕೆ ಕೆಲಸ ಮಾಡುತ್ತಿದ್ದರು.

ಕೆಪಿಎಸ್‌ಸಿ ಸದಸ್ಯರಾಗಿ ನೇಮಕವಾದ ಬಳಿಕ ಕೋಟಿ ಕೋಟಿ ಆಸ್ತಿ ಖರೀದಿ ಮಾಡಿ ಶಿವಶಂಕರಪ್ಪ ಸಾಹುಕಾರ್ ಆಗಿದ್ದಾರೆ ಎಂದು ಐಟಿ ದಾಖಲೆ ಬಿಡುಗಡೆ ಮಾಡಿದೆ.

ಸಾಹುಕಾರ್‌ಗೆ ಇರುವ ಪಿತ್ರಾರ್ಜಿತ ಆಸ್ತಿ ಕೇವಲ 4 ಎಕರೆ ಜಮೀನು ಮಾತ್ರ. ಈಗ ತಮ್ಮ ಹೆಸರಿಗೆ ಹೆಂಡತಿ ಮತ್ತು ಮಗನ ಹೆಸರಲ್ಲಿ ನೂರು ಎಕರೆಗೂ ಹೆಚ್ಚು ಜಮೀನು ಖರೀದಿ ಮಾಡಿದ್ದಾರೆಂದು ಆರೋಪಿಸಲಾಗಿದೆ. ಕೆಪಿಎಸ್‌ಸಿ ಸದಸ್ಯ ಮತ್ತು ಅಧ್ಯಕ್ಷ ಆದ ಮೇಲೆ ನೂರು ಎಕರೆಗೂ ಹೆಚ್ಚು ಎಕರೆ ಜಮೀನು ಖರೀದಿಸಿದ್ದಾರೆ. ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ವಿವಿಧೆಡೆ ಕೋಟ್ಯಾಂತರ ರು. ಮೌಲ್ಯದ ಜಮೀನು ಖರೀದಿಸಿದ್ದರು. ಕಲಬುರಗಿಯ ಸಾಮಾಜಿಕ ಕಾರ್ಯಕರ್ತ ಶರಣ್, ಐಟಿ ಸಾಹುಕಾರ್ ಅವರ ಜಮೀನಿನ ದಾಖಲೆಗಳ ಬಿಡುಗಡೆ ಮಾಡಿದ್ದಾರೆ. ನೇಮಕಾತಿಯಲ್ಲಿ ಅಭ್ಯರ್ಥಿಗಳಿಂದ ಲಕ್ಷ ಲಕ್ಷ ಹಣ ಪಡೆದು ಕೋಟಿ ಕೋಟಿ ಆಸ್ತಿ ಮಾಡಿಕೊಂಡಿದ್ದಾರೆ. ನಿಷ್ಪಕ್ಷಪಾತ ತನಿಖೆ ಮಾಡಿದರೆ ಅವರ ಅಕ್ರಮ ಆಸ್ತಿ ಇನ್ನೂ ಹೊರಗೆ ಬರುತ್ತದೆ ಎಂದು ಶರಣು ಐಟಿ ಆಗ್ರಹಿಸಿದ್ದಾರೆ.

ಪಶುವೈದ್ಯಾಧಿಕಾರಿಗಳ ನೇಮಕಾತಿ ಹಗರಣ ಸಂಬಂಧ ನೋಟಿಸ್ ನೀಡಿದ ಕೆಲವೇ ಕ್ಷಣಗಳಲ್ಲಿ ಸಿಐಡಿ ಮುಂದೆ ರಾತ್ರಿ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಮಾನತುಗೊಂಡಿರುವ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ದಿಢೀರ್ ವಿಚಾರಣೆಗೆ ಹಾಜರಾಗಿದ್ದಾರೆ. ನಗರದ ಅರಮನೆ ರಸ್ತೆಯಲ್ಲಿ ಸಿಐಡಿ ಕೇಂದ್ರ ಕಚೇರಿಯಲ್ಲಿ ರಾತ್ರಿ 9 ಗಂಟೆ ಸುಮಾರಿಗೆ ತನಿಖಾಧಿಕಾರಿ ಮುಂದೆ ಎರಡನೇ ಬಾರಿಗೆ ಶಿವಶಂಕರಪ್ಪ ಹಾಜರಾಗಿದ್ದಾರೆ. ಒಂದು ಗಂಟೆಗೂ ಅಧಿಕ




ಹೊತ್ತು ಸಾಹುಕಾರ್‌ರನ್ನು ಪ್ರಶ್ನಿಸಿ ಹೇಳಿಕೆ ದಾಖಲಿಸಿಕೊಂಡ ಸಿಐಡಿ, ಅಗತ್ಯಬಿದ್ದರೆ ಮತ್ತೆ ವಿಚಾರಣೆಗೆ ಬರುವಂತೆ ಸೂಚಿಸಿ ಕಳುಹಿಸಿದೆ ಎಂದು ತಿಳಿದು ಬಂದಿದೆ.

ಇನ್ನು ವಿಚಾರಣೆ ವೇಳೆ ತಾವು ಯಾವುದೇ ತಪ್ಪು ಮಾಡಿಲ್ಲ ಎಂದು ಪುನರುಚ್ಚರಿಸಿರುವ ಶಿವಶಂಕರಪ್ಪ ಸಾಹುಕರ ಅವರು, ಸಿಐಡಿ ತನಿಖೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ಅಧಿಕಾರಿಗಳ ಮುಂದೆ ಅಲವತ್ತುಕೊಂಡಿದ್ದಾರೆ ಎನ್ನಲಾಗಿದೆ.

ಈ ವಿಚಾರಣೆ ಸಂದರ್ಭದಲ್ಲಿ ಹಗರಣದಲ್ಲಿ ಬಂಧಿತ ಆರೋಪಿಗಳಾದ ಐಎಎಸ್ ಅಧಿಕಾರಿ ಜ್ಞಾನೇಂದ್ರ ಹಾಗೂ ಬಿಜೆಪಿ ಮುಖಂಡ ಬಸವರಾಜ್ ಕನ್ನಾಳೆ ಸ್ನೇಹ ಬಗ್ಗೆ ತನಿಖಾಧಿಕಾರಿ ಪ್ರಸ್ತಾಪಿಸಿದ್ದಾರೆ. ತನಗೆ ವೈಯಕ್ತಿಕವಾಗಿ ಬಸವರಾಜ್ ಪರಿಚಯವಿಲ್ಲ. ಆತ ಯಾರೆಂಬುದೂ ಗೊತ್ತಿಲ್ಲ. ಆದರೆ ಕೆಪಿಎಸ್‌ಸಿ ಅಧ್ಯಕ್ಷನಾಗಿರುವ ಕಾರಣ ಆಯೋಗದ ಪರೀಕ್ಷಾ ನಿಯಂತ್ರಕರಾಗಿದ್ದ ಜ್ಞಾನೇಂದ್ರ ಅವರ ಜತೆ ಒಡನಾಟವಿತ್ತು. ಆಯೋಗದ ಕೆಲಸಗಳಿಗೆ ಸೀಮಿತವಾಗಿ ಅಧಿಕಾರಿ ಜತೆ ಸಂಪರ್ಕವಿತ್ತು. ನೇಮಕಾತಿ ಅಕ್ರಮದಲ್ಲಿ ಅವರ ಪಾತ್ರದ ಬಗ್ಗೆ ಗೊತ್ತಿಲ್ಲ ಎಂದು ಶಿವಶಂಕರಪ್ಪ ಹೇಳಿರುವುದಾಗಿ ಮೂಲಗಳು ತಿಳಿಸಿವೆ.

ಪಶುವೈದ್ಯಾಧಿಕಾರಿಗಳ ನೇಮಕಾತಿ ಹಗರಣ ಸಂಬಂಧ ಎರಡು ದಿನಗಳಲ್ಲಿ ವಿಚಾರಣೆಗೆ ಹಾಜರಾಗುವಂತೆ ಶಿವಶಂಕರಪ್ಪ ಅವರಿಗೆ ಗುರುವಾರ ಮಧ್ಯಾಹ್ನ ಸಿಐಡಿ ಎರಡನೇ ಬಾರಿಗೆ ನೋಟಿಸ್ ಜಾರಿಗೊಳಿಸಿತ್ತು. ಈ ನೋಟಿಸ್ ಸ್ವೀಕರಿಸಿದ ಕೆಲವೇ ತಾಸುಗಳಲ್ಲಿ ತಮ್ಮ ವಕೀಲರನ್ನು ಸಂಪರ್ಕಿಸಿ ಸಮಾಲೋಚಿಸಿ ಅವರು ಅಭಿಪ್ರಾಯಪಡೆದರು. ಕೊನೆಗೆ ತಮ್ಮ ವಕೀಲರ ಸಲಹೆ ಮೇರೆಗೆ ರಾತ್ರಿಯೇ ಸಿಐಡಿ ಕಚೇರಿಗೆ ತೆರಳಿ ತನಿಖಾಧಿಕಾರಿ ಮುಂದೆ ಶಿವಶಂಕರಪ್ಪ ಹಾಜರಾಗಿದ್ದಾರೆ ಎನ್ನಲಾಗಿದೆ.

## ಬರಗಾಲ ಘೋಷಣೆ ಹೋರಾಟ 5ನೇ ದಿನಕ್ಕೆ



**ವಿಜಯಪುರ, ಸೆ.6:** ಜಿಲ್ಲೆಯಲ್ಲಿ 2026–27ನೇ ಸಾಲಿನಲ್ಲಿ ಮಳೆ ಸಂಪೂರ್ಣ ಕೈಕೊಟ್ಟಿರುವುದನ್ನು ತಿಳಿದಿದ್ದರು ಕೇವಲ 3 ತಾಲೂಕುಗಳನ್ನು ಪೂರ್ಣ ಬರಗಾಲ ಹಾಗೂ ಇನ್ನು 3 ತಾಲೂಕುಗಳು ಮಧ್ಯಮ ಬರಗಾಲವೆಂದು ಪರಿಗಣಿಸಿ ಉಳಿದ 7 ತಾಲೂಕುಗಳನ್ನು ಕೈ ಬಿಡಲಾಗಿದ್ದು ಕೂಡಲೇ ಜಿಲ್ಲೆಯ 13 ತಾಲೂಕುಗಳನ್ನು ಬರಗಾಲ ಎಂದು ಘೋಷಣೆ ಮಾಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ನಡೆಯುತ್ತಿರುವ ಹೋರಾಟ 5ನೇ ದಿನವೂ ಮುಂದುವರಿದಿದೆ.

ಈ ವೇಳೆ ಬಬಲೇಶ್ವರ ತಾಲೂಕಾ ಅಧ್ಯಕ್ಷರಾದ ಸುರೇಶ ಕಿರಸುರ ಅವರು ಮಾತನಾಡುತ್ತ ಜಿಲ್ಲೆಯ 13 ತಾಲೂಕುಗಳನ್ನು ಸಂಪೂರ್ಣ ಬರಗಾಲ ಎಂದು ಘೋಷಣೆ ಮಾಡುವವರಿಗೂ ನಾವೂ ಹೋರಾಟ ಹಿಂಪಡೆಯುವ ಮಾತೇ ಇಲ್ಲ ಎಂದರು.

ಇಂಡಿ ತಾಲೂಕಾ ಅಧ್ಯಕ್ಷ ಮಾಳಪ್ಪ ಪೂಜಾರಿ ಅವರೂ ಮಾತನಾಡುತ್ತ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ ಅವರಿಗೆ ರೈತರ ಕಷ್ಟ ಕಣ್ಣಿಗೆ ಕಾಣುತ್ತಿಲ್ಲ, ಅವರು ದೊಡ್ಡ ವ್ಯಾಪಾರಿಗಳ ತರಹ ವರ್ತನೆ ಮಾಡುತ್ತಿದ್ದು, ಕೇವಲ ಸರ್ಕಾರದಲ್ಲಿ ಹಣ ಇಲ್ಲ, ಎಂದು ಹಣ ಮಾಡುವ ಉದ್ದೇಶದಿಂದ ಈ ರೀತಿ ಮಾಡುತ್ತಿದ್ದಾರೆ, ಕೂಡಲೇ ಜಿಲ್ಲೆಯನ್ನು ಬರಗಾಲ ಎಂದು ಘೋಷಣೆ ಮಾಡಿ ಪರಿಹಾರ ಘೋಷಣೆ ಮಾಡಬೇಕು ಎಂದರು.

ಈ ವೇಳೆ ಜಿಲ್ಲಾಧ್ಯಕ್ಷ ಸಂಗಮೇಶ ಸಗರ್, ಮುಖಂಡರಾದ ಮಹಾದೇವ ಬನಸೋಡೇ, ಈರಪ್ಪ ಕುಳೆಕುಮಟಗಿ, ಶಿವಾನಂದಯ್ಯ ಹಿರೇಮಠ, ಜಕರಾಯ ಪೂಜಾರಿ, ಗೋರಖನಾಥ ಗೇರಡೇ, ಗಿರೀಜಾ ಮೈತ್ರಿ, ಭಾಗೀರಥಿ ಕುಂಬಾರ, ಬಿಬಿಜಾನ್ ಬಿರಾದಾರ, ರೇವಮ್ಮ ಬಿರಾದಾರ, ಜಾನಾಬಾಯಿ ಬಿರಾದಾರ, ರಮೇಶ ನ್ಯಾಮಗೌಡ

ನಂದೇಪ್ಪ ಗಾಣಿಗೇರ, ಮಳೆಪ್ಪ ಮಲಕಗೊಂಡ, ತಮ್ಮಣ್ಣ ಜಮಖಂಡಿ, ಈರಯ್ಯ ಬಾಡಗಿಮಠ, ಗಣಪತಿ ಕಾರಜೋಳ, ಮಲ್ಲನಗೌಡ ಬಿರಾದಾರ, ಈರಪ್ಪ ಗಸ್ತಿ, ಸಂಗಮೇಶ ಬಿರಾದಾರ, ದುಂಡಪ್ಪ ಹಂಗರಗಿ, ಸೇರಿದಂತೆ ನೂರಾರು ಜನರು ಹೋರಾಟದಲ್ಲಿ ಭಾಗವಹಿಸಿದ್ದರು.

### ಶಾಸಕ ಸಿ.ಎಸ್. ನಾಡಗೌಡರಿಗೆ ಸಚಿವ ಎಂ.ಬಿ. ಪಾಟೀಲ್ ಎಚ್ಚರಿಕೆ

# ಸಹನೆ ದೌರ್ಬಲ್ಯವಲ್ಲ, ಹೈಕಮಾಂಡ್ ಸೂಚನೆಯಂತೆ ಸುಮ್ಮನಿದ್ದೇನೆ

**ವಿಜಯಪುರ, ಸೆ.6:** ಶಾಸಕ ಸಿ.ಎಸ್.ನಾಡಗೌಡ ಇತ್ತೀಚಿನ ದಿನಗಳಲ್ಲಿ ಸರ್ಕಾರ, ಹೈಕಮಾಂಡ್ ಮತ್ತು ನನ್ನ ವಿರುದ್ಧ ಅತೀ ನೀಚ ಮಟ್ಟದ ಹೇಳಿಕೆಗಳನ್ನು ಸತತವಾಗಿ ನೀಡುತ್ತಿದ್ದಾರೆ. ಈ ಕುರಿತು ಹೈಕಮಾಂಡ್ ನನಗೆ ಸಹನೆಯಿಂದ ಇರಲು ಸೂಚನೆ ನೀಡಿದೆ. ಆದರೆ, ನನ್ನ ಸಹನೆ ದೌರ್ಬಲ್ಯ ಎಂದು ತಿಳಿದರೆ ಸರಿ ಇರಲ್ಲ' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಎಚ್ಚರಿಕೆ ನೀಡಿದ್ದಾರೆ.

ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಮುದ್ದೇಬಿಹಾಳ, ತಾಳಿಕೋಟೆ ತಾಲ್ಲೂಕುಗಳನ್ನು ಬರ ಪಟ್ಟಿಯಲ್ಲಿ ಸೇರಿಸದಿದ್ದರೆ ತಹಶೀಲ್ದಾರ್ ಕಚೇರಿ ಮುಂದೆ ಉಪವಾಸ ಕೂರುತ್ತೇನೆ, ಬರಪೀಡಿತ ಎಂದು ಘೋಷಣೆ ಆಗದಿರಲು ಉಸ್ತುವಾರಿ ಸಚಿವರ ಷಡ್ಯಂತ್ರವೇ ಕಾರಣ, ಸರ್ಕಾರದ



ದಾರಿ ತಪ್ಪಿಸಿ, ಅಧಿಕಾರಿಗಳ ಅಂಕಿ ಅಂಶಗಳನ್ನು ಮರೆ ಮಾಚಿ, ತಮಗೆ ಬೇಕಾಗಿರುವ ಕ್ಷೇತ್ರಗಳನಷ್ಟೆ ಬರಪೀಡಿತ ಪಟ್ಟಿಯಲ್ಲಿ ಸೇರಿಸಿದ್ದಾರೆ ಎಂಬ ಶಾಸಕ ಸಿ.ಎಸ್.ನಾಡಗೌಡ ಅವರ ಆರೋಪಕ್ಕೆ ಸಚಿವರು ಸ್ಪಷ್ಟೀಕರಣ ನೀಡಿದ್ದಾರೆ.

ವಿಜಯಪುರ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿಯೂ ಮಳೆ ಅಭಾವದಿಂದ ಬರದ ತೀವ್ರ ಸ್ಥಿತಿ ಇದೆ. ಕೇಂದ್ರ ಸರ್ಕಾರದ ಮಾರ್ಗ ಸೂಚಿಗಳನ್ವಯ ರಾಜ್ಯದ ವಿಪತ್ತು ಕೋಶದವರು ಕಾಲ–ಕಾಲಕ್ಕೆ ಉಪಗ್ರಹ ಮೂಲಕ ಮಾಹಿತಿ ಪಡೆದು, ಪ್ರತಿವಾರ ವಸ್ತು ಸ್ಥಿತಿಯನ್ನು ಅವಲೋಕಿಸಿ, ಬರದ ತಾಲ್ಲೂಕುಗಳನ್ನು ಘೋಷಿಸುತ್ತಾರೆ. ಇದರಲ್ಲಿ ನನ್ನ ಪಾತ್ರವಿಲ್ಲ ಎಂದು ತಿಳಿಸಿದ್ದಾರೆ.

ವಿಜಯಪುರ ಜಿಲ್ಲೆಯ ಎಲ್ಲ ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸುವಂತೆ ಸಭೆ ನಡೆಸಿ, ಸರ್ಕಾರಕ್ಕೆ ಮಾಹಿತಿ ನೀಡಿ, ಪತ್ರವನ್ನು ನೀಡಿದ್ದೇನೆ. ಮುಂದಿನ ವಾರಗಳಲ್ಲಿ ಜಿಲ್ಲೆಯ ಎಲ್ಲ ತಾಲ್ಲೂಕುಗಳು ಬರ ಪೀಡಿತ ಎಂದು ಘೋಷಣೆ ಆಗಲಿವೆ. ಮೊದಲ ಪಟ್ಟಿ ಬಿಡುಗಡೆ ಆದಾಗ ನನ್ನ ಕ್ಷೇತ್ರವೂ ಸೇರಿರಲಿಲ್ಲ. ಇದರಲ್ಲಿ ಯಾವುದೇ ರಾಜಕೀಯ ಹಸ್ತಕ್ಷೇಪ ಅಸಾಧ್ಯ. ಈ ಎಲ್ಲ ಮಾಹಿತಿಯೂ ಎಲ್ಲ ಶಾಸಕರಿಗೂ ತಿಳಿದಿರುವ ಸಂಗತಿ' ಎಂದು ಹೇಳಿದ್ದಾರೆ.

ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ಬರದ ಅಧ್ಯಯನಕ್ಕೆ ಶಾಸಕ ನಾಡಗೌಡ ಅವರ ಕ್ಷೇತ್ರಗಳಿಗೆ ಜಿಲ್ಲೆಯ ಅಧಿಕಾರಿಗಳ ತಂಡವನ್ನು ಕರೆದು ಕೊಂಡು ಎರಡು ಬಾರಿ ಹೊರಟಾಗಲೂ, ನಾನು ದೆಹಲಿಯಲ್ಲಿದ್ದೇನೆ, ಬೆಂಗಳೂರಿ ನಲ್ಲಿದ್ದೇನೆ ಎಂದು ಅಲ್ಲಿಗೆ ಬಾರದೆ, ಇದೀಗ ರೈತರ ಹೆಸರಿನಲ್ಲಿ ಸರ್ಕಾರದ ವಿರುದ್ಧ ಹೇಳಿಕೆ ನೀಡಿರುವುದು ಹಾಸ್ಯಾಸ್ಪದ' ಎಂದು ಖಂಡಿಸಿದ್ದಾರೆ.

ಬರ ವಿಷಯವು ಉಪಮುಖ್ಯ ಮಂತ್ರಿಗಳಿಗೆ ಸೇರಿದ ಕಂದಾಯ ಇಲಾಖೆಯದ್ದಾಗಿದೆ. ಅನ್ಯಾಯವಾಗಿದ್ದರೆ ಶಾಸಕರು ಮುಖ್ಯಮಂತ್ರಿಯನ್ನು ಹಾಗೂ ಕಂದಾಯ ಸಚಿವರನ್ನು ಭೇಟಿ ಮಾಡಿ ಚರ್ಚಿಸಬಹುದಿತ್ತು. ಅದನ್ನು ಬಿಟ್ಟು ಕ್ಷೇತ್ರದ ಜನರನ್ನು ವಂಚಿಸಲು ನಾಟಕ ಮಾಡಿದ್ದೀರಿ. ಜನತೆ ನಿಮ್ಮ ಮಾತಿಗೆ ಮರುಳಾಗಲು ಮೂರ್ಖರಲ್ಲ. ಅವರಿಗೆ ನಿಮ್ಮ ನಿಜ ಬಣ್ಣ ತಿಳಿಯುತ್ತದೆ' ಎಂದು ಸಚಿವರು ತಿರುಗೇಟು ನೀಡಿದ್ದಾರೆ.

ಮುದ್ದೇಬಿಹಾಳ ಶಾಸಕರು ವಯೋಸಹಜವಾಗಿ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದಾರೆ. ಇವರಿಗೆ ಚಿಕಿತ್ಸೆ ಅವಶ್ಯಕತೆ ಇದ್ದು, ಇಂತಹ ನೀಚತನದ ಹೇಳಿಕೆಗಳು ಮುಂದುವರೆದರೆ, ಇವರ ಮಾನಸಿಕ ಕಾಯಿಲೆಗೆ ಚಿಕಿತ್ಸೆಯೇ ಮದ್ದು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 6ನೇ ದಿನದ ಬಿಜೆಪಿ ಪಾದಯಾತ್ರೆ ಅಂತ್ಯ: ಬಳ್ಳಾರಿ ಪ್ರವೇಶ

ಗಂಗಾವತಿ/ಕಂಪ್ಲಿ, ಸೆ.6: ಭ್ರಷ್ಟ ಹಾಗೂ ಜನವಿರೋಧಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ನಡೆಯುತ್ತಿರುವ ಬಳ್ಳಾರಿ ಚಲೋ ಪಾದಯಾತ್ರೆ ಆರನೇ ದಿನವೂ ಜನರೊಂದಿಗೆ ಬೆರೆತು, ಅವರ ಸಮಸ್ಯೆಗಳನ್ನು ಆಲಿಸುತ್ತಾ ಮುಂದುವರಿದು, ಅಂತಿಮವಾಗಿ ಬಳ್ಳಾರಿ ಜಿಲ್ಲೆಗೆ ಅದ್ದೂರಿಯಾಗಿ ಪ್ರವೇಶಿಸಿತು.



ಸಿಎಂಗೆ ವಿಜಯೇಂದ್ರ ತಿರುಗೇಟು

ಪಾದಯಾತ್ರೆ ಆರಂಭಕ್ಕೂ ಮುನ್ನ ಸುದ್ದಿಗಾರರ ಜೊತೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಪಾದಯಾತ್ರೆ ಆರಂಭಿಸಿದ ಬಳಿಕವೇ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉತ್ತರ ಕರ್ನಾಟಕದತ್ತ ಮುಖ ಮಾಡಿದ್ದಾರೆ ಎಂದು ವ್ಯಂಗ್ಯವಾಡಿದರು.

ಬಡವರ ಬಿಪಿಎಲ್ ಕಾರ್ಡ್ ಕಡಿತ, ಬರ ಪರಿಹಾರ ನೀಡದಿರುವುದು, ಗ್ರಾಮೀಣ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಹಾಗೂ ಆಸ್ಪತ್ರೆಗಳಲ್ಲಿ ವೈದ್ಯರಿಲ್ಲದಿರುವುದನ್ನು ಪ್ರಶ್ನಿಸಿದ ಅವರು, ಇಂತಹ ಪರಿಸ್ಥಿತಿಯಲ್ಲಿ ಸರ್ಕಾರವನ್ನು ಹೇಗೆ ಪ್ರಜಾಸೇವಕ ಸರ್ಕಾರ ಎಂದು ಕರೆಯಲು ಸಾಧ್ಯ ಎಂದು ಪ್ರಶ್ನಿಸಿದರು.

**ಅಭಿಮಾನಿಯಿಂದ ಕುರಿಮರಿ ಕಾಣಿಕೆ**

ಸುದ್ದಿಗೋಷ್ಠಿಯ ಬಳಿಕ ಪಾದಯಾತ್ರೆ ಮುಂದುವರಿದ ಸಂದರ್ಭದಲ್ಲಿ ಅಭಿಮಾನಿಯೊಬ್ಬರು ವಿಜಯೇಂದ್ರ ಅವರಿಗೆ ಕುರಿಮರಿಯನ್ನು ಆತ್ಮೀಯ ಕಾಣಿಕೆಯಾಗಿ ನೀಡಿದರು. ಬೆಳಗ್ಗೆಯೇ ಕುರಿಗಾಯಿಗಳೊಂದಿಗೆ ಬೆರೆತು ಅವರ ಬದುಕನ್ನು ಆಲಿಸಿದ್ದ ವಿಜಯೇಂದ್ರ ಅವರಿಗೆ ಈ ಕಾಣಿಕೆ ವಿಶೇಷವಾಗಿತ್ತು.

**ಗಂಗಾವತಿಯಲ್ಲಿ ಸಾರ್ವಜನಿಕ ಸಮಾರಂಭ**

ಗಂಗಾವತಿಯಲ್ಲಿ ನಡೆದ ಸಾರ್ವಜನಿಕ ಸಮಾರಂಭದಲ್ಲಿ ವಿಜಯೇಂದ್ರ ಅವರು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಜನರ ಸಮಸ್ಯೆಗಳಿಗೆ ಸ್ಪಂದಿಸದೆ, ಬಡವರು ಹಾಗೂ ರೈತರ ಸಂಕಷ್ಟಗಳನ್ನು ಕಡೆಗಣಿಸುತ್ತಿರುವ ಸರ್ಕಾರದ ವಿರುದ್ಧ ಜನರ ಧ್ವನಿಯಾಗಿ ಬಿಜೆಪಿ ಹೋರಾಟ ಮುಂದುವರಿಸಲಿದೆ ಎಂದು ಹೇಳಿದರು.

**ಊಟದ ವಿರಾಮದಲ್ಲಿ ವಿದ್ಯಾರ್ಥಿಗಳೊಂದಿಗೆ ಆತ್ಮೀಯ ಸಂವಾದ**

ಪಾದಯಾತ್ರೆಯ ಮಧ್ಯೆ ಊಟದ ವಿರಾಮದ ಸಂದರ್ಭದಲ್ಲಿ ಕಂಪ್ಲಿ ತಾಲೂಕಿನ ವಿನೋಬನಗರದಲ್ಲಿ ವಿದ್ಯಾರ್ಥಿಗಳು ಹಾಗೂ ಯುವಕರೊಂದಿಗೆ ವಿಜಯೇಂದ್ರ ಆತ್ಮೀಯ ಸಂವಾದ ನಡೆಸಿದರು. ವಿದ್ಯಾರ್ಥಿಗಳು ಕೇಳಿದ ವಿವಿಧ ಪ್ರಶ್ನೆಗಳಿಗೆ ಸಂಯಮದಿಂದ ಉತ್ತರಿಸಿದ ಅವರು, ಅವರ ಕನಸುಗಳು, ಆಕಾಂಕ್ಷೆಗಳು ಹಾಗೂ ಭವಿಷ್ಯದ ಕುರಿತಾಗಿ ಚರ್ಚಿಸಿದರು.

ಯುವಜನತೆಯ ಪ್ರತಿಭೆ, ಕೌಶಲ್ಯ, ಉತ್ಸಾಹ ಹಾಗೂ ಸೃಜನಶೀಲತೆಯೇ ವಿಕಸಿತ ಭಾರತದ ನೈಜ ಶಕ್ತಿ. ಆದರೆ ಕಾಂಗ್ರೆಸ್ ಸರ್ಕಾರದ ನಿರ್ಲಕ್ಷ್ಯದಿಂದ ಶಾಲಾ–ಕಾಲೇಜುಗಳಲ್ಲಿ ಮೂಲಸೌಕರ್ಯ ಕೊರತೆ, ಶಿಕ್ಷಕರ ಹುದ್ದೆಗಳು ಖಾಲಿ, ನಿರುದ್ಯೋಗ ಹಾಗೂ ಪರೀಕ್ಷಾ ಅಕ್ರಮಗಳಿಂದ ಯುವಪೀಳಿಗೆ ಅನಿಶ್ಚಿತತೆ ಎದುರಿಸುತ್ತಿದೆ ಎಂದು ವಿಜಯೇಂದ್ರ ಹೇಳಿದರು.

**ರಸ್ತೆ ಗುಂಡಿ ಕಂಡು ಸ್ವತಃ ಮುಚ್ಚಿದ ವಿಜಯೇಂದ್ರ**

ವಿನೋಬನಗರದಲ್ಲಿ ಪಾದಯಾತ್ರೆ ಸಾಗುತ್ತಿದ್ದ ಸಂದರ್ಭದಲ್ಲಿ ರಸ್ತೆಯಲ್ಲಿ ಬಿದ್ದಿದ್ದ ಗುಂಡಿಯನ್ನು ಗಮನಿಸಿದ ವಿಜಯೇಂದ್ರ, ಸ್ವತಃ ಗುಂಡಿ ಮುಚ್ಚುವ ಮೂಲಕ ಸ್ಥಳೀಯ ಸಮಸ್ಯೆಯತ್ತ ಗಮನ ಸೆಳೆದರು. ಜನರ ನಡುವೆ ಸಾಗುವ ಪಾದಯಾತ್ರೆ ಕೇವಲ ರಾಜಕೀಯ ಕಾರ್ಯಕ್ರಮವಲ್ಲ, ಜನರ ನೈಜ ಸಮಸ್ಯೆಗಳನ್ನು ಅರಿಯುವ ಅಭಿಯಾನ ಎಂಬ ಸಂದೇಶವನ್ನು ಈ ಸಂದರ್ಭ ನೀಡಿತು.

**ತುಂಗಭದ್ರಾ ನದಿಗೆ ಪೂಜೆ**

ಕಂಪ್ಲಿ ವಿಧಾನಸಭಾ ಕ್ಷೇತ್ರಕ್ಕೆ ಪ್ರವೇಶಿಸುವ ಸಂದರ್ಭದಲ್ಲಿ ಈ ಭಾಗದ ಜೀವನಾಡಿಯಾಗಿರುವ ತುಂಗಭದ್ರಾ ನದಿಗೆ ವಿಜಯೇಂದ್ರ ಪೂಜೆ ಸಲ್ಲಿಸಿದರು. ನದಿ ನೀರು ರೈತರಿಗೆ ಹಾಗೂ ಜನರಿಗೆ ಸಮೃದ್ಧಿ ನೀಡಲಿ ಎಂಬ ಆಶಯದೊಂದಿಗೆ ಪೂಜೆ ನೆರವೇರಿಸಿದರು.

**ಬಳ್ಳಾರಿ ಜಿಲ್ಲೆಗೆ ಅದ್ದೂರಿ ಪ್ರವೇಶ; ಕಾರ್ಯಕರ್ತರಲ್ಲಿ ಹೊಸ ಹುಮ್ಮಸ್ಸು**

ತುಂಗಭದ್ರಾ ನದಿಗೆ ಪೂಜೆ ಸಲ್ಲಿಸಿದ ಬಳಿಕ ಬಳ್ಳಾರಿ ಚಲೋ ಪಾದಯಾತ್ರೆ ಬಳ್ಳಾರಿ ಜಿಲ್ಲೆಗೆ ಪ್ರವೇಶಿಸಿತು. ಜಿಲ್ಲೆಗೆ ಪಾದಯಾತ್ರೆ ಪ್ರವೇಶಿಸುತ್ತಿದ್ದಂತೆ ಬಿಜೆಪಿ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಅದ್ದೂರಿ ಸ್ವಾಗತ ನೀಡಿದರು. ಪೂರ್ಣಕುಂಭ ಸ್ವಾಗತ, ಘೋಷಣೆಗಳು ಹಾಗೂ ಜಯಘೋಷಗಳ ನಡುವೆ ಪಾದಯಾತ್ರೆಯನ್ನು ಬರಮಾಡಿಕೊಂಡ ಕಾರ್ಯಕರ್ತರಲ್ಲಿ ಹೊಸ ಹುಮ್ಮಸ್ಸು ಮತ್ತು ಉತ್ಸಾಹ ಕಂಡುಬಂತು. ಪಾದಯಾತ್ರೆ ಸಾಗಿದ ಮಾರ್ಗದುದ್ದಕ್ಕೂ ಸಾರ್ವಜನಿಕರು ವಿಜಯೇಂದ್ರ ಹಾಗೂ ಬಿಜೆಪಿ ನಾಯಕರಿಗೆ ಆತ್ಮೀಯ ಸ್ವಾಗತ ನೀಡಿದರು.

## ಹನಿ ನೀರಿಗೂ ಪರದಾಡಿದ ಕೌಠಾ ಗ್ರಾಮಸ್ಥರಿಂದ ಪಂಚಾಯತ್ ಕಚೇರಿ ಮುತ್ತಿಗೆ



**ಬೀದರ್, ಸೆ. 6:** ಔರಾದ್ ತಾಲೂಕಿನ ಕೌಠಾ (ಬಿ) ಗ್ರಾಮದಲ್ಲಿ ಮೂರು ತಿಂಗಳಿಂದ ಬೋರ್‌ವೆಲ್ ಮೋಟಾರ್ ಕೆಟ್ಟು ನಿಂತಿದ್ದು, ಕುಡಿಯುವ ನೀರಿಗಾಗಿ ಗ್ರಾಮಸ್ಥರು ತೀವ್ರ ಪರದಾಟ ನಡೆಸುತ್ತಿದ್ದಾರೆ. ದಿನಬಳಕೆಯ ನೀರಿಗೂ ಸಮಸ್ಯೆ ಎದುರಾಗಿದ್ದು, ಮಹಿಳೆಯರು ಹಾಗೂ ವೃದ್ಧರು ನಿತ್ಯ ಕಿಲೋಮೀಟರ್‌ಗಟ್ಟಲೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಸಮಸ್ಯೆ ಪರಿಹರಿಸುವಂತೆ ಆಗ್ರಹಿಸಿ ಪಂಚಾಯತ್ ಕಚೇಇಗೆ ಮಹಿಳೆಯರು ಮುತ್ತಿಗೆ ಹಾಕಿದ ಘಟನೆ ಜರುಗಿತು.

ಬೋರ್‌ವೆಲ್ ಮೋಟಾರ್ ಕೆಟ್ಟು ಮೂರು ತಿಂಗಳು ಕಳೆದರೂ ದುರಸ್ತಿ ಮಾಡದಿರುವುದಕ್ಕೆ ಗ್ರಾಮಸ್ಥರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಮಸ್ಯೆ ಬಗೆಹರಿಸುವಂತೆ ತಾಲೂಕು ಪಂಚಾಯಿತಿ ಇಓ, ಪಿಡಿಓ ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನೂರಾರು ಬಾರಿ ಮನವಿ ಮಾಡಿದ್ದರೂ ಯಾವುದೇ ಸ್ಪಂದನೆ ಸಿಕ್ಕಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಗ್ರಾಮಕ್ಕೆ ನೀರು ಸರಬರಾಜು ಮಾಡುವ ಜವಾಬ್ದಾರಿ ಹೊತ್ತಿರುವ ಮಹೇಶ್ ಹಾಗೂ ನರಸಪ್ಪ ಕರ್ತವ್ಯಕ್ಕೆ ಹಾಜರಾಗದೆ ಮೊಬೈಲ್ ಸ್ವಿಚ್‌ಆಫ್ ಮಾಡಿಕೊಳ್ಳುತ್ತಿದ್ದಾರೆ. ಸಮಸ್ಯೆ ಕುರಿತು ಪ್ರಶ್ನಿಸಿದ ಗ್ರಾಮಸ್ಥರಿಗೆ ಉಡಾಫೆಯಾಗಿ ಉತ್ತರಿಸುತ್ತಿದ್ದಾರೆ ಎಂದು ಆರೋಪಿಸಲಾಗಿದೆ.

ಕುಡಿಯುವ ನೀರಿನ ಸಮಸ್ಯೆಗೆ ತಕ್ಷಣ ಶಾಶ್ವತ ಪರಿಹಾರ ಕಲ್ಪಿಸುವಂತೆ ನಿಕಟಪೂರ್ವ ಗ್ರಾಮ ಪಂಚಾಯಿತಿ ಸದಸ್ಯೆ ರಾಜಮತಿ ಬಾಲಾದೆ ನೇತೃತ್ವದಲ್ಲಿ ಗ್ರಾಮಸ್ಥರು ಬೀದರ್ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಧಿಕೃತ ಮನವಿ ಸಲ್ಲಿಸಿದ್ದಾರೆ. ಅಧಿಕಾರಿಗಳು ಕೂಡಲೇ ಗ್ರಾಮಕ್ಕೆ ಭೇಟಿ ನೀಡಿ ಬೋರ್‌ವೆಲ್ ಮೋಟಾರ್ ದುರಸ್ತಿಗೊಳಿಸಬೇಕು. ಕರ್ತವ್ಯಲೋಪ ಎಸಗಿದ್ದಾರೆ ಎನ್ನಲಾದ ವಾಟರ್‌ಮ್ಯಾನ್‌ಗಳ ವಿರುದ್ಧ ಶಿಸ್ತುಕ್ರಮ ಕೈಗೊಂಡು, ಅಗತ್ಯವಿದ್ದರೆ ಹೊಸ ಸಿಬ್ಬಂದಿಯನ್ನು ನೇಮಿಸಬೇಕು ಸಮಸ್ಯೆ ಬಗೆಹರಿಸದಿದ್ದರೆ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಒಂದು ವೇಳೆ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸದಿದ್ದರೆ ಗ್ರಾಮಸ್ಥರೊಂದಿಗೆ ಬೀದರ್ ಜಿಲ್ಲಾ ಪಂಚಾಯಿತಿ ಆವರಣದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುವುದಾಗಿ ಮಾಜಿ ಪಂಚಾಯಿತಿ ಸದಸ್ಯೆ ರಾಜಮತಿ ಬಾಲಾದೆ ಎಚ್ಚರಿಕೆ ನೀಡಿದ್ದಾರೆ.

## ಬಳ್ಳಾರಿ ಚಲೋ ಪಾದಯಾತ್ರೆಯ ಸಮಾರೋಪ ಸಮಾರಂಭ ಅಚ್ಚುಕಟ್ಟಾಗಿ ನೆರವೇರಿಸಲು ಮಾಜಿ ಶಾಸಕ ಸೋಮಶೇಖರರೆಡ್ಡಿ ಸೂಚನೆ




**ಬಳ್ಳಾರಿ, ಸೆ.06:** ಇದೇ ತಿಂಗಳ 10 ರಂದು ನಗರದಲ್ಲಿ ನಡೆಯಲಿರುವ 'ಬಳ್ಳಾರಿ ಚಲೋ' ಪಾದಯಾತ್ರೆಯ ಸಮಾರೋಪ ಸಮಾರಂಭಕ್ಕೆ ಸಂಬಂಧಿಸಿದಂತೆ ಬಳ್ಳಾರಿ ನಗರದ ಎಸ್.ಪಿ. ವೃತ್ತದಲ್ಲಿರುವ ಭಾರತೀಯ ಜನತಾ ಪಕ್ಷದ ಜಿಲ್ಲಾ ಕಚೇರಿಯಲ್ಲಿ ನಗರದ ವಿವಿಧ ಮೋರ್ಚಾದ ಪದಾಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಮಾತನಾಡಿದ ಮಾಜಿ ಶಾಸಕ ಗಾಲಿ ಸೋಮಶೇಖರರೆಡ್ಡಿ, ಪಾದಯಾತ್ರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಿಕೆ, ಬಳ್ಳಾರಿಗೆ ಆಗಮಿಸುವ ನಾಯಕರಿಗೆ ಸ್ವಾಗತ ಕೋರುವುದು, ಕಾರ್ಯಕ್ರಮ ಅಚ್ಚುಕಟ್ಟಾಗಿ ನೆರವೇರಿಸಲು ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು. ಈ ಸಂದರ್ಭದಲ್ಲಿ ನಂಜನಗೂಡು ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಬಿ. ಹರ್ಷವರ್ಧನ್, ಬಿಜೆಪಿ ನಗರದ ಅಧ್ಯಕ್ಷ ಗುರಂ ವೆಂಕಟರಮಣ, ಪಾಲಿಕೆಯ ವಿರೋಧ ಪಕ್ಷದ ನಾಯಕ ಶ್ರೀನಿವಾಸ್ ಮೋತ್ಕರ್, ಪಾಲಿಕೆ ಸದಸ್ಯ ಗುಡಿಗಂಟಿ ಹನುಮಂತ, ಎಸ್.ಟಿ.ಮೋರ್ಚಾ ರಾಜ್ಯ ಕಾರ್ಯಕಾರಣಿ ಸದಸ್ಯ ರಾಮಕೃಷ್ಣ, ಮಾಜಿ ಸಫಾಯಿ ಕರ್ಮಚಾರಿ ನಿಗಮದ ಅಧ್ಯಕ್ಷ ಎಚ್. ಹನುಮಂತಪ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಬಳ್ಳಾರಿಯಲ್ಲಿ ಕೆಜಿಬಿ ನೌಕರರ ಸಂಘದ ವಾರ್ಷಿಕ ಮಹಾಸಭೆ ಸಂಪನ್ನ

**ಬಳ್ಳಾರಿ ಸೆ 06.**ಕರ್ನಾಟಕ ಗ್ರಾಮೀಣ ಬ್ಯಾಂಕ್ ನೌಕರರ ಸಂಘದ 2025–26ನೇ ಸಾಲಿನ ವಾರ್ಷಿಕ ಮಹಾಸಭೆಯು ಭಾನುವಾರ ಸಂಘದ ಸಮುದಾಯ ಸಭಾಂಗಣದಲ್ಲಿ ಮುಖ್ಯ ಕಾರ್ಯನಿರ್ವಾಹಕ ಟಿ ನಾಗರಾಜ ಅವರ ಸ್ವಾಗತದೊಂದಿಗೆ ಪ್ರಾರಂಭ ವಾಯಿತು,

ಮಹಾಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಶ್ರೀನಿವಾಸ್ ಮೂರ್ತಿ ಕೆ. ವಹಿಸಿದ್ದರು. ಹಾಗೆಯೇ ಸಂಘದ ಉಪಾಧ್ಯಕ್ಷ ಎಸ್ ಶರಣೇಶ್ ವೇದಿಕೆಯ ಉಪಸ್ಥಿತರಿದ್ದರು.

ಆರಂಭದಲ್ಲಿ ಮುಖ ಕಾರ್ಯ ನಿರ್ವಾಹಕ ಟಿ ನಾಗರಾಜ ರವರು ಸಂಘದ ಹಿಂದಿನ ಮಹಾಸಭೆಯ ಗೊತ್ತುವಳಿಗಳನ್ನು ಹಾಗೂ 2025–26 ನೇ ಸಾಲಿನ ವಾರ್ಷಿಕ ವರದಿಯನ್ನು ಹಾಗೂ 2025– 26ನೇ ಸಾಲಿನ ಲೆಕ್ಕ ಪತ್ರಗಳ ವರದಿಯನ್ನು ಮಹಾಸಭೆಯ ಅಂಗೀಕಾರಕ್ಕಾಗಿ ಮಂಡಿಸಿದ ನಂತರ




ಮಹಾಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ನಂತರ ಮಹಾಸಭೆಯು 2026–27ನೇ ಸಾಲಿನ ಮುಂಗಡ ಆಯವ್ಯಯ ಪತ್ರಕ್ಕೆ ಹಾಗೂ 2025–26ನೇ ಸಾಲಿನ ಲಾಭ ವಿಂಗಡಣೆಗೆ ಮಹಾಸಭೆಯು ಸರ್ವಾನಮತದಿಂದ ಅಂಗೀಕರಿಸಿತು.

ಪಿಯುಸಿ. ಹಾಗೂ ಎಸ್. ಎಸ್.ಎಲ್.ಸಿಯಲ್ಲಿನ ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಪ್ರಶಸ್ತಿ ನೀಡಿ ಗೌರವಿಸಿ ಸನ್ಮಾನಿಸಲಾಯಿತು.

ಸಂಘದ ಸದಸ್ಯರಾದ ಸತೀಶ್ ಅವರ ಮಕ್ಕಳಾದ ಕುವಾರಿ ನಯೋನಿಕ ಮಂಗಳಂ ಹಾಗೂ ಕುಮಾರಿ ನಕ್ಷತ್ರ ವರ್ಣ ಮಂಗಳಂ ಇವರು ಅಂತರಾಷ್ಟ್ರೀಯ ಮಟ್ಟದ ಕರಾಟೆ ಚಾಂಪಿಯನ್ ಸಿಪ್ ನಲ್ಲಿ ಬಂಗಾರದ ಹಾಗೂ ಬೆಳ್ಳಿ ಪದಕ ಪಡೆದಿದ್ದಕ್ಕಾಗಿ ಸದಸ್ಯರ ಚಪ್ಪಾಳೆಗಳ ಮಧ್ಯ ಸನ್ಮಾನಿಸಿ ಗೌರವಿಸಲಾಯಿತು.

ಅಧ್ಯಕ್ಷರಾದ ಶ್ರೀ ಶ್ರೀನಿವಾಸ್ ಮೂರ್ತಿ ಕೆ ಯವರು ಮಾತನಾಡುತ್ತಾ ಸಂಘದ 36 ವರ್ಷಗಳ ಬೆಳವಣಗೆಗೆ ಯಶಸ್ವಿಗೆ ಮತ್ತು ಸಮುದಾಯ ಭವನದ ನಿರ್ಮಾಣಕ್ಕೆ ಸಹಕರಿಸಿದ ಎಲ್ಲಾ ನಿರ್ದೇಶಕ ಮಂಡಳಿಗಳಿಗೆ ಸದಸ್ಯಬಾಂಧವರಿಗೆ ಅಧ್ಯಕ್ಷರು ಧನ್ಯವಾದಗಳುನ್ನುಸಲ್ಲಿಸುತ್ತಾ ಮುಂದಿನ ದಿನಗಳಲ್ಲಿಯೂ ಇದೇ ರೀತಿ ಸಹಕಾರವನ್ನು ಕೋರಿದರು.

ಉಪಾಧ್ಯಕ್ಷ ಎಸ್ ಶರಣೇಶ್ ವಂದನಾರ್ಪ ಣೆಯೊಂದಿಗೆ 2025–26ನೇ ಸಾಲಿನ ಮಹಾಸಭೆಯು ಯಶಸ್ವಿಯಾಗಿ ಮುಕ್ತಾಯಗೊಂಡಿತು.

# ಜನರ ಸಮಸ್ಯೆಗಳಿಗೆ ತ್ವರಿತ ಪರಿಹಾರ ಕಲ್ಪಿಸುವುದೇ ಪ್ರಜಾಸೇವೆ: ಡಾ.ಅಜಯಸಿಂಗ್

**ರಾಯಚೂರು, ಸೆ. 6:** ಸಾರ್ವಜನಿಕರ ಕುಂದು ಕೊರತೆಗಳನ್ನು ಸ್ಥಳದಲ್ಲೇ ಆಲಿಸಿ, ತ್ವರಿತವಾಗಿ ಪರಿಹಾರ ಕಲ್ಪಿಸುವುದುದೇ ಪ್ರಜಾಸೇವೆಯ ಮುಖ್ಯ ಉದ್ದೇಶ. ಇಲ್ಲಿ ಸಮಸ್ಯೆಗಳನ್ನು ಹೊತ್ತು ತರುವವರು ಸ್ಥಳದಲ್ಲಿದ್ದ ಅಧಿಕಾರಿಗಳಿಂದ ಕೂಡಲೇ ಪರಿಹಾರ ಒದಗಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿಸ ಚಿವ ಡಾ.ಅಜಯಸಿಂಗ್ ಹೇಳಿದರು.

ಜಿಲ್ಲೆಯ ಮಾನ್ವಿ ಪಟ್ಟಣದ ಬಾಷುಮಿಯಾ ಸಾಹುಕಾರ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಆವರಣದಲ್ಲಿ ಜಿಲ್ಲಾಡಳಿತ ಆಯೋಜಿಸಿದ ಪ್ರಜಾಸೇವಾ ಆಂದೋಲನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸರ್ಕಾರದ ಮಹತ್ವಾಕಾಂಕ್ಷೆಯ ಪ್ರಜಾಸೇವಾ ಆಂದೋಲನ ಕಾರ್ಯಕ್ರಮ ಕೇವಲ ರಾಜಧಾನಿ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗದೆ, ರಾಜ್ಯದ ಪ್ರತಿಯೊಂದು ಜಿಲ್ಲೆ, ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಆಡಳಿತ ವ್ಯವಸ್ಥೆಯನ್ನು ಜನರಿಗೆ ಮತ್ತಷ್ಟು ಹತ್ತಿರವಾಗಿಸುವುದಾಗಿದೆ ಎಂದರು.

ಆಡಳಿತ ವ್ಯವಸ್ಥೆಯು ಜನಸಾಮಾನ್ಯರ ಮನೆ ಬಾಗಿಲಿಗೆ ತೆರಳಿ, ಅವರ ಕಷ್ಟ-ಸುಖಗಳಲ್ಲಿ ಭಾಗಿದಾರರಾಗಬೇಕು ಮತ್ತು ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂಬುದು ಸರ್ಕಾರದ ಮುಖ್ಯ ಗುರಿಯಾಗಿದೆ. ಕಲ್ಯಾಣ ಕರ್ನಾಟಕದ ಹಿಂದುಳಿದ ಪ್ರದೇಶ ಎನ್ನುವ ಹಣೆಪಟ್ಟಿ ಕಳಚಲು ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳನ್ನು ಮಹತ್ವಾಕಾಂಕ್ಷೆಯ ಜಿಲ್ಲೆಗಳನ್ನಾಗಿ ಘೋಷಿಸಲಾಗಿದ್ದು, ಈ ನಿಟ್ಟಿನಲ್ಲಿ ಮಾನ್ವಿ ತಾಲ್ಲೂಕಿನಿಂದ ಈ ಅಭಿಯಾನ ಆರಂಭಿಸಲಾಗಿದೆ. ಈ ಕಾರ್ಯಕ್ರಮ ಒಂದು ದಿನಕ್ಕೆ ಸೀಮಿತವಾಗಿಲ್ಲ. ಪ್ರತಿ ಶನಿವಾರವೂ ನಿರಂತರವಾಗಿ ಜರುಗಲಿದೆ. ಜಿಲ್ಲಾಧಿಕಾರಿ, ಶಾಸಕರು ಮತ್ತು ಸಂಬಂಧಿತ ಅಧಿಕಾರಿಗಳು ಇದರಲ್ಲಿ ಸಕ್ರಿಯವಾಗಿ ಭಾಗವಹಿಸಲಿದ್ದಾರೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವನಾಗಿ ನಾನು ಪ್ರತಿ ತಿಂಗಳ ಮೊದಲನೇ ಮತ್ತು ಮೂರನೇ ಶನಿವಾರ ಗಳಂದು ನಿರ್ದಿಷ್ಟ ತಾಲೂಕುಗಳಲ್ಲಿ ಖುದ್ದಾಗಿ ಹಾಜರಿದ್ದು, ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಲಿದ್ದೇನೆ. ಉಳಿದ ಶನಿವಾರಗಳಲ್ಲಿ ಶಾಸಕರು ಹಾಗೂ ತಾಲ್ಲೂಕು ಮಟ್ಟದ ಆಡಳಿತಾಧಿಕಾರಿಗಳು ಈ ಕಾರ್ಯಕ್ರಮ ಮುನ್ನಡೆಸಲಿದ್ದಾರೆ ಎಂದರು.

ವೃದ್ಧಾಪ್ಯ ವೇತನ, ಮನಸ್ವಿನಿ ಸೇರಿ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಮಂಜೂರಾತಿ ಪ್ರಮಾಣಪತ್ರಗಳನ್ನು ವಿತರಿಸಲಾಯಿತು.



ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಆವರಣದಲ್ಲಿ ಆಯೋಜಿಸಿದ ಪ್ರಜಾ ಸೇವೆ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಅಜಯಸಿಂಗ್ ಅವರು ಉದ್ಘಾಟಿಸಿ ಮಾತನಾಡಿದರು. ಶಾಸಕ ಹಂಪಯ್ಯ ನಾಯಕ, ಜಿಲ್ಲಾಧಿಕಾರಿ ಪೂವಿತಾ ಎಸ್ ಮುಂತಾದವರಿದ್ದರು.

## ಬರ: ಸಿಎಂ ಡಿ.ಕೆ.ಶಿವಕುಮಾರ್‌ಗೆ ಮನವಿ

**ಜಿಲ್ಲೆಯ ಐದು ತಾಲ್ಲೂಕುಗಳು ಬರಪೀಡಿತ ಎಂದು ಈಗಾಗಲೇ ಘೋಷಣೆಯಾಗಿದ್ದು, ಉಳಿದ ಸಿಂಧನೂರು, ಮಾನ್ವಿ ಹಾಗೂ ಸಿರವಾರ ತಾಲ್ಲೂಕುಗಳನ್ನೂ ಬರಪೀಡಿತ ಎಂದು ಘೋಷಿಸುವಂತೆ ಮುಖ್ಯಮಂತ್ರಿಗೆ ಮನವಿ ಮಾಡಲಾಗಿದೆ. ವಿಧಾನ ಪರಿಷತ್ ಸದಸ್ಯ ಎನ್.ಎಸ್.ಬೋಸರಾಜು ಮಾತನಾಡಿ, ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ನಂತರ ರಾಜ್ಯದಲ್ಲಿ ಆಡಳಿತ ವಿಭಾಗದಲ್ಲಿ ಬದಲಾವಣೆ ತರಬೇಕು. ಸರ್ಕಾರದ ಯೋಜನೆಗಳು, ಸೌಲಭ್ಯಗಳನ್ನು ಜನರಿಗೆ ನೇರವಾಗಿ ತಲುಪಿಸಬೇಕು ಎಂಬ ಉದ್ದೇಶದಿಂದ ಪ್ರಜಾಸೇವೆ ಆಂದೋಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ತುಂಗಭದ್ರಾ ಎಡದಂಡೆ ನಾಲೆಯ ಕೊನೆ ಭಾಗದ ರೈತರಿಗೆ ನೀರು ಹರಿಸಲು ಜಿಲ್ಲಾಧಿಕಾರಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಅದಕ್ಕಾಗಿ ಇತ್ತೀಚೆಗೆ ಪ್ರಾದೇಶಿಕ ಆಯುಕ್ತರ ನೇತೃತ್ವದಲ್ಲಿ ರೈತರೊಂದಿಗೆ ಸಭೆ ಮಾಡಿ, ರೈತರ ಬೆಂಬಲಕ್ಕೆ ನಿಂತಿದ್ದಾರೆ. ಅವರಿಗೆ ರೈತರು ಸಹಕರಿಸಬೇಕು ಎಂದು ಡಾ.ಅಜಯ್ ಸಿಂಗ್ ಹೇಳಿದರು.**

# ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಭಾಗಿಯಾದ, ಶಿಕ್ಷಕರಿಗೆ ಬಿಗ್ ರಿಲೀಫ್: ಅಮಾನತು ಆದೇಶಕ್ಕೆ ಕೆಎಟಿ ತಡೆ

**ಕಲಬುರಗಿ, ಸೆ. 6:** ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಭಾಗಿಯಾಗಿದ್ದಾರೆಂಬ ಆರೋಪದ ಹಿನ್ನೆಲೆಯಲ್ಲಿ ಅಮಾನತುಗೊಂಡಿದ್ದ ಇಬ್ಬರು ಸರ್ಕಾರಿ ಶಾಲಾ ಶಿಕ್ಷಕರಿಗೆ ಇದೀಗ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ (ಕೆಎಟಿ)ಯ ಕಲಬುರಗಿ ಪೀಠದಿಂದ ತಾತ್ಕಾಲಿಕ ರಿಲೀಫ್ ಸಿಕ್ಕಿದೆ. ಶಿಕ್ಷಕರ ಅಮಾನತು ಆದೇಶಕ್ಕೆ ಕೆಎಟಿ ತಡೆಯಾಜ್ಞೆ ನೀಡಿದೆ.



ಯಾದಗಿರಿ ಜಿಲ್ಲೆಯ ಹುಣಸಗಿ ತಾಲೂಕಿನ ಸರ್ಕಾರಿ ಶಾಲೆಯಲ್ಲಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಗುರುರಾಜ್ ಜೋಷಿ ಹಾಗೂ ಅಣ್ಣಾಸಾಹೇಬ್ ದೇಶಮುಖ ಅವರು ಕಳೆದ ವರ್ಷದ ನವೆಂಬರ್‌ನಲ್ಲಿ ವಿಜಯಪುರ ಜಿಲ್ಲೆಯ ತಾಳಿಕೋಟೆ ಪಟ್ಟಣದಲ್ಲಿ ನಡೆದ ಆರ್‌ಎಸ್‌ಎಸ್ ಪಥ ಸಂಚಲನದಲ್ಲಿ ಭಾಗವಹಿಸಿದ್ದರು ಎನ್ನಲಾಗಿದೆ. ಸರ್ಕಾರಿ ನೌಕರರಾಗಿದ್ದರೂ ಆರ್‌ಎಸ್‌ಎಸ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ ಎಂದು ಆರೋಪಿಸಿ ಅಂಬೇಡ್ಕರ್ ಸ್ವಾಭಿಮಾನಿ ಸೇನೆಯ ಮುಖಂಡರು ಅಂದಿನ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ದೂರು ನೀಡಿದ್ದರು. ಈ ದೂರಿನ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಿದ ಪ್ರಿಯಾಂಕ್ ಖರ್ಗೆ, ಅಗತ್ಯ ಕ್ರಮ ಕೈಗೊಳ್ಳುವಂತೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆದಿದ್ದರು.

ನಂತರ ಶಾಲಾ ಶಿಕ್ಷಣ ಇಲಾಖೆ ಈ ಕುರಿತು ತನಿಖೆ ನಡೆಸಿತ್ತು. ತನಿಖೆಯ ಬಳಿಕ ಯಾದಗಿರಿ ಶಾಲಾ ಶಿಕ್ಷಣ ಇಲಾಖೆಯ ಡಿಡಿಪಿಐ ಇಬ್ಬರು ಶಿಕ್ಷಕರನ್ನು ಸೇವೆಯಿಂದ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದರು.

ತಮ್ಮ ವಿರುದ್ಧದ ಅಮಾನತು ಕ್ರಮವನ್ನು ಪ್ರಶ್ನಿಸಿ ಗುರುರಾಜ್ ಜೋಷಿ ಹಾಗೂ ಅಣ್ಣಾಸಾಹೇಬ್ ದೇಶಮುಖ ಅವರು ಕೆಎಟಿ ಮೊರೆ ಹೋಗಿದ್ದರು. ಅಮಾನತು ಆದೇಶ ರದ್ದುಪಡಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಕಲಬುರಗಿ ಪೀಠ, ಸದ್ಯಕ್ಕೆ ಅಮಾನತು ಆದೇಶಕ್ಕೆ ತಡೆಯಾಜ್ಞೆ ನೀಡಿದೆ. ಇದರಿಂದ ಆರ್‌ಎಸ್‌ಎಸ್ ಪಥ ಸಂಚಲನದಲ್ಲಿ ಭಾಗಿಯಾಗಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಅಮಾನತುಗೊಂಡಿದ್ದ ಇಬ್ಬರು ಶಿಕ್ಷಕರಿಗೆ ನ್ಯಾಯಾಂಗ ಪ್ರಕ್ರಿಯೆಯಲ್ಲಿ ಮಧ್ಯಂತರ ರಿಲೀಫ್ ದೊರೆತಂತಾಗಿದೆ.


ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿಯ ಅಧ್ಯಕ್ಷರಾಗಿ ಐತಿಹಾಸಿಕ ಏಳನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾದ ನಂತರ ಶಾಸಕ ಜಿ.ಟಿ. ದೇವೇಗೌಡರಿಗೆ ಭಾನುವಾರ ಮೈಸೂರಿನಲ್ಲಿ ಭವ್ಯ ಸ್ವಾಗತ ದೊರೆಯಿತು.

# ಕಲ್ಯಾಣ ಕ್ರಾಂತಿಯಲ್ಲಿ ಮಾಚಿದೇವರ ಕೊಡುಗೆ ಅಪಾರ: ಬಸವಪ್ರಭು ಸ್ವಾಮೀಜಿ



**ಬಸವಕಲ್ಯಾಣ, ಸೆ. 6:** ವಚನ ಸಾಹಿತ್ಯ ಸಂರಕ್ಷಣೆಯಲ್ಲಿ ಮತ್ತು ಕಲ್ಯಾಣ ಕ್ರಾಂತಿಯಲ್ಲಿ ಮಡಿವಾಳ ಮಾಚಿದೇವರ ಕೊಡುಗೆ ಅಪಾರ ಎಂದು ಗುಣತೀರ್ಥವಾಡಿಯ ಕಲ್ಯಾಣ ಮಹಾಮನೆಯ ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು.

ನಗರದ ಮಾಚಿದೇವರ ದೇವಸ್ಥಾನ(ಹೊಂಡ) ಪರಿಸರದಲ್ಲಿ ಮಡಿವಾಳ ಸಮಾಜದಿಂದ ಮಡಿವಾಳ ಆಯೋಜಿಸಿದ್ದ ವೀರಗಣಾಚಾರಿ ಮಡಿವಾಳ ಮಾಚಿದೇವರ ಸ್ಮರಣೋತ್ಸವ ಮತ್ತು ಮಾಚಿದೇವರ ತತ್ವ ದರ್ಶನ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ, ವೀರಗಣಾಚಾರಿ ಮಡಿವಾಳ ಮಾಚಿದೇವರು ಸತ್ಯಶುದ್ಧ ಕಾಯಕದ ಜತೆಗೆ ಮನದ ಮೈಲಿಗೆಯನ್ನು ತೊಳೆದ ಮಹಾ ಶರಣರು ಹುಟ್ಟಿನಿಂದಲೂ ಭಕ್ತಿ ಮಾರ್ಗದಲ್ಲಿದ್ದ ಮಾಚಿದೇವರು ಬಸವಣ್ಣನವರ ಮೇಲೆ ಅಗಾಧ ಪರಿಣಾಮ ಬೀರಿದ ಶ್ರೇಷ್ಠ ಶರಣರು. ಅವರ ಚರಿತ್ರೆ ಮತ್ತು ಚಾರಿತ್ರಿಕ ಹಿನ್ನೆಲೆ ಅನೇಕ ಜಾನಪದ ಪದ್ಯ, ಪುರಾಣ, ಕಾವ್ಯಗಳಲ್ಲಿ ಪ್ರಸ್ತಾಪವಾಗಿದೆ ಎಂದರು.

ಸಾನ್ನಿಧ್ಯ ವಹಿಸಿದ್ದ ಅನುಭವ ಮಂಟಪದ ಸಂಚಾಲಕ ಶ್ರೀ ಶಿವಾನಂದ ದೇವರು ಮಾತನಾಡಿ, ದೇವರಿಗೆ ಸವಾಲು ಹಾಕಿದ ನಿರ್ಭಯ ಗಣಾಚಾರಿ ಶರಣರು ಮಡಿವಾಳ ಮಾಚಿದೇವರು. 12ನೇ ಶತಮಾನದಲ್ಲಿ ಶರಣರ ವಚನ ಸಾಹಿತ್ಯ ರಕ್ಷಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಅವರ ತತ್ವ-ಸಂದೇಶಗಳನ್ನು ಅರಿತು ಜೀವನದಲ್ಲಿ ಅಳವಡಿಸಿಕೊಳ್ಳಲು ಎಲ್ಲರೂ ಪ್ರಯತ್ನಿಸಬೇಕು ಎಂದರು.

ಸಾನ್ನಿಧ್ಯ ವಹಿಸಿದ್ದ ಕಲಬುರಗಿಯ ಪೂಜ್ಯ ಪ್ರಭುಶ್ರೀತಾಯಿ, ನೇತೃತ್ವ ವಹಿಸಿದ್ದ ಗುರುಬಸವ ಯೋಗ ಕೇಂದ್ರದ ಪೂಜ್ಯ ಗಾಯತ್ರಿತಾಯಿ ಆಶೀರ್ವಚನ ನೀಡಿದರು. ಮಡಿವಾಳ ಸಮಾಜದ ಗೌರವ ಅಧ್ಯಕ್ಷ ದಿಗಂಬರ ಮಡಿವಾಳ ಮಾತನಾಡಿದರು. ಸಮಾಜದ ತಾಲೂಕು ಅಧ್ಯಕ್ಷ ಗಣಪತಿ ಸಸ್ತಾಪುರೆ ಅಧ್ಯಕ್ಷತೆ ವಹಿಸಿದ್ದರು.

ಶಾಸಕ ಶರಣು ಸಲಗರ, ಮಾಜಿ ಎಂಎಲ್‌ಸಿ ವಿಜಯಸಿಂಗ್, ಬೆಂಗಳೂರಿನ ಮಾಚಿದೇವ ಸಮಿತಿ ಕಾರ್ಯದರ್ಶಿ ಸಾಯಬಣ್ಣ ಮಡಿವಾಳ, ಭಾಲ್ಕಿಯ ಶಿವಕುಮಾರ ಮಡಿವಾಳ, ಚಿಟಗುಪ್ಪದ ಬಸವರಾಜ ಮಡಿವಾಳ, ಹುಮನಾ ಬಾದ್‌ನ ದತ್ತು ಕೊಳ್ಳಾರೆ, ಬೀದರ್‌ನ ಮಲ್ಲಿಕಾರ್ಜುನ ಮಡಿವಾಳ, ವೀರಶೆಟ್ಟಿ ಮಡಿವಾಳ, ಸಮಾಜದ ತಾಲೂಕು ಉಪಾಧ್ಯಕ್ಷ ವಿಜಯಕುಮಾರ ಮಡಿವಾಳ, ಕಾರ್ಯದರ್ಶಿ ಆಕಾಶ ಮಡಿವಾಳ, ರವಿ ಮಡಿವಾಳ, ಜಗನ್ನಾಥ ಮಡಿವಾಳ, ದಶರಥ ಮಡಿವಾಳ, ವಿಶ್ವನಾಥ ಮಡಿವಾಳ, ಭಗವನ ಮಡಿವಾಳ, ಅವಿನಾಶ ಮಡಿವಾಳ ಮುಂತಾದವರು ಪಾಲ್ಗೊಂಡಿದ್ದರು.

## ಬೀದರ್ ಹೊರವಲಯದ ಜನವಾಡದಲ್ಲಿ ಪ್ರಜಾ ಸೇವೆ

# ಜನವಾಡದಲ್ಲಿ ನೀರು ಪೂರೈಕೆ, ವಿದ್ಯುತ್ ತಂತಿ ತೆರವಿಗೆ ಜನರ ಆಗ್ರಹ

**ಬೀದರ, ಸೆ. 6:** ಕೂಡಲೇ ಜೆಜೆಎಂ ಕಾಮಗಾರಿ ಪೂರ್ಣಗೊಳಿಸಿ ಶುದ್ಧ ನೀರು ಕೊಡಿ, ಮನೆ ಮೇಲೆ ಹಾದು ಹೋಗಿರುವ ವಿದ್ಯುತ್ ತಂತಿ ತೆಗೆಸಿ... ಬೀದರ್ ತಾಲ್ಲೂಕಿನ ಜನವಾಡದ ಪಾಂಡುರಂಗ ಮಂದಿರದಲ್ಲಿ ಶನಿವಾರ ಆಯೋಜಿಸಿದ್ದ ಪ್ರಜಾಸೇವಾ ಆಂದೋಲನ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಆಡಳಿತದ ಮುಂದಿಟ್ಟ ಬೇಡಿಕೆಗಳು ಇವು.

ಜನವಾಡದ ಗಣಪತಿ ತಾಕತದಾರ್ ಅವರು ಎರಡೂವರೆ ವರ್ಷ ಕಳೆದರೂ ಗ್ರಾಮದಲ್ಲಿ ಮನೆ ಮನೆಗೆ ಶುದ್ಧ ನೀರು ಒದಗಿಸುವ ಜಲ ಜೀವನ ಮಿಷನ್ ಯೋಜನೆ ಕಾಮಗಾರಿ ಪೂರ್ಣಗೊಂಡಿಲ್ಲ ಎಂದು ದೂರಿದರೆ, ಮರಕಲ್‌ನ ಭೀಮರಾವ್ ಬಿರಾದಾರ ಅವರು ಗ್ರಾಮದ ಮಲ್ಲಿಕಾರ್ಜುನ ಬಿರಾದಾರ ಮನೆ ಮೇಲೆ ಹಾದು ಹೋದ ವಿದ್ಯುತ್ ತಂತಿ ಅಪಾಯಕ್ಕೆ ಆಹ್ವಾನ ನೀಡುತ್ತಿದೆ. ಜೆಸ್ಕಾಂ ಸಿಬ್ಬಂದಿಗೆ ಅನೇಕ ಬಾರಿ ಮನವಿ ಮಾಡಿದರೂ ತೆಗೆಯುತ್ತಿಲ್ಲ ಎಂದು ದೂರಿದರು.

ಇದಕ್ಕೆ ಸ್ಪಂದಿಸಿದ ಶಾಸಕ ರಹೀಂಖಾನ್ ಅವರು ಜಲ ಜೀವನ ಮಿಷನ್ ಹಾಗೂ ಜೆಸ್ಕಾಂ ಅಧಿಕಾರಿಗೆ ವಿವರಣೆ ಕೇಳಿದರು.ನೀರಿನ ಟ್ಯಾಂಕ್ ವರೆಗಿನ ಪೈಪ್‌ಲೈನ್ ಅಳವಡಿಕೆ ಕಾರ್ಯದ ಕಾರಣ ವಿಳಂಬವಾಗಿದೆ. 15 ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿ, ಗ್ರಾಮಕ್ಕೆ ಶುದ್ಧ ನೀರು ಕೊಡಲಾಗುವುದು ಎಂದು ಜೆಜೆಎಂ ಅಧಿಕಾರಿ ತಿಳಿಸಿದರು.

ಕೂಡಲೇ ಮರಕಲ್ ಗ್ರಾಮಕ್ಕೆ ತೆರಳಿ ಮನೆ ಮೇಲಿನ ವಿದ್ಯುತ್ ತಂತಿ ತೆರವುಗೊಳಿಸಲಾಗುವುದು ಎಂದು ಜೆಸ್ಕಾಂ ಅಧಿಕಾರಿ ಹೇಳಿದರು.

ಜನವಾಡದ ವಿಠ್ಠಲ ಸಿದ್ದಪ್ಪ, ಗುಂಡಮ್ಮ, ಮನೋಹರ ಮಾಸಾಶನ ಬಂದ್ ಆಗಿದೆ ಎಂದು ದೂರಿದರೆ, ವೃದ್ಧೆ ಸೋನಾಬಾಯಿ ಪಡಿತರ ಚೀಟಿ ಕಡಿತಗೊಂಡಿದೆ ಎಂದು ಗೋಳಿಟ್ಟರು. ವೃದ್ಧೆಯ ಪಡಿತರ ಚೀಟಿ ಪುನಃರಾರಂಭಕ್ಕೆ ತಕ್ಷಣ ಕ್ರಮ ಕೈಗೊಳ್ಳಬೇಕು' ಎಂದು ಶಾಸಕರು ಸಂಬಂಧಿಸಿದ ಅಧಿಕಾರಿಗೆ ಸೂಚಿಸಿ ದರು.

ಆದಾಯ ಮಿತಿ ಕಾರಣಕ್ಕೆ ಕಡಿತಗೊಂಡವರ ಮಾಸಾಶನ ಸಮಸ್ಯೆ ಶೀಘ್ರದಲ್ಲಿಯೇ ಬಗೆಹರಿಯಲಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಮಾಹಿತಿ ನೀಡಿದರು.

ಪ್ರಯಾಣಿಕರ ಅನುಕೂಲಕ್ಕಾಗಿ ಹಾಳಾದ ಅಲಿಯಂಬರನಿಂದ ಸಿದ್ದಾಪುರ (ವಾಯಾ ಯರನಳ್ಳಿ) ರಸ್ತೆ ನಿರ್ಮಿಸಬೇಕು ಎಂದು ಯರನಳ್ಳಿಯ ಕಲ್ಲಪ್ಪ ಹಾಸಗೊಂಡ, ವಿದ್ಯುತ್ ಪದೇ ಪದೇ ಕೈಕೊಡುತ್ತಿರುವ ಕಾರಣ ಜನರಿಗೆ ಸಮಸ್ಯೆಯಾಗುತ್ತಿದ್ದು, ನಿರಂತರ ವಿದ್ಯುತ್ ಪೂರೈಸಬೇಕು ಎಂದು ಸಂಗಮೇಶ ಬಾವಿದೊಡ್ಡಿ ಬೇಡಿಕೆ ಇಟ್ಟರು. ಅಮರ ಪಾಟೀಲ ಶ್ರೀಮಂಡಲ, ರೆಹಾನಾ ಬೇಗಂ ಸೇರಿ ಇನ್ನೂ ಅನೇಕರು ವಿವಿಧ ಸಮಸ್ಯೆಗಳನ್ನು ಆಡಳಿತದ ಮುಂದಿಟ್ಟರು. ಕಾರ್ಯಕ್ರಮದಲ್ಲಿ 40 ಇಲಾಖೆಗಳ ಮಳಿಗೆಗಳು ಇದ್ದವು. 400 ಅರ್ಜಿಗಳು ಸಲ್ಲಿಕೆಯಾದವು. ನಿರ್ಲಕ್ಷ್ಯ ವಹಿಸಿದರೆ ಕ್ರಮ: ಆಡಳಿತವನ್ನೇ ಜನರ ಮನೆ ಬಾಗಿಲಿಗೆ ಒಯ್ಯಲು ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮ ನಡೆಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ಸಾಧ್ಯವಾದ ಅರ್ಜಿಗಳನ್ನು ಸ್ಥಳದಲ್ಲೇ ಬಗೆಹರಿಸ ಬೇಕು. ಉಳಿದ ಅರ್ಜಿಗಳನ್ನು 15 ದಿನಗಳೊಳಗೆ ವಿಲೇವಾರಿ ಮಾಡಬೇಕು. ನಿರ್ಲಕ್ಷ್ಯ ತೋರಿದ್ದಲ್ಲಿ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ರಹೀಂ ಖಾನ್ ಎಚ್ಚರಿಕೆ ನೀಡಿದರು.

ಸಂಪರ್ಕ ರಸ್ತೆ, ಹೊಲಗಳಿಗೆ ರಸ್ತೆ, ಚರಂಡಿ, ಹೊಲಗಳ ಸರ್ವೇ ಹಾಗೂ ಇತರ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸ ಬೇಕು ಎಂದು ಶಿಲ್ಪಾ ಶರ್ಮಾ ಸೂಚನೆ ನೀಡಿದರು.

ಬರಗಾಲ ಇರುವ ಕಾರಣ ಜಿಲ್ಲೆಯಲ್ಲಿ ವಿಬಿ ಜಿ-ರಾಮ್‌ಜಿ ಯೋಜನೆಯಡಿ ಕಾರ್ಮಿಕರಿಗೆ ಕೆಲಸ ಒದಗಿಸಲಾಗುತ್ತಿದ್ದು, ಶುಕ್ರವಾರ ಒಂದೇ ದಿನ ಜಿಲ್ಲೆಯಲ್ಲಿ 38 ಸಾವಿರ ಮಂದಿಗೆ ಕೆಲಸ ಕೊಡಲಾಗಿದೆ. ಕೂಲಿ ಕಾರ್ಮಿಕರು ವಲಸೆ ಹೋಗಬಾರದು ಎಂದು ಜಿ.ಪಂ ಸಿಇಒ ಗಿತ್ತೆ ಮಾಧವ ವಿಠಲರಾವ್ ಹೇಳಿದರು.



ಜನವಾಡದಲ್ಲಿ ಜಿಲ್ಲಾಡಳಿತ ಆಯೋಝಿಸಿದ ಪ್ರಜ ಸೇವೆ ಅಹವಾಲು ಸ್ವೀಕಾರ ಸಮಾರಂಭದಲ್ಲಿ ಶಾಶಕ ರಹೀಂ ಖಾನ್ ಅವರು ಅರ್ಜಿಗಳನ್ನು ಸ್ವೀಕರಿಸಿದರು. ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಮತ್ತಿತರ ಅಧಿಕಾರಿಗಳಿದ್ದರು.

# ಶಾಂತಿ, ಸಹಬಾಳ್ವೆ, ಜ್ಞಾನದ ಹಾದಿಯಲ್ಲಿ ನಡೆಯುವುದು ಜೀವನದ ಪಾಠವಾಗಲಿ



**ವಿಜಯಪುರ, ಸೆ. 4 –** ಶ್ರೀಕೃಷ್ಣ ಪರಮಾತ್ಮನು ಜಗತ್ತಿಗೆ ನೀಡಿರುವ ಅತ್ಯಂತ ದೊಡ್ಡ ಕೊಡುಗೆಗಳಲ್ಲಿ ಭಗವದ್ಗೀತೆ ಪ್ರಮುಖವಾದುದು. ಭಗವದ್ಗೀತೆಯಲ್ಲಿನ ತತ್ವ, ಜ್ಞಾನ ಹಾಗೂ ಜೀವನ ಮೌಲ್ಯಗಳನ್ನು ಪ್ರತಿಯೊಬ್ಬರೂ ಅರಿತುಕೊಂಡು, ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಶಾಂತಿ, ಸಹಬಾಳ್ವೆ, ಮಾನವೀಯತೆ ಹಾಗೂ ಸೌಹಾರ್ದತೆ ನಮ್ಮ ಜೀವನದ ಪ್ರಮುಖ ಮೌಲ್ಯಗಳಾಗಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಶ್ರೀಕೃಷ್ಣ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀಕೃಷ್ಣನ ಜೀವನ ಹಾಗೂ ಭಗವದ್ಗೀತೆಯ ಸಂದೇಶಗಳು ಇಂದಿನ ಸಮಾಜಕ್ಕೂ ಅತ್ಯಂತ ಪ್ರಸ್ತುತವಾಗಿವೆ.

ಕಷ್ಟದ ಸಂದರ್ಭಗಳಲ್ಲಿ ಧೈರ್ಯ ಕಳೆದುಕೊಳ್ಳದೆ, ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸುವುದು ಹಾಗೂ ಸತ್ಯದ ಮಾರ್ಗದಲ್ಲಿ ಸಾಗುವುದು ಶ್ರೀಕೃಷ್ಣನ ಜೀವನದಿಂದ ಕಲಿಯಬಹುದಾದ ಪ್ರಮುಖ ಪಾಠಗಳಾಗಿವೆ ಎಂದರು.

## ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿದಾಗ ಮಾತ್ರ ಆರೋಗ್ಯವಂತರಾಗಿರಲು ಸಾಧ್ಯ: ಸುಬ್ಬರಾಯುಡು

**ಬಳ್ಳಾರಿ,ಸೆ.06:** ಕ್ರೀಡಾಪಟುಗಳು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿದಾಗ ಮಾತ್ರ ಆರೋಗ್ಯವಂತರಾಗಿರಲು ಸಾಧ್ಯ' ಎಂದು ಕಾಂಗ್ರೆಸ್ ಮುಖಂಡ ಎಂ.ಸುಬ್ಬಾರಾಯುಡು ಅಭಿಪ್ರಾಯಪಟ್ಟರು.



ನಗರದ ಭತ್ರಿ ಪ್ರದೇಶದ ಈರಣ್ಣ ಸ್ವಾಮಿ ಟ್ರಸ್ಟ್ ವತಿಯಿಂದ ಆರ್.ವೈ.ಎಂ.ಇ.ಸಿ ಕಾಲೇಜಿನ ಮೈದಾನದಲ್ಲಿ ಏರ್ಪಡಿಸಿದ್ದ ಕ್ರಿಕೆಟ್ ಟೂರ್ನಮೆಂಟ್ ಅನ್ನು ಕಾಂಗ್ರೆಸ್ ಮುಖಂಡ ಎಂ.ಸುಬ್ಬರಾಯುಡು ಉದ್ಘಾಟಿಸಿ, ಓದಿನ ಜೊತೆಗೆ ಕ್ರೀಡೆಯಲ್ಲಿ ಭಾಗವಹಿಸಿ, ಕ್ರೀಡೆಯಲ್ಲಿ ತಮ್ಮ ದೈಹಿಕ ಹಾಗೂ ಮಾನಸಿಕ ಸಾಮರ್ಥ ಪರೀಕ್ಷಿಸಿಕೊಳ್ಳಬಹುದು ಎಂದ ಅವರು ಕ್ರೀಡಾಪಟುಗಳಲ್ಲಿ ಅತ್ಯಂತ ಸಾಮರಸ್ಯವಿ ರುತ್ತದೆ. ಇದು ಕ್ರೀಡಾಕ್ಷೇತ್ರದ ಗುಟ್ಟಾಗಿದೆ.ಕ್ರೀಡೆ ತಮ್ಮ ಮಾನಸಿಕ ಬುದ್ಧಿಮಟ್ಟ ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ. ಹಾಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಕೂಡ ಶೈಕ್ಷಣಿಕ ಚಟುವಟಿಕೆಯ ಜೊತೆಗೆ ಕ್ರೀಡಾ ಚಟುವಟಿಕೆಗಳಲ್ಲೂ ಕೂಡ ಕಡ್ಡಾಯವಾಗಿ ಪಾಲ್ಗೊಳ್ಳಬೇಕು.

ಇಂದಿನ ದಿನಮಾನಗಳಲ್ಲಿ ವಿದ್ಯಾರ್ಥಿಗಳು ಮೊಬೈಲ್ ಫೋನ್, ಟಿವಿ ಹಾವಳಿಯಿಂದ ಕ್ರೀಡೆಗೆ ಪ್ರಾಮುಖ್ಯತೆ ನೀಡುವುದು ಕಡಿಮೆಯಾ ಗುತ್ತಿದೆ. ಓದಿಗೆ ಕೊಡುವಷ್ಟು ಪ್ರಾಮುಖ್ಯತೆ, ಪಕ್ಷೇತರ ಚಟುವಟಿಕೆಗೂ ಕೊಡಬೇಕು ಎಂದು ಸುಬ್ಬರಾಯುಡು ಯುವಕರಿಗೆ ಕರೆ ನೀಡಿದರು.

ಅಂಕಗಳು ಒಮ್ಮೊಮ್ಮೆ ಹೆಚ್ಚು ಕಡಿಮೆ ಆಗುತ್ತವೆ. ಇಂತಹ ಸಂದರ್ಭದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳು ಖಿನ್ನತೆಗೆ ಒಳಗಾಗುತ್ತಾರೆ. ಆದರೆ ಕ್ರೀಡೆಯಲ್ಲಿ ಇಂತಹ ನ್ಯೂನತೆಗಳಿಂದ ದೂರವಾಗಬಹುದು ಎಂದು ಯುವಕರಿಗೆ ಸುಬ್ಬಾರಾಯುಡು ಕಿವಿಮಾತು ಹೇಳಿದರು.

## ವಿಟ್ಲಪಿಂಡಿ ವೇಳೆ ಅವಘಡ: ನೆಲಕ್ಕೆ ಬಿದ್ದು ಒಡೆದುಹೋದ ವೇದವರ್ಧನ ತೀರ್ಥ ಸ್ವಾಮೀಜಿಗಳ ಮೂರ್ತಿ

**ಉಡುಪಿ, ಸೆ.6:** ಐತಿಹಾಸಿಕ ಉಡುಪಿ ಶ್ರೀಕೃಷ್ಣ ಮಠದಲ್ಲಿ ಅದ್ದೂರಿಯಾಗಿ ಜರುಗಿದ ಶ್ರೀಕೃಷ್ಣ ಲೀಲೋತ್ಸವದ (ವಿಟ್ಲಪಿಂಡಿ) ಅಂತಿಮ ಕ್ಷಣಗಳಲ್ಲಿ ಅನಿರೀಕ್ಷಿತ ಅವಘಡವೊಂದು ಸಂಭವಿಸಿದೆ. ಉತ್ಸವದ ಅಂಗವಾಗಿ ಚಿನ್ನದ ರಥದಲ್ಲಿ ಮೆರವಣಿಗೆ ಕಂಡಿದ್ದ ಮಣ್ಣಿನ ಬಾಲಕೃಷ್ಣನ ಪ್ರತಿಮೆಯನ್ನು ಕೆಳಗಿಳಿಸುವ ಸಂದರ್ಭದಲ್ಲಿ, ಪರ್ಯಾಯ ಶ್ರೀ ವೇದವರ್ಧನ ತೀರ್ಥ ಸ್ವಾಮೀಜಿಗಳ ಕೈತಪ್ಪಿ ಮೂರ್ತಿ ನೆಲಕ್ಕುರುಳಿ ಒಡೆದು ಹೋಗಿದೆ. ಈ ಅನಿರೀಕ್ಷಿತ ಘಟನೆಯಿಂದಾಗಿ ಸ್ಥಳದಲ್ಲಿದ್ದ ನೂರಾರು ಭಕ್ತರಲ್ಲಿ ಕೆಲಕಾಲ ತೀವ್ರ ಆತಂಕ ಹಾಗೂ ಆಘಾತದ ವಾತಾವರಣ ಉಂಟಾಯಿತು.



ವೈಭವದ ರಥೋತ್ಸವದ ನಂತರ ನಡೆದ ಘಟನೆ-ಚಾತುರ್ಮಾಸ್ಯ ವ್ರತದ ಅಂಗವಾಗಿ ಮಠದಲ್ಲಿ ಮಣ್ಣಿನ ವಿಶೇಷ ಕೃಷ್ಣನ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಗಿತ್ತು. ಭಾನುವಾರ ನಡೆದ ವಿಟ್ಲಪಿಂಡಿ ಮಹೋತ್ಸವದ ಸಂದರ್ಭದಲ್ಲಿ ಈ ಮೃತ್ತಿಕಾ ಮೂರ್ತಿಯನ್ನು ಸ್ವರ್ಣ ರಥದಲ್ಲಿ ಕೂರಿಸಿ, ಸಾವಿರಾರು ಭಕ್ತರ ಜಯಘೋಷಗಳ ನಡುವೆ ರಥಬೀದಿಯಲ್ಲಿ ಸಂಭ್ರಮದಿಂದ ರಥೋತ್ಸವ ನೆರವೇರಿಸಲಾಗಿತ್ತು.

ಜಾರಿಬಿದ್ದು ಛಿದ್ರವಾದ ಮಣ್ಣಿನ ಮೂರ್ತಿ - ಮೆರವಣಿಗೆ ಮುಕ್ತಾಯಗೊಂಡ ಬಳಿಕ ಸಂಪ್ರದಾಯ ದಂತೆ ಪವಿತ್ರ ಮಧ್ವ ಸರೋವರದಲ್ಲಿ ಜಲಸ್ತಂಭನ (ವಿಸರ್ಜನೆ) ನೆರವೇರಿಸಲು ಮೂರ್ತಿಯನ್ನು ಸಾಗಿಸಲಾಗುತ್ತಿತ್ತು. ರಥದಿಂದ ಕೆಳಗೆ ತರುವ ವೇಳೆ ಪರ್ಯಾಯ ಶ್ರೀಗಳ ಕೈಯಿಂದ ಮೂರ್ತಿ ಆಕಸ್ಮಿಕವಾಗಿ ಜಾರಿ ನೆಲಕ್ಕೆ ಬಿದ್ದಿದೆ. ಮಣ್ಣಿನಿಂದ ರೂಪಿತವಾಗಿದ್ದ ಕಾರಣ ನೆಲಕ್ಕೆ ಅಪ್ಪಳಿಸಿದ ರಭಸಕ್ಕೆ ಪ್ರತಿಮೆ ಭಗ್ನಗೊಂಡಿದೆ. ಕಣ್ಣೆದುರೇ ನಡೆದ ಈ ದೃಶ್ಯ ಕಂಡು ಸ್ಥಳದಲ್ಲಿದ್ದ ಶ್ರದ್ಧಾಳುಗಳು ಬೆಚ್ಚಿಬಿದ್ದಿದ್ದು, ಮಠದ ಆವರಣದಲ್ಲಿ ಕೆಲಕಾಲ ಮೌನ ಆವರಿಸಿತ್ತು.

# ಜಮ್ಮು-ಕಾಶ್ಮೀರ, ಲಡಾಖ್ ಭಾರತದ ಅಧಿಕೃತ ನಕ್ಷೆಗೆ ಅನುಗುಣವಾಗಿ ಚಿತ್ರಿಸಿ: ಜೈಸ್ವಾಲ್

**ನವದೆಹಲಿ,ಸೆ.6:** ಸಮಾನ-ಪ್ರದೇಶದ ನಕ್ಷೆಯ ಪ್ರಕ್ಷೇಪಣಗಳನ್ನು ಪ್ರತಿಪಾದಿಸುವ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ (ಯುಎನ್ಜಿಎ) ನಿರ್ಣಯದ ಪರವಾಗಿ ಭಾರತ ಮತ ಚಲಾಯಿಸಿದೆ ಮತ್ತು ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ಕೇಂದ್ರಾಡಳಿತ ಪ್ರದೇಶಗಳು ಸೇರಿದಂತೆ ಅದರ ಅಂತರರಾಷ್ಟ್ರೀಯ ಗಡಿಗಳು ಭಾರತದ ಅಧಿಕೃತ ಪ್ರಾದೇಶಿಕ ನಕ್ಷೆಗಳಿಗೆ ಕಟ್ಟುನಿಟ್ಟಾಗಿ ಬದ್ಧವಾಗಿರಬೇಕು ಎಂದು ದೃಢವಾಗಿ ಹೇಳಿದೆ.

ಭಾರತದ ನಿಲುವಿಗೆ ಸಂಬಂಧಿಸಿದ ಮಾಧ್ಯಮ ವಿಚಾರಣೆಗಳಿಗೆ ಪ್ರತಿಕ್ರಿಯಿಸಿದ ವಿದೇಶಾಂಗ ಸಚಿವಾಲಯದ (ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ನಿರ್ಣಯದ ಅಳವಡಿಕೆ ಮತ್ತು ಮೂಲ ವ್ಯಾಪ್ತಿಯನ್ನು ವಿವರಿಸಿದರು. ತನ್ನ ಮತದ ಜೊತೆಗೆ ಭಾರತದ ಸಲ್ಲಿಕೆಯನ್ನು ಸ್ಪಷ್ಟಪಡಿಸಿದ ಜೈಸ್ವಾಲ್, ಸಮಾನ-ಪ್ರದೇಶದ ತಾಂತ್ರಿಕ ಪ್ರಾತಿನಿಧ್ಯಗಳನ್ನು ಬೆಂಬಲಿಸುವುದು ರಾಷ್ಟ್ರೀಯ ಪ್ರಾದೇಶಿಕ ಸಾರ್ವಭೌಮತ್ವವನ್ನು ಅತಿಕ್ರಮಿಸುವುದಿಲ್ಲ ಎಂದು ಒತ್ತಿ ಹೇಳಿದರು.

"ಭಾರತವು ನಿರ್ಣಯದ ಪರವಾಗಿ ಮತ ಚಲಾಯಿಸಿತು ಮತ್ತು ಸಮಾನ-ಪ್ರದೇಶದ ನಕ್ಷೆಯ ಪ್ರಾತಿನಿಧ್ಯವನ್ನು ಉತ್ತೇಜಿಸುವ ಮೂಲ ತತ್ವವನ್ನು ಒತ್ತಿ ಹೇಳುವ ಮೂಲಕ ಮತದಾನದ ವಿವರಣೆಯನ್ನು ಸಹ ನೀಡಿತು. ನಿರ್ಣಯವು ಯಾವುದೇ ನಿರ್ದಿಷ್ಟ ನಕ್ಷೆ, ಪ್ರಕ್ಷೇಪಣ ಅಥವಾ ರಾಷ್ಟ್ರೀಯ ಗಡಿಗಳ ಚಿತ್ರಣದ ಅನುಮೋದನೆಯನ್ನು ರೂಪಿಸುವುದಿಲ್ಲ ಎಂದು ನಾವು ಹೈಲೈಟ್ ಮಾಡಿದ್ದೇವೆ. ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡಂತೆ ಭಾರತದ ಸಾರ್ವಭೌಮ ಪ್ರದೇಶವನ್ನು ಭಾರತದ ಅಧಿಕೃತ ನಕ್ಷೆಗೆ ಅನುಗುಣವಾಗಿ ಚಿತ್ರಿಸಬೇಕು. ಯಾವುದೇ ತಪ್ಪಾದ ಅಥವಾ ದಾರಿತಪ್ಪಿಸುವ ಚಿತ್ರಣವು ಸ್ವೀಕಾರಾರ್ಹವಲ್ಲ. ಭಾರತದ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಯ ಕುರಿತು ನಮ್ಮ ನಿಲುವು ಸ್ಪಷ್ಟವಾಗಿದೆ, ಸ್ಥಿರವಾಗಿದೆ ಮತ್ತು ಮಾತುಕತೆಗೆ ಒಳಪಡುವುದಿಲ್ಲ, ಎಂದು ಅವರು ಹೇಳಿದರು.

ಸೆಪ್ಟೆಂಬರ್ 4, 2026 ರಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು "ನಕ್ಷೆಯನ್ನು ಸರಿಪಡಿಸಿ: ಜಾಗತಿಕ ಕಾರ್ಟೊಗ್ರಾಫಿಕ್ ಪ್ರಾತಿನಿಧ್ಯವನ್ನು ಮರುಸಮತೋಲನಗೊಳಿಸುವುದು ಮತ್ತು ವಿಶ್ವದ ಪ್ರದೇಶಗಳ, ವಿಶೇಷವಾಗಿ ಆಫ್ರಿಕಾದ ಸಮಾನ ಪ್ರಾತಿನಿಧ್ಯವನ್ನು ಉತ್ತೇಜಿಸುವುದು" ಎಂಬ ಶೀರ್ಷಿಕೆಯ ನಿರ್ಣಯವನ್ನು ಅಂಗೀಕರಿಸಿತು. ಆಫ್ರಿಕಾ ಮತ್ತು ದಕ್ಷಿಣ



ಅಮೆರಿಕಾದಂತಹ ಸಮಭಾಜಕ ಪ್ರದೇಶಗಳನ್ನು ದೃಷ್ಟಿಗೋಚರವಾಗಿ ಕುಗ್ಗಿಸುವಾಗ ಧ್ರುವಗಳ ಬಳಿ ಭೂಪ್ರದೇಶಗಳನ್ನು ಹೆಚ್ಚು ಉತ್ಪ್ರೇಕ್ಷಿಸುವ 16 ನೇ ಶತಮಾನದ ಸಾಂಪ್ರದಾಯಿಕ ಮರ್ಕೇಟರ್ ಪ್ರಕ್ಷೇಪಣದಿಂದ ದೂರ ಸರಿಯಲು ಆಫ್ರಿಕನ್ ನೇತೃತ್ವದ ಅಭಿಯಾನದಿಂದ ಈ ನಿರ್ಣಯವು ಹುಟ್ಟಿಕೊಂಡಿದೆ. ಖಂಡಗಳ ಭೂಪ್ರದೇಶಗಳ ಸಾಪೇಕ್ಷ ಗಾತ್ರಗಳನ್ನು ಸಂರಕ್ಷಿಸುವ ಸಮಾನ-ಪ್ರದೇಶದ ನಕ್ಷೆ ಪ್ರಕ್ಷೇಪಗಳ ಬಳಕೆಯನ್ನು ಉತ್ತೇಜಿಸುವುದು ಇದರ ಉದ್ದೇಶವಾಗಿದೆ.

"ಈ ನಿರ್ಣಯವು ಯಾವುದೇ ನಿರ್ದಿಷ್ಟ ವಿಶ್ವ ನಕ್ಷೆಯನ್ನು ಅಳವಡಿಸಿಕೊಳ್ಳುವುದಿಲ್ಲ ಅಥವಾ ದೃಢೀಕರಿಸುವುದಿಲ್ಲ, ಅಥವಾ ಅಂತರರಾಷ್ಟ್ರೀಯ ಗಡಿಗಳು, ವಿವಾದಿತ ಪ್ರದೇಶಗಳು ಅಥವಾ ಸ್ಥಳನಾಮಗಳು ಸೇರಿದಂತೆ ರಾಜಕೀಯ ನಕ್ಷೆಶಾಸ್ತ್ರವನ್ನು ಉಲ್ಲೇಖಿಸುವುದಿಲ್ಲ" ಎಂದು ಜೈಸ್ವಾಲ್ ಹೇಳಿದರು.


ಹಳೆಯ ನಕ್ಷೆಗಳನ್ನು ನಿಷೇಧಿಸುವ ಅಥವಾ ಒಂದೇ ಪರ್ಯಾಯವನ್ನು ಕಡ್ಡಾಯಗೊಳಿಸುವ ಬದಲು, ನಿಖರವಾದ ಸಾಪೇಕ್ಷ ಭೂ ಗಾತ್ರ ಅಗತ್ಯವಿರುವಾಗ ಸಮಾನ ಭೂಮಿಯ ಪ್ರಕ್ಷೇಪಣದಂತಹ ಸಮಾನ-ಪ್ರದೇಶದ ಆಯ್ಕೆಗಳನ್ನು ಬಳಸಿಕೊಳ್ಳಲು UNGA ಸರ್ಕಾರಗಳು, ಶೈಕ್ಷಣಿಕ ಸಂಸ್ಥೆಗಳು ಮತ್ತು ತಂತ್ರಜ್ಞಾನ ಸಂಸ್ಥೆಗಳನ್ನು ಪ್ರೋತ್ಸಾಹಿಸುತ್ತದೆ. ಈ ಕ್ರಮವು ಅಗಾಧವಾದ ಜಾಗತಿಕ ಬೆಂಬಲದೊಂದಿಗೆ ಅಂಗೀಕರಿಸಲ್ಪಟ್ಟಿತು, 164 ದೃಢವಾದ ಮತಗಳನ್ನು ಪಡೆಯಿತು. ಆರು ರಾಷ್ಟ್ರಗಳಾದ ಎಸ್ಟೋನಿಯಾ, ಜಾರ್ಜಿಯಾ, ಲಿಥುವೇನಿಯಾ, ಮೊಲ್ಡೊವಾ, ಸೆರ್ಬಿಯಾ ಮತ್ತು ಉಕ್ರೇನ್ ಗೈರುಹಾಜರಾಗಿದ್ದವು, ಆದರೆ ಅಮೆರಿಕ ನಿರ್ಣಯದ ವಿರುದ್ಧ ಏಕೈಕ ಮತ ಚಲಾಯಿಸಿತು.

ನ್ಯಾವಿಗೇಷನ್ಗೆ ಅದರ ಉಪಯುಕ್ತತೆಯಿಂದಾಗಿ ಮರ್ಕೇಟರ್ ಪ್ರಕ್ಷೇಪಣವು ವ್ಯಾಪಕವಾಗಿ ಬಳಸಲ್ಪಡುತ್ತಿದ್ದರೂ, ಅದರ ದೃಶ್ಯ ಪ್ರಾತಿನಿಧ್ಯವು ಧ್ರುವಗಳಿಗೆ ಹತ್ತಿರವಿರುವ ಪ್ರದೇಶಗಳನ್ನು ಸಮಭಾಜಕದ ಸಮೀಪವಿರುವ ಪ್ರದೇಶಗಳೊಂದಿಗೆ ಹೋಲಿಸಿದರೆ ಅಸಮಾನವಾಗಿ ದೊಡ್ಡದಾಗಿ ಕಾಣುವಂತೆ ಮಾಡುತ್ತದೆ. ಮರ್ಕೇಟರ್ ಪ್ರಕ್ಷೇಪಣವು ಧ್ರುವಗಳ ಸಮೀಪವಿರುವ ಭೂಪ್ರದೇಶಗಳನ್ನು ಅವುಗಳ ನಿಜವಾದ ಸಾಪೇಕ್ಷ ಗಾತ್ರದಲ್ಲಿ ತೋರಿಸುವಾಗ ಅವು ನಿಜವಾಗಿರುವುದಕ್ಕಿಂತ ದೊಡ್ಡದಾಗಿ ಕಾಣುವಂತೆ ಮಾಡುತ್ತದೆ.

ಮರ್ಕೇಟರ್ ಪ್ರಕ್ಷೇಪಣವನ್ನು ಬಳಸುವ ನಕ್ಷೆಯಲ್ಲಿ, ಗ್ರೀನ್ಲ್ಯಾಂಡ್ ಆಫ್ರಿಕಾದಂತೆಯೇ ಕಾಣುತ್ತದೆ. ವಾಸ್ತವದಲ್ಲಿ, ಆಫ್ರಿಕಾ ಸುಮಾರು 14 ಪಟ್ಟು ಹೆಚ್ಚು ಗ್ರೀನ್‌ಲ್ಯಾಂಡ್‌ಗಿಂತ ದೊಡ್ಡದಾಗಿದೆ. ಗ್ರೀನ್‌ಲ್ಯಾಂಡ್ ಸುಮಾರು 2.16 ದಶಲಕ್ಷ ಚದರ ಕಿಲೋಮೀಟರ್‌ಗಳನ್ನು ಆವರಿಸಿದರೆ, ಆಫ್ರಿಕಾ ಸುಮಾರು 30.37 ದಶಲಕ್ಷ ಚದರ ಕಿಲೋಮೀಟರ್‌ಗಳನ್ನು ಆವರಿಸಿದೆ.

ನಕ್ಷೆಯಲ್ಲಿ, ಅಲಾಸ್ಕಾ ಬ್ರೆಜಿಲ್‌ನಂತೆಯೇ ಸರಿಸುಮಾರು ಒಂದೇ ಗಾತ್ರದಲ್ಲಿದೆ. ವಾಸ್ತವದಲ್ಲಿ, ಬ್ರೆಜಿಲ್ ಅಲಾಸ್ಕಾಕ್ಕಿಂತ ಸುಮಾರು ಐದು ಪಟ್ಟು ದೊಡ್ಡದಾಗಿದೆ. ಅಲಾಸ್ಕಾ ಸುಮಾರು 1.7 ದಶಲಕ್ಷ ಚದರ ಕಿಲೋಮೀಟರ್‌ಗಳು, ಆದರೆ ಬ್ರೆಜಿಲ್ ಸುಮಾರು 8.5 ಮಿಲಿಯನ್ ಚದರ ಕಿಲೋಮೀಟರ್. ಮರ್ಕೇಟರ್ ನಕ್ಷೆಯ ಕೆಳಭಾಗದಲ್ಲಿ ಅಂಟಾರ್ಕ್ಟಿಕಾ ಬೃಹತ್ ಪ್ರಮಾಣದಲ್ಲಿ ಕಾಣುತ್ತದೆ, ಇದು ಪ್ರಪಂಚದ ಕೆಳಭಾಗದಲ್ಲಿ ಪ್ರಾಬಲ್ಯ ಹೊಂದಿರುವ ಅಗಾಧ ಖಂಡದಂತೆ ಕಾಣುವಂತೆ ವಿಸ್ತರಿಸುತ್ತದೆ. ಇದು ಇನ್ನೂ ದೊಡ್ಡದಾಗಿದ್ದರೂ, ನಕ್ಷೆಯ ಮಧ್ಯಭಾಗದಲ್ಲಿರುವ ಭೂಪ್ರದೇಶಗಳಿಗೆ ಹೋಲಿಸಿದರೆ ಅದರ ದೃಶ್ಯ ಪ್ರದೇಶವು ಹೆಚ್ಚು ಉತ್ಪ್ರೇಕ್ಷಿತವಾಗಿದೆ.

# ರಷ್ಯಾ-ಅಮೆರಿಕ-ಚೀನಾ ತ್ರಿಪಕ್ಷೀಯ ಸಭೆಯೂ ಸಾಧ್ಯ



**ಮಾಸ್ಕೋ, ಸೆ.6:** ಅವಕಾಶ ಸಿಕ್ಕರೆ, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಚೀನಾದಲ್ಲಿ ನಡೆಯಲಿರುವ ಏಷ್ಯಾ-ಪೆಸಿಫಿಕ್ ಆರ್ಥಿಕ ಸಹಕಾರ ಶೃಂಗಸಭೆಯ ಹೊರತಾಗಿ ತಮ್ಮ ಅಮೆರಿಕದ ಪ್ರತಿರೂಪ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿ ಮಾಡಬಹುದು, ಆದರೆ ರಷ್ಯಾ, ಚೀನಾ ಮತ್ತು ಅಮೆರಿಕದ ನಾಯಕರನ್ನು ಒಳಗೊಂಡ ತ್ರಿಪಕ್ಷೀಯ ಸಭೆಯನ್ನು ತಳ್ಳಿಹಾಕಲಾಗುವುದಿಲ್ಲ ಎಂದು ಮಾಸ್ಕೋ ಹೇಳಿದೆ ಎಂದು ಖಿಂಖಖ ಭಾನುವಾರ ವರದಿ ಮಾಡಿದೆ. ಪುಟಿನ್ ಮತ್ತು ಟ್ರಂಪ್ ಇಬ್ಬರೂ APEC ಶೃಂಗಸಭೆಯಲ್ಲಿ ಭಾಗವಹಿಸಲು ಯೋಜಿಸಿದ್ದಾರೆ ಮತ್ತು ಚೀನಾದ ಅಧ್ಯಕ್ಷ ಕ್ಸಿ ಜಿನ್ಪಿಂಗ್ ಸೇರಿದಂತೆ ರಷ್ಯಾದ ಅಧ್ಯಕ್ಷರಿಗೆ ಪ್ರತ್ಯೇಕ ಸಭೆಗಳನ್ನು ಏರ್ಪಡಿಸಲು ಮಾಸ್ಕೋ ಪ್ರಯತ್ನಿಸುತ್ತದೆ ಎಂದು ಕ್ರೆಮ್ಲಿನ್ ಸಹಾಯಕ ಯೂರಿ ಉಷಾಕೋವ್ ಹೇಳಿದ್ದಾರೆ.

ಪ್ರತಿಯೊಬ್ಬ ನಾಯಕರು ಏಷ್ಯಾ-ಪೆಸಿಫಿಕ್ ಆರ್ಥಿಕ ಸಹಕಾರ ಶೃಂಗಸಭೆಯಲ್ಲಿ ಭಾಗವಹಿಸಲು ಯೋಜಿಸಿದ್ದಾರೆ. ಸ್ವಾಭಾವಿಕವಾಗಿ, ಅಧ್ಯಕ್ಷ ಕ್ಸಿ ಜಿನ್ಪಿಂಗ್ ಸೇರಿದಂತೆ ನಮ್ಮ ನಾಯಕರಿಗೆ ಪ್ರತ್ಯೇಕ ಸಭೆಗಳನ್ನು ಏರ್ಪಡಿಸಲು ನಾವು ಪ್ರಯತ್ನಿಸುತ್ತೇವೆ. ಮತ್ತು, ಅವಕಾಶ ಸಿಕ್ಕರೆ, ನಮ್ಮ ನಾಯಕ ಅಮೆರಿಕ ಅಧ್ಯಕ್ಷರನ್ನು ಸಹ ಭೇಟಿಯಾಗುತ್ತಾರೆ, ಎಂದು ಖಿಂಖಖ ವರದಿ ಮಾಡಿದೆ. ಪುಟಿನ್-ಟ್ರಂಪ್ ಸಭೆ ನಡೆದರೆ, ಅವರ ಸಂಭಾಷಣೆಯ ಸಾರವು ಸಭೆಯ ಅವಧಿಯನ್ನು ಅವಲಂಬಿಸಿರುತ್ತದೆ ಎಂದು ಅವರು ಹೇಳಿದರು.

ಏತನ್ಮಧ್ಯೆ, ರಷ್ಯಾ, ಚೀನಾ ಮತ್ತು ಅಮೆರಿಕ ನಾಯಕರನ್ನು ಒಳಗೊಂಡ ತ್ರಿಪಕ್ಷೀಯ ಸಭೆಯನ್ನು ತಳ್ಳಿಹಾಕಲಾಗುವುದಿಲ್ಲ ಎಂದು ರಷ್ಯಾದ ಉಪ ವಿದೇಶಾಂಗ ಸಚಿವ ಸೆರ್ಗೆಯ್ ರಿಯಾಬ್ಕೋವ್ ಹೇಳಿದರು, ಆದಾಗ್ಯೂ ಅಂತಹ ಸಭೆಗೆ ಸಿದ್ಧತೆಗಳು ಇನ್ನೂ ಪ್ರಾರಂಭವಾಗಿಲ್ಲ ಎಂದು ಅವರು ಗಮನಿಸಿದರು.

# ಪುಟಿನ್ ಜೊತೆಗಿನ ಮಾತುಕತೆ ನಂತರ ಟ್ರಂಪ್ ರಾಯಭಾರಿ ಕೈವ್‌ಗೆ

**ವಾಷಿಂಗ್ಟನ್, ಸೆ.6:** ಮಾಸ್ಕೋದಲ್ಲಿ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಜೊತೆಗಿನ ಮೂರು ಗಂಟೆಗಳ ಸಭೆಯು ಯಾವುದೇ ಘೋಷಿತ ಪ್ರಗತಿಯನ್ನು ಸಾಧಿಸದ ನಂತರ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ರಾಯಭಾರಿಗಳಾದ ಸ್ಟೀವ್ ವಿಟ್ಕಾಫ್ ಮತ್ತು ಜೇರೆಡ್ ಕುಶ್ನರ್ ಅವರು ಉಕ್ರೇನಿಯನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಜೊತೆ ಮಾತುಕತೆಗಾಗಿ ಭಾನುವಾರ ಕೈವ್‌ಗೆ ಆಗಮಿಸಿದರು.



ಟ್ರಂಪ್ ಅವರ ಶಾಂತಿ ಸಮಾಲೋಚಕರಾಗಿ ತಮ್ಮ ಪಾತ್ರದಲ್ಲಿ ಇದು ಅವರ ಮೊದಲ ಅಧಿಕೃತ ಉಕ್ರೇನ್ ಭೇಟಿಯಾಗಿದೆ ಮತ್ತು ಉಕ್ರೇನ್ ವಿರುದ್ಧ ರಷ್ಯಾದ ನಾಲ್ಕು ವರ್ಷಗಳಿಗೂ ಹೆಚ್ಚು ಹಳೆಯ ಯುದ್ಧವನ್ನು ಕೊನೆಗೊಳಿಸುವ ಪ್ರಯತ್ನಗಳನ್ನು ಪುನರುಜ್ಜೀವನಗೊಳಿಸಲು ವಾಷಿಂಗ್ಟನ್ ಪ್ರಯತ್ನಿಸುತ್ತಿರುವಾಗ ಇದು ಬರುತ್ತದೆ. ಉಕ್ರೇನಿಯನ್ ಹಿರಿಯ ಅಧಿಕಾರಿಗಳು ಕೈವ್ನಲ್ಲಿ ಇಬ್ಬರು ರಾಯಭಾರಿಗಳನ್ನು ಸ್ವೀಕರಿಸಿದರು. ಫ್ರಾನ್ಸ್, ಜರ್ಮನಿ ಮತ್ತು ಬ್ರಿಟನ್ನ ರಾಷ್ಟ್ರೀಯ ಭದ್ರತಾ ಪ್ರತಿನಿಧಿಗಳು ಸಹ ಚರ್ಚೆಗಳಲ್ಲಿ ಭಾಗವಹಿಸುವ ನಿರೀಕ್ಷೆಯಿತ್ತು, ಯಾವುದೇ ಇತ್ಯರ್ಥದ ಕುರಿತು ಮಾತುಕತೆಗಳಲ್ಲಿ ಪಾತ್ರ ವಹಿಸಲು ಯುರೋಪಿನ ಒತ್ತಡವನ್ನು ಒತ್ತಿಹೇಳುತ್ತದೆ.

ಶನಿವಾರ ಕ್ರೆಮ್ಲಿನ್ನಲ್ಲಿ ಪುಟಿನ್ ಅವರನ್ನು ಭೇಟಿಯಾದ ನಂತರ ವಿಟ್ಕಾಫ್ ಮತ್ತು ಕುಶ್ನರ್ ಉಕ್ರೇನಿಯನ್ ರಾಜಧಾನಿಗೆ ಪ್ರಯಾಣ ಬೆಳೆಸಿದರು. ಕ್ರೆಮ್ಲಿನ್ ಮಾತುಕತೆಗಳನ್ನು ದೃಢಪಡಿಸಿತು ಆದರೆ ಅವುಗಳ ಸಾರ ಅಥವಾ ಫಲಿತಾಂಶದ ಬಗ್ಗೆ ಕೆಲವು ವಿವರಗಳನ್ನು ಬಿಡುಗಡೆ ಮಾಡಿತು. ಯುದ್ಧ ಮತ್ತು ಮುಂದಿನ ಹಂತಗಳ ಬಗ್ಗೆ ಪಕ್ಷಗಳು ಚರ್ಚಿಸಿದವು ಎಂದು ಶ್ವೇತಭವನದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮಾಸ್ಕೋ ಸಭೆಯ ನಂತರ ತಕ್ಷಣವೇ ಮುಂದಿನ ಮಾತುಕತೆಗಳಿಗೆ ಯಾವುದೇ ಒಪ್ಪಂದ ಅಥವಾ ವೇಳಾಪಟ್ಟಿಯನ್ನು ಘೋಷಿಸಲಾಗಿಲ್ಲ. ರಾಯಭಾರಿಗಳು ಆಗಮನದ ಮೊದಲು ಝೆಲೆನ್ಸ್ಕಿ ಅವರ ವೇಳಾಪಟ್ಟಿಯನ್ನು ದೃಢಪಡಿಸಿದ್ದರು.

ಟ್ರಂಪ್ ಮಾಸ್ಕೋ ಮತ್ತು ಕೈವ್ ಅನ್ನು ಒಪ್ಪಂದಕ್ಕೆ ಬರಲು ಪದೇ ಪದೇ ಒತ್ತಾಯಿಸಿದ್ದಾರೆ, ಆದರೆ ಪಕ್ಷಗಳು ಪ್ರದೇಶ, ಭದ್ರತಾ ಖಾತರಿಗಳು ಮತ್ತು ಯುದ್ಧವನ್ನು ಕೊನೆಗೊಳಿಸುವ ಷರತ್ತುಗಳ ಬಗ್ಗೆ ವಿಭಜನೆಯಾಗಿವೆ.

ಪೂರ್ವ ಉಕ್ರೇನ್ನಲ್ಲಿನ ಭೂಪ್ರದೇಶದ ಮೇಲೆ ಉಕ್ರೇನಿಯನ್ ರಿಯಾಯಿತಿಗಳನ್ನು ರಷ್ಯಾ ಒತ್ತಾಯಿಸುತ್ತಿದೆ. ಮತ್ತೊಂದೆಡೆ, ಕೈವ್ ತನ್ನ ಅನುಮೋದನೆಯಿಲ್ಲದೆ ವಿಧಿಸಲಾದ ಯಾವುದೇ ಇತ್ಯರ್ಥವನ್ನು ತಿರಸ್ಕರಿಸಿದೆ. ಮತ್ತೊಂದು ರಷ್ಯಾದ ದಾಳಿಯನ್ನು ತಡೆಯಲು ವಿಶ್ವಾಸಾರ್ಹ ಭದ್ರತಾ ಖಾತರಿಗಳು ಅಗತ್ಯವಿದೆ ಎಂದು ಉಕ್ರೇನ್ ವಾದಿಸುತ್ತದೆ.

ಕೀವ್ ಚರ್ಚೆಗಳು ಪುಟಿನ್ ಅವರೊಂದಿಗಿನ ರಾಯಭಾರಿಗಳ ಸಭೆಯ ಫಲಿತಾಂಶ, ಮಾತುಕತೆಗಳಿಗೆ ಉಕ್ರೇನ್ನ ಷರತ್ತುಗಳು ಮತ್ತು ವಿಶಾಲವಾದ ಕದನ ವಿರಾಮದ ಕಡೆಗೆ ಸಂಭವನೀಯ ಕ್ರಮಗಳ ಮೇಲೆ ಕೇಂದ್ರೀಕರಿಸುವ ನಿರೀಕ್ಷೆಯಿದೆ.

ಇತ್ತೀಚಿನ ಉಪಕ್ರಮವು ಸಮಗ್ರ ಒಪ್ಪಂದವನ್ನು ರೂಪಿಸಲು ವಿಫಲವಾದ ತಿಂಗಳುಗಳ ಮಧ್ಯಂತರ ಯುಎಸ್ ನೇತೃತ್ವದ ರಾಜತಾಂತ್ರಿಕತೆಯ ನಂತರ ಬಂದಿದೆ. ಟ್ರಂಪ್ ಯುದ್ಧವನ್ನು ತ್ವರಿತವಾಗಿ ಕೊನೆಗೊಳಿಸುವುದಾಗಿ ಪ್ರತಿಜ್ಞೆ ಮಾಡಿದ್ದರು, ಆದರೆ ಹೊಂದಾಣಿಕೆಯಾಗದ ರಷ್ಯಾ ಮತ್ತು ಉಕ್ರೇನಿಯನ್ ಬೇಡಿಕೆಗಳಿಂದಾಗಿ ಮಾತುಕತೆಗಳು ಪದೇ ಪದೇ ಸ್ಥಗಿತಗೊಂಡಿವೆ.

# ಚೀನಾದ ಪೆಸಿಫಿಕ್ ಪ್ರಭಾವ ಅಭಿಯಾನ ಪ್ರಾದೇಶಿಕ ಏಕತೆಗೆ ಧಕ್ಕೆ: ತೈವಾನ್ ಅಧಿಕಾರಿ ಎಚ್ಚರಿಕೆ

**ತೈವಾನ್,ಸೆ.6:** ಪೆಸಿಫಿಕ್ ವ್ಯವಹಾರಗಳಲ್ಲಿ ಭೌಗೋಳಿಕ ರಾಜಕೀಯ ಪೈಪೋಟಿಯನ್ನು ಪರಿಚಯಿಸಲು ಮತ್ತು ಪ್ರಾದೇಶಿಕ ಒಮ್ಮತವನ್ನು ಅಡ್ಡಿಪಡಿಸಲು ಚೀನಾದ ಹೆಚ್ಚುತ್ತಿರುವ ಪ್ರಯತ್ನಗಳಿಗೆ ನಿಕಟ ಅಂತರರಾಷ್ಟ್ರೀಯ ಪರಿಶೀಲನೆಯ ಅಗತ್ಯವಿದೆ ಎಂದು ವಿದೇಶಾಂಗ ವ್ಯವಹಾರಗಳ ಅಧಿಕಾರಿಯೊಬ್ಬರು ಹೇಳಿದ್ದಾರೆ ಎಂದು ದಿ ತೈಪೆ ಟೈಮ್ಸ್ ವರದಿ ಮಾಡಿದೆ. ದಿ ತೈಪೆ ಟೈಮ್ಸ್ ಪ್ರಕಾರ, ವಿದೇಶಾಂಗ ಸಚಿವ ಲಿನ್ ಚಿಯಾ-ಲುಂಗ್ ಅವರು ಕಳೆದ ವಾರ ಪಲಾವ್ಗೆ ಭೇಟಿ ನೀಡಿದ ನಂತರ ಈ ಹೇಳಿಕೆಗಳು ಬಂದವು, ಅಲ್ಲಿ ಅವರು 55 ನೇ ಪೆಸಿಫಿಕ್ ದ್ವೀಪಗಳ ವೇದಿಕೆ (ಪಿಐಎಫ್) ಶೃಂಗಸಭೆಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ತೈವಾನೀಸ್ ನಿಯೋಗವನ್ನು ಮುನ್ನಡೆಸಿದರು. ಸಭೆಯಲ್ಲಿ ಕೆಲವು ಪೆಸಿಫಿಕ್ ನಾಯಕರು ಮಾತ್ರ ಭಾಗವಹಿಸಿದ್ದರಿಂದ ಪ್ರಾದೇಶಿಕ ಗುಂಪಿನೊಳಗಿನ ವಿಭಜನೆಗಳ ಬಗ್ಗೆ ಊಹಾಪೋಹಗಳು ಹುಟ್ಟಿಕೊಂಡವು. 13 ಪಿಐಎಫ್ ಸದಸ್ಯರನ್ನು ಅವರ ರಾಷ್ಟ್ರಗಳ ಮುಖ್ಯಸ್ಥರು ಅಥವಾ ಸರ್ಕಾರ ಪ್ರತಿನಿಧಿಸಿದರೆ, ಫಿಜಿ, ನ್ಯೂ ಕ್ಯಾಲೆಡೋನಿಯಾ, ವನವಾಟು ಮತ್ತು ಸಮೋವಾ ಮಂತ್ರಿಗಳನ್ನು ಕಳುಹಿಸಿದವು. ವಿವಿಧ ಹಂತದ ಪ್ರಾತಿನಿಧ್ಯ ಅಸಾಮಾನ್ಯವಲ್ಲ ಮತ್ತು ಅವುಗಳನ್ನು ಪೆಸಿಫಿಕ್ ಏಕತೆಯನ್ನು ದುರ್ಬಲಗೊಳಿಸುವ ಪುರಾವೆಯಾಗಿ ಅರ್ಥೈಸಬಾರದು ಎಂದು ತೈವಾನ್ ಅಧಿಕಾರಿ ಎಚ್ಚರಿಸಿದ್ದಾರೆ. ತೈವಾನ್ 1993 ರಿಂದ "ತೈವಾನ್/ರಿಪಬ್ಲಿಕ್ ಆಫ್ ಚೀನಾ" ಹೆಸರಿನಲ್ಲಿ ಅಭಿವೃದ್ಧಿ ಪಾಲುದಾರನಾಗಿ ಪಿಐಎಫ್-ಸಂಬಂಧಿತ ಕಾರ್ಯವಿಧಾನಗಳಲ್ಲಿ ಭಾಗವಹಿಸಿದೆ.



ಪರಸ್ಪರ ಗೌರವ, ಒಮ್ಮತ ಮತ್ತು ಪ್ರಾದೇಶಿಕ ಒಗ್ಗಟ್ಟಿಗೆ ಆದ್ಯತೆ ನೀಡುವ "ಪೆಸಿಫಿಕ್ ಮಾರ್ಗ" ವನ್ನು ತೈಪೆ ಇನ್ನೂ ಗೌರವಿಸುತ್ತಿದೆ ಎಂದು ಅಧಿಕಾರಿ ಹೇಳಿದರು. ಪೆಸಿಫಿಕ್ ಸ್ಥಿತಿಸ್ಥಾಪಕತ್ವ ಸೌಲಭ್ಯ ಮತ್ತು ನೀಲಿ ಪೆಸಿಫಿಕ್ ಖಂಡಕ್ಕಾಗಿ ಪಿಐಎಫ್ನ 2050 ಕಾರ್ಯತಂತ್ರ ಸೇರಿದಂತೆ ಪ್ರಾದೇಶಿಕ ಉಪಕ್ರಮಗಳಿಗೆ ತೈವಾನ್ ಕೊಡುಗೆ ನೀಡಿದೆ. ತೈವಾನ್ ಮತ್ತು ಚೀನಾ ನಡುವೆ ಆಯ್ಕೆ ಮಾಡಲು ದೇಶಗಳನ್ನು ಒತ್ತಾಯಿಸುವ ಬದಲು ಪೆಸಿಫಿಕ್ ಆದ್ಯತೆಗಳನ್ನು ಬೆಂಬಲಿಸುವ ಉದ್ದೇಶವನ್ನು ತನ್ನ ನಿಶ್ಚಿತಾರ್ಥವು ಹೊಂದಿದೆ ಎಂದು ತೈಪೆ ಸಮರ್ಥಿಸಿಕೊಂಡಿದೆ. ಆದಾಗ್ಯೂ, ಬೀಜಿಂಗ್ ಹೆಚ್ಚು ಹೆಚ್ಚು ವಿಧ್ವಂಸಕ ವಿಧಾನವನ್ನು ತೆಗೆದುಕೊಳ್ಳುತ್ತಿದೆ ಎಂದು ಅಧಿಕಾರಿ ಆರೋಪಿಸಿದರು. ಚೀನಾದ ಮಿಲಿಟರಿ ಚಟುವಟಿಕೆಗಳು ಮತ್ತು ವಿಸ್ತರಿಸುತ್ತಿರುವ ರಾಜಕೀಯ ಪ್ರಭಾವವು ಪೆಸಿಫಿಕ್ ಸರ್ಕಾರಗಳಲ್ಲಿ ಅವರ ಭದ್ರತೆ ಮತ್ತು ರಾಜಕೀಯ ಸ್ವಾತಂತ್ರ್ಯದ ಬಗ್ಗೆ ಕಳವಳಗಳನ್ನು ಉಂಟುಮಾಡಿದೆ ಎಂದು ವರದಿಯಾಗಿದೆ.


ಕ್ಷಿಪಣಿ-ಪರೀಕ್ಷಾ ಪಾರದರ್ಶಕತೆಯ ಬಗ್ಗೆ ಭಿನ್ನಾಭಿಪ್ರಾಯದಿಂದ ಈ ವಿಷಯವು ಸ್ಪಷ್ಟವಾಗಿದೆ. ಪಲಾವ್ ಅಧ್ಯಕ್ಷ ಸುರಾಂಗೆಲ್ ವಿಪ್ಸ್ ಜೂನಿಯರ್ ಚೀನಾ ಸೇರಿದಂತೆ ಖಂಡಾಂತರ ಕ್ಷಿಪಣಿ ಪರೀಕ್ಷೆಗಳನ್ನು ನಡೆಸುತ್ತಿರುವ ದೇಶಗಳು ಮುಂಚಿತವಾಗಿ ಅಧಿಸೂಚನೆ ಮತ್ತು ಹೆಚ್ಚಿನ ಪಾರದರ್ಶಕತೆಯನ್ನು ಒದಗಿಸುವಂತೆ ಒತ್ತಾಯಿಸಿದರು ಎಂದು ವರದಿಯಾಗಿದೆ. ದಿ ತೈಪೆ ಟೈಮ್ಸ್ ಹೈಲೈಟ್ ಮಾಡಿದಂತೆ ನೌರು ಈ ಪ್ರಸ್ತಾಪವನ್ನು ವಿರೋಧಿಸಿದರು.

ಈ ಘಟನೆಯು ಪೆಸಿಫಿಕ್ ಏಕತೆಗೆ ಹೆಚ್ಚು ಗಣನೀಯ ಸವಾಲನ್ನು ಪ್ರದರ್ಶಿಸಿದೆ ಎಂದು ಅಧಿಕಾರಿ ಹೇಳಿದ್ದಾರೆ, ಬೀಜಿಂಗ್ನೊಂದಿಗೆ ನಿಕಟ ಸಂಬಂಧ ಹೊಂದಿರುವ ಸರ್ಕಾರಗಳು ಭದ್ರತಾ ವಿಷಯಗಳಲ್ಲಿ ಸಾಮೂಹಿಕ ಪ್ರಾದೇಶಿಕ ಸ್ಥಾನಗಳನ್ನು ಅನುಮೋದಿಸಲು ಹಿಂಜರಿಯಬಹುದು ಎಂದು ವಾದಿಸಿದರು, ದಿ ತೈಪೆ ಟೈಮ್ಸ್ ವರದಿ ಮಾಡಿದೆ.

# ಡ್ರೋನ್ ಘಟನೆಯ ನಂತರ ಬರ್ಲಿನ್ ಮೇಲೆ ರಷ್ಯಾದ ವಿದೇಶಾಂಗ ಸಚಿವರ ಆರೋಪ

**ಮಾಸ್ಕೋ:** ಬರ್ಲಿನ್ ಕಾನ್ಸುಲೇಟ್ ಜನರಲ್ ಅವರನ್ನು ಬಾನ್ ನಿಂದ ಹೊರಹಾಕಿ ರಷ್ಯಾದ ಸಾಂಸ್ಕೃತಿಕ ಕೇಂದ್ರವನ್ನು ಮುಚ್ಚಿದ ನಂತರ ಜರ್ಮನಿ ಯುದ್ಧವನ್ನು ಪ್ರಾರಂಭಿಸಲು ಬಯಸುತ್ತಿದೆ ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್ ಆರೋಪಿಸಿದ್ದಾರೆ.

ಕಳೆದ ತಿಂಗಳು ಲೀಪ್ಜಿಗ್ ವಿಮಾನ ನಿಲ್ದಾಣದ ಮೇಲೆ ಡ್ರೋನ್ ದಾಳಿಗೆ ಮಾಸ್ಕೋವನ್ನು ಜರ್ಮನ್ ಸರ್ಕಾರ ಮಂಗಳವಾರ (ಸೆಪ್ಟೆಂಬರ್ 1) ದೂಷಿಸಿದ ನಂತರ ಇದು ಬಂದಿದೆ. ಉಕ್ರೇನಿಯನ್ ಸರಕು ವಿಮಾನದ ಬಳಿಯ ಕಾರ್ಯತಂತ್ರದ ವಿಮಾನ ನಿಲ್ದಾಣದ ಸುರಕ್ಷಿತ ಸರಕು ಕಾರ್ಯಾಚರಣೆ ಪ್ರದೇಶದಲ್ಲಿ ಸ್ಫೋಟಕ ತುಂಬಿದ ಡ್ರೋನ್ ಪತ್ತೆಯಾಗಿದೆ.



ಭಾನುವಾರ ಪ್ರಕಟವಾದ ಸಂದರ್ಶನ ವೊಂದರಲ್ಲಿ, ಲಾವ್ರೊವ್, "ಇದು ಸಾಮಾನ್ಯವಾಗಿ ನಿಜವಾದ ಯುದ್ಧದ ಆರಂಭ. ಅವರು ಕಾನ್ಸುಲೇಟ್ ಜನರಲ್ ಅವರನ್ನು ಬಾನ್ ನಿಂದ ಹೊರಹಾಕಿದ್ದಾರೆ. ಅವರು ಬರ್ಲಿನ್ ನಲ್ಲಿರುವ ರಷ್ಯನ್ ಹೌಸ್ (ಸಾಂಸ್ಕೃತಿಕ ಕೇಂದ್ರ) ಅನ್ನು ಮುಚ್ಚುತ್ತಿದ್ದಾರೆ. ಅವರು ಮತ್ತೆ ಯುದ್ಧವನ್ನು ಬಯಸುತ್ತಾರೆ." ಲಾವ್ರೊವ್ ಜರ್ಮನಿಯನ್ನು ನಾಜಿವಾದಿ ಎಂದು ಆರೋಪಿಸಿದ್ದಾರೆ, "ರಷ್ಯಾದ ನಾಯಕತ್ವವು ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳುತ್ತದೆ" ಎಂದು ಹೇಳಿದರು.

ಡ್ರೋನ್ ಘಟನೆಗೆ ಜರ್ಮನಿ ರಷ್ಯಾವನ್ನು ದೂಷಿಸುತ್ತದೆ:

ಮಂಗಳವಾರ ಪೂರ್ವ ಜರ್ಮನಿಯ ಕಾರ್ಯತಂತ್ರದ ವಿಮಾನ ನಿಲ್ದಾಣದಲ್ಲಿ ಸ್ಫೋಟಕಗಳಿಂದ ತುಂಬಿದ ಡ್ರೋನ್ ಒಳಗೊಂಡ "ಹೈಬ್ರಿಡ್ ದಾಳಿ"ಗೆ ರಷ್ಯಾ "ಕೆಳಮಟ್ಟದ ಏಜೆಂಟ್ಗಳನ್ನು" ಕಳುಹಿಸಿದೆ ಎಂದು ಜರ್ಮನ್ ಸರ್ಕಾರ ಹೇಳಿದೆ.

ಇದಕ್ಕೆ ಪ್ರತಿಕ್ರಿಯೆಯಾಗಿ, ಜರ್ಮನಿ ಬಾನ್ನಲ್ಲಿರುವ ರಷ್ಯಾದ ದೂತಾವಾಸವನ್ನು ಸ್ಥಗಿತಗೊಳಿಸಿತು ಮತ್ತು ಬರ್ಲಿನ್‌ನಲ್ಲಿರುವ ಸಾಂಸ್ಕೃತಿಕ ಕೇಂದ್ರವಾದ ರಷ್ಯನ್ ಹೌಸ್ನ ಒಪ್ಪಂದವನ್ನು ಕೊನೆಗೊಳಿಸಿತು. ಬಳಸಿದ ಡ್ರೋನ್ ತಂತ್ರಜ್ಞಾನ ಮತ್ತು ಇತರ ಗುಪ್ತಚರ ಮಾಹಿತಿಯನ್ನು ಪರಿಶೀಲಿಸಿದ ನಂತರ, ಆಂತರಿಕ ಸಚಿವ ಅಲೆಕ್ಸಾಂಡರ್ ಡೊಬ್ರಿಂಡ್ಟ್, "ಆಗಸ್ಟ್ 4 ರಂದು ಲೀಪ್ಜಿಗ್ನಲ್ಲಿ ನಡೆದ ಹೈಬ್ರಿಡ್ ದಾಳಿಗೆ ರಷ್ಯಾ ಕಾರಣ ಎಂದು ಸರ್ಕಾರ ತೀರ್ಮಾನಿಸಿದೆ" ಎಂದು ಹೇಳಿದರು. "ರಷ್ಯಾದಿಂದ ಮತ್ತಷ್ಟು ಹೈಬ್ರಿಡ್ ದಾಳಿಗಳಿಗೆ ಜರ್ಮನಿ ಗುರಿಯಾಗಿದೆ ಎಂದು ನಾವು ಭಾವಿಸುತ್ತೇವೆ." "ನಾವು ಯುದ್ಧದಲ್ಲಿಲ್ಲ, ಆದರೆ ನಾವು ಹೈಬ್ರಿಡ್ ಯುದ್ಧದ ದೈನಂದಿನ ಗುರಿಯಾಗಿದ್ದೇವೆ" ಎಂದು ಡೊಬ್ರಿಂಡ್ಟ್ ಹೇಳಿದರು.

# ಕಿಮಿ ಆಂಟೊನೆಲ್ಲಿ ಅದ್ಭುತವಾದ ಮೊನ್ಜಾ ಪುನರಾಗಮನದೊಂದಿಗೆ ಇಟಾಲಿಯನ್ ಗ್ರ್ಯಾಂಡ್ ಪ್ರಿಕ್ಸ್‌ನಲ್ಲಿ ಇತಿಹಾಸ ನಿರ್ಮಾಣ


**ಮೊನ್ಜಾ,ಸೆ.6:** ಕಿಮಿ ಆಂಟೊನೆಲ್ಲಿ 2026ರ ಫಾರ್ಮುಲಾ 1 ಆವೃತ್ತಿಯ ಅಸಾಧಾರಣ ಡ್ರೈವ್‌ಗಳಲ್ಲಿ ಒಂದನ್ನು ಗ್ರಿಡ್‌ನಲ್ಲಿ 19 ನೇ ಸ್ಥಾನದಿಂದ ಪ್ರಾರಂಭಿಸಿ ಮೊನ್ಜಾದಲ್ಲಿ ಇಟಾಲಿಯನ್ ಗ್ರ್ಯಾಂಡ್ ಪ್ರಿಕ್ಸ್ ಅನ್ನು ಗೆಲ್ಲುವ ಮೂಲಕ ನೀಡಿದರು. ಮರ್ಸಿಡಿಸ್ ಚಾಲಕನು ಗೆಲುವಿನ ಉದ್ವಿಗ್ನ ಹೋರಾಟದಲ್ಲಿ ತಂಡದ ಸಹ ಆಟಗಾರ ಜಾರ್ಜ್ ರಸೆಲ್ ಅವರನ್ನು ಸೋಲಿಸುವ ಮೊದಲು ಮೈದಾನದಾದ್ಯಂತ ಹೋರಾಡಿದ. ಆಂಟೊನೆಲ್ಲಿ ತನ್ನ ಋತುವಿನ ಹಂಚಿಕೆಯನ್ನು ಮೀರಿದ ಪವರ್-ಯೂನಿಟ್ ಬದಲಾವಣೆಗೆ ಸಂಬಂಧಿಸಿದ ಗ್ರಿಡ್ ಪೆನಾಲ್ಟಿಯನ್ನು ತೆಗೆದುಕೊಂಡ ನಂತರ ಹಿಂಭಾಗದಲ್ಲಿ ಪ್ರಾರಂಭಿಸಿದನು. ಅನಾನುಕೂಲತೆಯ ಹೊರತಾಗಿಯೂ, 20 ವರ್ಷದ ಇಟಾಲಿಯನ್ ತ್ವರಿತವಾಗಿ ಮೈದಾನದ ಮೂಲಕ ಚಲಿಸಿದನು ಮತ್ತು ಗೆಲುವಿಗೆ ಗಂಭೀರ ಸ್ಪರ್ಧಿಯಾದನು. ಚಾರ್ಲ್ಸ್ ಲೆಕ್ಲರ್ಕ್ನ




ಭಾರೀ ಅಪಘಾತದ ನಂತರ ಓಟವು ಆರಂಭಿಕ ಕೆಂಪು ಧ್ವಜದಿಂದ ಅಡ್ಡಿಪಡಿಸಲ್ಪಟ್ಟಿತು, ಇದು ಮೈದಾನವನ್ನು ಮತ್ತೆ ಒಟ್ಟಿಗೆ ತಂದಿತು. ಆಂಟೊನೆಲ್ಲಿ ತನ್ನ ಆವೇಶವನ್ನು ಮುಂದಕ್ಕೆ ಮುಂದುವರಿಸಲು ಮರುಪ್ರಾರಂಭ ಮತ್ತು ನಂತರದ ಯುದ್ಧಗಳನ್ನು ಬಳಸಿಕೊಂಡನು. ಆಂಟೊನೆಲ್ಲಿಯ ಗೆಲುವು ವಿಶೇಷವಾಗಿ ಮಹತ್ವದ್ದಾಗಿತ್ತು ಏಕೆಂದರೆ ಅವರು 1966 ರಲ್ಲಿ ಲೊಡೊವಿಕೊ ಸ್ಕಾರ್ಫಿಯೊಟ್ಟಿಯ ವಿಜಯದ ನಂತರ ಇಟಾಲಿಯನ್ ಗ್ರ್ಯಾಂಡ್ ಪ್ರಿಕ್ಸ್ ಅನ್ನು ಗೆದ್ದ ಮೊದಲ ಇಟಾಲಿಯನ್ ಚಾಲಕರಾದರು. ಅವರ ಗೆಲುವು ಮೊನ್ಜಾದಲ್ಲಿ ಇಟಾಲಿಯನ್ ಹೋಮ್ ವಿಜೇತರಿಗಾಗಿ ಆರು ದಶಕಗಳ ಕಾಯುವಿಕೆಯನ್ನು ಕೊನೆಗೊಳಿಸಿತು. ಮ್ಯಾಕ್ಸ್ ವರ್ಸ್ಟಪ್ಪೆನ್ ಮೂರನೇ ಸ್ಥಾನ ಪಡೆದರು, ನಂತರ ಮೆಕ್ಲಾರೆನ್ನ ಲ್ಯಾಂಡೊ ನಾರ್ರಿಸ್ ಮತ್ತು ಆಸ್ಕರ್ ಪಿಯಾಸ್ಟ್ರಿ.

# ಚೀನಾ ಮಾಸ್ಟರ್ಸ್ ಗೆಲುವು ಏಷ್ಯನ್ ಗೇಮ್‌ಗೆ ನಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ: ಸಾತ್ವಿಕ್-ಚಿರಾಗ್

**ಬೀಜಿಂಗ್:** ಭಾರತದ ಅಗ್ರ ಶ್ರೇಯಾಂಕಿತ ಪುರುಷರ ಡಬಲ್ಸ್ ಜೋಡಿ ಭಾನುವಾರ ಶೆನ್ಜೆನ್ ಅರೆನಾದಲ್ಲಿ ಚೀನಾದ ಹೆ ಜಿ ಟಿಂಗ್ ಮತ್ತು ರೆನ್ ಕ್ಸಿಯಾಂಗ್ ಯು ಅವರನ್ನು 11-21, 21-13, 21-17 ಅಂತರದಿಂದ ಸೋಲಿಸುವ ಮೂಲಕ ತಮ್ಮ ಚೊಚ್ಚಲ ಚೀನಾ ಮಾಸ್ಟರ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಚೀನಾ ಮಾಸ್ಟರ್ಸ್‌ನಲ್ಲಿ ಪುರುಷರ ಡಬಲ್ಸ್ ಪ್ರಶಸ್ತಿಯನ್ನು ಗೆದ್ದ ನಂತರ, ಸಾತ್ವಿಕ್ ಪಂದ್ಯಾವಳಿ ಯಾವಾಗಲೂ ಜೋಡಿಗೆ ಸಕಾರಾತ್ಮಕ ಫಲಿತಾಂಶಗಳನ್ನು ತಂದಿದೆ, ವಿಶೇಷವಾಗಿ ಗಾಯದ ಹಿನ್ನಡೆಗಳ ನಂತರ ಎಂದು ಹೇಳಿದರು.




"ಇಲ್ಲಿ ಆಡುವುದು ಯಾವಾಗಲೂ ಒಳ್ಳೆಯದು. ನಾವು ಯಾವಾಗಲೂ ಗಾಯದಿಂದ ಚೇತರಿಸಿಕೊಂಡು ಇಲ್ಲಿ ಆಡಿದ್ದೇವೆ. 2024 ರಲ್ಲಿ ಒಲಿಂಪಿಕ್ಸ್ ನಂತರ, ನಾವು ಇಲ್ಲಿ ಆಡಿದ್ದೇವೆ ಮತ್ತು ಸೆಮಿಫೈನಲ್ ತಲುಪಿದ್ದೇವೆ. ನಂತರ ಕಳೆದ ವರ್ಷ ನಾವು ಉತ್ತಮ ಸ್ಥಿತಿಯಲ್ಲಿಲ್ಲದಿದ್ದಾಗ ಆಡಿದ್ದೇವೆ, ಆದರೆ ನಾವು ಫೈನಲ್ ತಲುಪಿದ್ದೇವೆ. ಗಾಯದಿಂದ ಚೇತರಿಸಿಕೊಂಡ ನಂತರ ಈ ಪಂದ್ಯಾವಳಿ ನಮಗೆ ಸಾಕಷ್ಟು ಆತ್ಮವಿಶ್ವಾಸವನ್ನು ನೀಡಿದೆ ಎಂದು ನಾನು ಭಾವಿಸುತ್ತೇನೆ" ಎಂದು ಚೀನಾ ಮಾಸ್ಟರ್ಸ್ ಗೆದ್ದ ನಂತರ ಸಾತ್ವಿಕ್ ಮಾಧ್ಯಮಗಳೊಂದಿಗೆ ಮಾತನಾಡಿದರು.

ಪ್ರತಿಷ್ಠಿತ ಸೂಪರ್ 750 ಟೂರ್ನಮೆಂಟ್‌ನಲ್ಲಿ ಎರಡು ಬಾರಿ ರನ್ನರ್ ಅಪ್ ಸ್ಥಾನ ಪಡೆದಿದ್ದ ಭಾರತೀಯ ಜೋಡಿ, ನಿಧಾನಗತಿಯ ಆರಂಭ ಮತ್ತು ದೃಢನಿಶ್ಚಯದ ಚೀನಾದ ಸವಾಲನ್ನು ಮೀರಿ ಋತುವಿನ ಎರಡನೇ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

## ನಮಗೆ ಸಾಕಷ್ಟು ಆತ್ಮವಿಶ್ವಾಸ ನೀಡುತ್ತದೆ: ಸಾತ್ವಿಕ್

**ಭಾರತೀಯ ಪುರುಷರ ಡಬಲ್ಸ್ ಬ್ಯಾಡ್ಮಿಂಟನ್ ಜೋಡಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ತಮ್ಮ ಚೀನಾ ಮಾಸ್ಟರ್ಸ್ ಗೆಲುವು ಮುಂಬರುವ ಏಷ್ಯನ್ ಗೇಮ್‌ಗೆ ಮುಂಚಿತವಾಗಿ ಅವರಿಗೆ ಪ್ರಮುಖ ಆತ್ಮವಿಶ್ವಾಸವನ್ನು ನೀಡಿದೆ ಎಂದು ಹೇಳಿದರು ಮತ್ತು ಏಷ್ಯನ್ ಗೇಮ್ಸ್‌ಗೆ ಮುಂಚಿತವಾಗಿ ಅವರು ತಮ್ಮನ್ನು ತಾವು ತೊಡಗಿಸಿಕೊಳ್ಳುವುದನ್ನು ಮುಂದುವರಿಸುತ್ತಾರೆ ಎಂದು ಹೇಳಿದರು.**